
ಶ್ರೀ ವೀತರಾಗಾಯ ನಮಃ



# ಕರ್ತವ್ಯಪ್ರಕಾಶ

ಮತ್ತು

# ಸಜ್ಜನಚಿತ್ತವಲ್ಲಭಃ

ಹಾಗೂ

# ಅಕಲಂಕ ಚರಿತ್ರೆ ಮತ್ತು ಸ್ತೋತ್ರ



ಪ್ರಕಾಶಕರು :

ಶ್ರೀ ಧರ್ಮಂಣಾ ಪಾಯಪ್ಪ ನರಸಗೊಂಡ

ಆ ಲ ಗೂ ರ. ( ತಾ. ಜಮಖಂಡಿ )

ವೀ. ನಿ. ಸ. ೨೫೦೩ ] 卐 [ ಬೆಲೆ : ಸ್ವಾಧ್ಯಾಯ

ಶ್ರೀ ವೀತರಾಗಾಯ ನಮಃ



# ಕರ್ತವ್ಯಪ್ರಕಾಶ

ಮತ್ತು

# ಸಜ್ಜನಚಿತ್ತವಲ್ಲಭಃ

ಹಾಗೂ

# ಅಕಲಂಕ ಚರಿತ್ರೆ ಮತ್ತು ಸ್ತೋತ್ರ

ಪ್ರಕಾಶಕರು :

ಶ್ರೀ ಧರ್ಮಣ್ಣಾ ಪಾಯಪ್ಪ ನರಸಗೊಂಡ

ಆ ಲ ಗೂ ರ. (ತಾ. ಜಮಖಂಡಿ)

ವೀ. ನಿ. ಸ. ೨೫೦೩ ] 卐 [ ಬೆಲೆ : ಸ್ವಾಧ್ಯಾಯ

**೧. ಕರ್ತವ್ಯಪ್ರಕಾಶ**

ಸಂಪಾದಕರು :

“ಸಾಹಿತ್ಯಾಲಂಕಾರ”

ಶ್ರೀ ಪಂ॥ ಎಸ್. ಚಂದ್ರರಾಜೇಂದ್ರ ಶಾಸ್ತ್ರಿಗಳು

ಮೂಡಬಿದಿರೆ

**೨. ಸಜ್ಜನಚಿತ್ತವಲ್ಲಭಃ**

ಸಂಪಾದಕರು :

ಪಂಡಿತರತ್ನ ಮಹಾವಿದ್ವಾನ್ ನ್ಯಾಯತೀರ್ಥ

ಶ್ರೀ॥ ಎ. ಶಾಂತಿರಾಜ ಶಾಸ್ತ್ರಿಗಳು

ಮೈಸೂರು

**೩. ಅಕಲಂಕ ಚರಿತ್ರೆ ಮತ್ತು ಸ್ತೋತ್ರ**


ಸಂಪಾದಕರು :

ಶ್ರೀ ಎ. ಅ. ಮುಂಟಗಣೀಕರ

ಬನ್ನಿಕೊಪ್ಪ


ಪ್ರಕಾಶಕರು :
ಶ್ರೀ ಧರ್ಮಣ್ಣಾ ಪಾಯಪ್ಪ
ನರಸಗೊಂಡ,
ಆ ಲ ಗೂ ರ.

ಮುದ್ರಕರು :
ಜನತಾ ಪ್ರಿಂಟಿಂಗ್ ಪ್ರೆಸ್,
ಬಾಗಲಕೋಟ.



ಸ್ವಸ್ತಿಶ್ರೀ ೧೦೮ ತಪೋನಿಧಿ ಆಚಾರ್ಯಕಲ್ಪ

ಶ್ರೀ ಸುಬಲಸಾಗರ ಮುನಿಮಹಾರಾಜರು

# ಪ್ರಕಾಶಕರ ಪರಿಚಯ

ಧರ್ಮದಿಂದಾದ ಸಿರಿಯೆಂದು ಸುಖಿಸುತ,
ಧರ್ಮವ ಮರೆಯರುತ್ತಮರು ।
ಧರ್ಮವೇತರದೆಂದು ಭೋಗಕ್ಕೆ ಮರುಳಾಗಿ ಕರ್ಮಗಳಾಚರಿಸುವರು ॥

—ರತ್ನಾಕರ

ಹಿಂದಿನ ಭವದಲ್ಲಿ ಧರ್ಮಕಾರ್ಯ ಮಾಡಿ ಪುಣ್ಯಸಂಚಯ ಮಾಡಿದ್ದರಿಂದ ಇಂದು ಈ ಸಿರಿ ಸಂಪತ್ತು ಸುಖ ಸೌಖ್ಯ ಸರ್ವ ಸೌಭಾಗ್ಯಗಳು ಲಭಿಸಿರುತ್ತವೆ. 'ಧರ್ಮವು ನಮ್ಮನ್ನು ತ್ರಿಕಾಲದಲ್ಲಿ ಕಾಯುತ್ತದೆ.' ಎಂಬುದನ್ನು ತಿಳಿದ ಧರ್ಮಾತ್ಮರು ಧರ್ಮವನ್ನು ಎಂದೂ ಮರೆಯುವದಿಲ್ಲ. ಧರ್ಮಕ್ಕಾಗಿ ತನು, ಮನ, ಧನವನ್ನು ಅರ್ಪಿಸಿ ಅಕ್ಷಯಸುಖ ಪ್ರಾಪ್ತಿಮಾಡಿಕೊಳ್ಳುವದಕ್ಕಾಗಿ ಸ್ವಾಧ್ಯಾಯ, ಜಪ, ತಪ, ದಾನ ಧರ್ಮಗಳಲ್ಲಿ ತಮ್ಮ ಸಮಯವನ್ನು ವಿನಿಯೋಗಿಸುವರು. ಧರ್ಮವು ಸದ್ಗತಿಗೆ ಕಾರಣವಾಗಿದೆಯೆಂದು ತಿಳಿದ ಭವ್ಯ ಜೀವಿಗಳು ಭವರೋಗವನ್ನು ನಾಶ ಮಾಡಿಕೊಳ್ಳುವರು. ಅಂಥವರಿಗೆ ಮೋಕ್ಷಲಕ್ಷ್ಮಿಯು ಮಾಲೆಯನ್ನು ಹಾಕುವಳು.

ಎಲ್ಲಿಯ ಧರ್ಮ !, ಎಲ್ಲಿಯ ದೇವರು ! ಅನ್ನುವವರು ಕ್ಷಣಿಕವಾದ ಸಂಸಾರದ ಮೋಹದಲ್ಲಿ ಬೀಳುವರು. ಮೋಹನಿಯ ಕರ್ಮದ ಬಂಧನದಲ್ಲಿ ಸಿಲುಕಿ ಚತುರ್ಗತಿ ಭ್ರಮಣರೂಪಿ ಸಂಸಾರಚಕ್ರದಲ್ಲಿ ಸಿಕ್ಕು ಅಲೆದಾಡುವರು. ಅದರಿಂದ ನರಕಗತಿ ಬಂಧಿಸಿ ಅಸಹ್ಯವಾದ ದುಃಖವನ್ನು ಅನುಭವಿಸುವರು. ಕರ್ಮದ ಮುಂದೆ ಯಾರ ಆಟವೂ ನಡೆಯುವದಿಲ್ಲ. ಅನಂತ ಶಕ್ತಿಶಾಲಿಯಾದ ಆತ್ಮನು ಕೈವಲ್ಯ ಪದವಿಯನ್ನು ಪಡೆಯಲಿಕ್ಕಾಗದೆ ಕರ್ಮದ ಸಂಪರ್ಕದಿಂದ ದುರ್ಗತಿಯನ್ನು ಹೊಂದಿ ದಿಕ್ಕುಗಾಣದೆ ಜ್ಞಾನಹೀನನಾಗಿ ಎಂಬತ್ತುನಾಲ್ಕು ಲಕ್ಷ ಯೋನಿಗಳಲ್ಲಿ ಹುಟ್ಟಿ ಸಾಯುತ್ತಾನೆ. ಆದ್ದರಿಂದ ಸದ್ಗತಿ ಪ್ರಾಪ್ತಿಗಾಗಿ ನಮ್ಮ ಶಕ್ತಿಗನುಸಾರ ನಾಲ್ಕು ಪ್ರಕಾರದ ದಾನವು ಅಂದರೆ ಆಹಾರ, ಅಭಯ, ಔಷಧ, ಶಾಸ್ತ್ರರೂಪದಿಂದ ದಾನಗಳನ್ನಿತ್ತು

ಪುಣ್ಯ ಸಂಪಾದನೆ ಮಾಡಿ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳ ಬೇಕು. ಮಾನವ ಜನ್ಮ ಸಿಗುವದು ಅತಿ ದುರ್ಲಭವು.

ಉಣ್ಣದೊಡವೆಯು ಗಳಿಸಿ ಮಣ್ಣೊಳಗೆ ಬಚ್ಚಿಟ್ಟು ।
ಚೆನ್ನಾಗಿ ನೆಲವ ಸಾರಿಸನ ।
ಬಾಯೊಳಗೆ ಮಣ್ಣು ಕಾಣಯ್ಯ ಸರ್ವಜ್ಞ ॥

ಆಯು ತೀರಿದ ಮೇಲೆ ಸಿರಿ ಸಂಪತ್ತನ್ನೆಲ್ಲ ಬಿಟ್ಟು ಒಂದು ದಿನ ಹೋಗ ಬೇಕಾಗುವದು. ಈ ಬಾಹ್ಯ ಚಕ್ಷುವಿಗೆ ಕಾಣುವ ಎಲ್ಲ ವಸ್ತುಗಳು ಸ್ಥಿರ ವಲ್ಲವು ಕ್ಷೀಣಮೋಹಿಯಾಗಿ ಆತ್ಮಕಲ್ಯಾಣ ಮಾಡಿಕೊಳ್ಳುವದು ಯೋಗ್ಯ. ಧನ ಸಂಪಾದನೆಗಿಂತ ಪುಣ್ಯ ಸಂಪಾದನೆ ಮಿಗಿಲು. ಕ್ಷಣಭಂಗುರವಾದ ಸಂಸಾರದಲ್ಲಿ ಧನ ಗಳಿಸುವದು ಮುಖ್ಯ; ಆದರೆ ಲಕ್ಷ್ಮಿಯು ಸ್ಥಿರವಲ್ಲ; ಯಾವಾಗ್ಗೆ ಬರುವಳೋ, ಯಾವಾಗ್ಗೆ ಹೋಗುವಳೋ ತಿಳಿಯಲಾರದು. ಅವಳ ಬೆನ್ನು ಹತ್ತಿದವರ ಮನಸ್ಸಿಗೆ ಎಂದೂ ತೃಪ್ತಿಯಾಗಲಾರದು. ಸಮಾ ಧಾನವೂ ಆಗದು. ಸಂಪಾದಿಸಿದ ಸಂಪತ್ತಿಯನ್ನು ಬಿಟ್ಟು ಪರಲೋಕಕ್ಕೆ ಹೋಗುವಾಗ್ಗೆ ಆರ್ತ ರೌದ್ರ ಧ್ಯಾನದಿಂದ ಸರ್ಪ, ಹೆಗ್ಗಣಾಗಿ ಹುಟ್ಟ ಬೇಕಾಗುವದು. ಆದ್ದರಿಂದ ತನ್ನ ಆಯುಷ್ಯದಲ್ಲಿ ಧರ್ಮಕ್ಕಾಗಿ, ಶಕ್ತಿಗನು ಸಾರವಾಗಿ ದಾನಮಾಡುವುದನ್ನು ಮರೆಯಬಾರದು. ಎಷ್ಟೋ ಪುಣ್ಯಾತ್ಮರು ಪುಣ್ಯ ಸಂಪಾದನೆ ಹೇಗೆ ಮಾಡಬೇಕೆಂಬುದನ್ನು ಗಮನಿಸುತ್ತಿರಬೇಕು.

ಸ್ವಸ್ತಿ ಶ್ರೀ ೧೦೮ ತಪೋನಿಧಿ ಆಚಾರ್ಯಕಲ್ಪ ಸುಬಲಸಾಗರ ಮಹಾ ರಾಜರವರ ಚಾತುರ್ಮಾಸ ಆಲಗೂರಲ್ಲಿ ವಾಸ್ತವ್ಯವಿದ್ದು ಸಂಘದೊಳಗೆ ಸ್ವಸ್ತಿ ಶ್ರೀ ೧೦೮ ಧರಸೇನ ಮಹಾರಾಜರು, ೧೦೫ ಶೃತಮತಿ ಆರ್ಯಿಕಾ, ೧೦೫ ಜಯಸೇನ ಮಹಾರಾಜರು, ೧೦೫ ವೃಷಭಮತಿ ಅಮ್ಮಾ, ೧೦೫ ಅಜಿತಮತಿ ಅಮ್ಮಾ, ಪಾಯಪ್ಪಾ, ಭೂಪಾಲ ಬ್ರಹ್ಮಚಾರಿ, ಕಮಲಾ, ಸುಶಿಲಾ, ಅನಂತಮತಿ, ಕಸ್ತೂರಿ, ಶಾಂತಾ, ಕಮ್ಮು, ಬ್ರಹ್ಮಚಾರಿಣಿಯರ ವಾಸ್ತವ್ಯ ವಿರುತ್ತದೆ. ಈ ಸಂಘ ಆಲಗೂರಿಗೆ ಆಗಮಿಸಿದ್ದು ಎಲ್ಲ ಶ್ರಾವಕ ಶ್ರಾವಿಕೆ ಯರಿಗೆ ಒಂದು ಸುಯೋಗವೇ ಸರಿ; ಅವರ ಪಾದ ಸ್ಪರ್ಶದಿಂದ ಎಲ್ಲರೂ

ಪುನೀತರಾದರು. ಮುನಿಗಳ ಉಪದೇಶದಿಂದ ಜೈನ ಧರ್ಮದ ತತ್ವಸ್ವರೂಪ ವನ್ನು ತಿಳಿದು ದಾನ ಮಾಡುವ ವಿಷಯವು ಅಂತಃಕರಣದಲ್ಲಿ ಬಂದು ಶಾಸ್ತ್ರಕ್ಕೆ ಜ್ಞಾನ ದಾನದ ಉದಾರ ಹಸ್ತಗಳನ್ನು ಮುಂದೆ ಮಾಡಿದರು.

ಈ ಪುಸ್ತಕದ ಹೆಸರೇ "ಕರ್ತವ್ಯಪ್ರಕಾಶ" ಎಂಬುದು ಯೋಗ್ಯವಾದ್ದಿದೆ. ಮಾನವನ ಕರ್ತವ್ಯವು ನಾಲ್ಕು ಪ್ರಕಾರದ ದಾನವೇ ಮುಖ್ಯ ಕರ್ತವ್ಯ, ಅವರಲ್ಲಿ ಕರ್ತವ್ಯಪ್ರಕಾಶವೆಂಬ ಶಾಸ್ತ್ರವನ್ನು ಛಾಪಿಸುವ ಕಾರ್ಯ ಮಹಾವೀರ ನಿರ್ವಾಣ ಸಂವತ್ಸರ ೨೪೩೪, ಇಸವಿ ಸನ್ ೧೯೦೭ ರಲ್ಲಿ ಚಾತುರ್ಮಾಸದ ಸಮಯ ಆಹಾರ, ಅಭಯದಾನದಲ್ಲಿ ಸಾಧುಗಳಿಗೆ ವಸತಿಕಾ ಸ್ಥಾನವನ್ನೂ ಮಾಡಿದರು. ಔಷಧ ದಾನವೂ ಆಹಾರದಲ್ಲಿ ಗಣನೆಗೆ ತಂದು ಶಾಸ್ತ್ರಕ್ಕೆ ಸಹಾಯ ಮಾಡಿದವರ ಧರ್ಮಾತ್ಮರ ಸ್ಮರಣೆಯು ಪದ್ಮಶ್ರೀಯವರು ಉದಾರ ಮನಸ್ಸಿನಿಂದ ಈ ಪುಸ್ತಕಕ್ಕೆ ಬೇಕಾಗುವ ದ್ರವ್ಯವನ್ನು ಸಹಾಯ ಮಾಡಿದರು. ಇವರಿಗೆ ಧರ್ಮ ಕಾರ್ಯಕ್ಕೆ ಸಹಾಯಕರಾದ ಧರ್ಮಣ್ಣಾ ಪಾಯಪ್ಪಾ ನರಸಗೊಣ್ಣವರ ಇವರಾದರೂ ಉದಾರ ಮನಸ್ಸಿನವರಿರುವುದರಿಂದ ಇವರು ತಮ್ಮ ತಂಗಿಯವರಾದ ಪದ್ಮಶ್ರೀಯವರಿಗೆ ಉದಾರತನದಿಂದ ಸಿಖರಜಿ ತೀರ್ಥರಾಜ ಮತ್ತು ಸಿದ್ಧಕ್ಷೇತ್ರಗಳ ದರ್ಶನವೂ, ದಕ್ಷಿಣದ ಅತಿಶಯ ಕ್ಷೇತ್ರದ ದರ್ಶನವೂ ಮತ್ತು ಈ ವರ್ಷ ಭಾದ್ರಪದ ಮಾಸದಲ್ಲಿ ಷೋಡಶ ಕಾರಣ ಭಾವನಾ ದಶ–ಲಕ್ಷಣ ನೋಪಿಗಳನ್ನೂ ಮಾಡಿರುವರು. ತಮ್ಮ ಮಾನವ ಜನ್ಮದ ಸಫಲತೆಗಾಗಿ ಈ ಚಾತುರ್ಮಾಸದಲ್ಲಿ ನಿತ್ಯ ಆಹಾರ ಔಷಧ ದಾನವೂ ನಡೆದು, ವಸತಿಕಾ ಸಂಬಂಧ ಗುಂಫಾ ಕಟ್ಟುವ ಕೆಲಸಕ್ಕೆ ಊರವರೆಲ್ಲರೂ ಕೂಡಿ ಕಾರ್ಯ ಕರ್ತೃತ್ವದಲ್ಲಿ ತತ್ಪರರಾದರು. ಇದೇ ಪ್ರಕಾರ ಇವೇ ಊರಿನ ಸತ್ತ್ಯಪ್ಪಾ ಪೈಲವಾನ ಎಲಗುದರೆ ಇವರ ಚಿರಂಜೀವಿ ಸುಂದರಾಬಾಯಿಯವರು ಉದಾರ ಮನಸ್ಸಿನಿಂದ ೩ ಗುಂಟೆ ಜಾಗಾ ಕೊಟ್ಟು ಮಹಾನ್ ಲಾಭ ಮಾಡಿಕೊಂಡರು. ಈ ಊರ ಜನರೆಲ್ಲಾ ಧರ್ಮಪ್ರೀಯರೆಂದು ಅನಿಸುವದು ಪಾಯಪ್ಪಾ ಇವರ ಧರ್ಮಪತ್ನಿ ಸಾತವ್ವಾ ನರಸಗೊಣ್ಣವರ ಇವರ ಕುಲದೀಪ ಧರ್ಮಣ್ಣಾ, ಭೂಪಾಲ, ತವನಪ್ಪಾ ಇವರು ಮೂರು ಜನರು ಅಕ್ಕಾತರಯಿ, ಗಂಗವ್ವಾ, ದಾನಕ್ಕೆ ಕಾರಣರಾದ ಪದ್ಮಾವತಿ ಇವರೇ ಈ ಗ್ರಂಥಕ್ಕೆ

ಮುಖ್ಯರು. ಹೀಗೆ ಆರು ಜನ ಮಕ್ಕಳಾದ ಪಾಯಪ್ಪನ ಮನೆಯ ಸಂಸಾರವು ಪರಂಪರ ಉದ್ಧಾರಕ್ಕೆ ಕಾರಣವಾದದ್ದಂದು ಇವರ ಬಂಧು ಬಾಂಧವರನ್ನು ಧರ್ಮಾನುರಾಗಿಗಳನ್ನಾಗಿ ಮಾಡಲು ಯತ್ನಿಸುವರು. ಇವರಿಗೆ ಜಿನೇಂದ್ರನು ಆಯುರಾರೋಗ್ಯವನ್ನು ಕೊಟ್ಟು ಸದ್ಧರ್ಮಕ್ಕಾಗಿ ದುಡಿಯುವ ಶಕ್ತಿಯನ್ನು ದಯಪಾಲಿಸಲಿ.

ಇದರಂತೆ ಸ್ವಸ್ತಿ ಶ್ರೀ ೧೦೮ ತಪೋನಿಧಿ ಆಚಾರ್ಯಕಲ್ಪ ಸುಬಲಸಾಗರ ಮುನಿ ಮಹಾರಾಜರು ಇವರೆಲ್ಲರಿಗೂ ಆಯುರಾರೋಗ್ಯವು ಲಭಿಸಿ ಆತ್ಮ-ಕಲ್ಯಾಣವಾಗಲಿ, ಪುನಃ ಮುಂದೆ ಪರಂಪರ ಧರ್ಮಸೇವೆಯಲ್ಲಿಯೇ ಸದ್ಭಾವನೆ ಬೆಳೆದು ಸದ್ಧರ್ಮ ವೃದ್ಧಿಯಾಗಲೆಂದು ಹಾರೈಸುವೆವು.

ಇಂತಿ ಶುಭ ಮಂಗಲವು. ಸದ್ಧರ್ಮ ವೃದ್ಧಿರಸ್ತು ಆಶೀರ್ವಾದವು.

ಸಹಾಯಕರು



ಶ್ರೀಮತಿ ಪದ್ಮಾವತಿ ಜಿನದತ್ತ ಮಗದುಮ್

ಓಂ

ಶ್ರೀಮದ್ವೀರಜಿನೇಂದ್ರಾಯ ನಮಃ

# ಕ ರ್ತ ವ್ಯ ಪ್ರ ಕಾ ಶ

**ನಮಃ ಶ್ರೀವರ್ಧಮಾನಾಯ ನಿರ್ಧೂತಕಲಿಲಾತ್ಮನೇ ।**
**ಸಾಲೋಕಾನಾಂ ತ್ರಿಲೋಕಾನಾಂ ಯದ್ವಿದ್ಯಾ ದರ್ಪಣಾಯತೇ ॥**

—ಸ್ವಾಮಿ ಸಮಂತಭದ್ರಾಚಾರ್ಯಃ

ಕರ್ಮಕಲಂಕದ ನಿರ್ಮೂಲನದಿಂದ ಪ್ರಾದುರ್ಭವಿಸಿದ ಸಕಲ ಪ್ರತ್ಯಕ್ಷ ಕೇವಲಜ್ಞಾನದಿಂದ ಲೋಕಾಲೋಕಗಳಲ್ಲಿರುವ ಸಮಸ್ತ ದ್ರವ್ಯಗಳನ್ನೂ ಅವುಗಳ ಭೂತಭವಿಷ್ಯದ್ವರ್ತಮಾನಕಾಲ ಸಂಬಂಧಿ ಸಮಸ್ತಪರ್ಯಾಯಗಳನ್ನೂ ಕನ್ನಡಿಯಲ್ಲಿ ತೋರುವ ಪ್ರತಿಬಿಂಬದಂತೆ ಏಕಕಾಲದಲ್ಲಿ ತಿಳಿಯುವವರೂ ಸಮವಸರಣಾದಿ ಬಾಹ್ಯಸಂಪತ್ತಿನಿಂದಲೂ ಅನಂತಜ್ಞಾನಾದಿ ಅಭ್ಯಂತರಸಂಪತ್ತಿನಿಂದಲೂ ಯುಕ್ತರೂ ಆದ ಶ್ರೀ ವರ್ಧಮಾನ ಜಿನೇಂದ್ರರನ್ನು ಭಕ್ತಿಯಿಂದ ವಂದಿಸಿ ಮಾನವ ಕರ್ತವ್ಯವನ್ನು ನಿರೂಪಿಸುವ " ಕರ್ತವ್ಯಪ್ರಕಾಶ " ವೆಂಬೀ ಸಂಗ್ರಹ ಗ್ರಂಥವನ್ನು ಪ್ರಾರಂಭಿಸುತ್ತೇನೆ.

**ಧರ್ಮಃ ಸರ್ವಸುಖಾಕರೋ ಹಿತಕರೋ ಧರ್ಮಂ**
**ಬುಧಾಶ್ಚಿನ್ವತೇ ।**
**ಧರ್ಮೇಣೈವ ಸಮಾಪ್ಯತೇ ಶಿವಸುಖಂ ಧರ್ಮಾಯ**
**ತಸ್ಮೈ ನಮಃ ॥**

**ಧರ್ಮಾನ್ನಾಸ್ತ್ಯಪರಃ ಸುಹೃದ್ಭವಭೃತಾಂ ಧರ್ಮಸ್ಯ**
**ಮೂಲಂ ದಯಾ ।**
**ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇ ಧರ್ಮ !**
**ಮಾಂ ಪಾಲಯ ॥**

ಧರ್ಮವು ಸಮಸ್ತ ಇಹಪರಸುಖಗಳ ಉತ್ಪತ್ತಿಗೆ ಸ್ಥಾನವಾಗಿದೆ. ಸರ್ವಪ್ರಾಣಿಗಳಿಗೆ ಹಿತಕರವಾಗಿದೆ. ಜ್ಞಾನಿಗಳು ಧರ್ಮವನ್ನು ಆಶ್ರಯಿಸುತ್ತಾರೆ. ಧರ್ಮದಿಂದಲೇ ಮೋಕ್ಷಸುಖವು ಲಭಿಸುತ್ತದೆ. ಅಂತಹ ಧರ್ಮಕ್ಕೆ ನಮಸ್ಕಾರವು. ಸಂಸಾರೀ ಜೀವರಿಗೆ ಧರ್ಮಕ್ಕಿಂತಲೂ ಹೆಚ್ಚಿನ ಮಿತ್ರನಿಲ್ಲ. ದಯೆಯು ಧರ್ಮದ ಮೂಲವಾಗಿದೆ. ನಾನು ಪ್ರತಿದಿನವೂ ಧರ್ಮದಲ್ಲಿ ಮನಸ್ಸಿಡುತ್ತೇನೆ. ಧರ್ಮವೇ ! ನನ್ನನ್ನು ರಕ್ಷಿಸು.

## — ಕರ್ತವ್ಯ —

ವಿಶ್ವದಲ್ಲಿ ಕಾಣಲ್ಪಡುತ್ತಿರುವ ಎಲ್ಲ ಆವಿಷ್ಕಾರಗಳೂ ಮಾನವನ ಸೂಕ್ಷ್ಮವಿಚಾರಗಳ ಪ್ರತ್ಯಕ್ಷರೂಪಗಳಾಗಿವೆ ಅರ್ಥಾತ್ ವಿವಿಧ ಯಂತ್ರಗಳು, ಶಸ್ತ್ರಗಳು, ವಾಯುವಿಮಾನ, ರೇಡಿಯೋ ಮೊದಲಾದ ವಸ್ತುಗಳ ಆವಿಷ್ಕಾರವು ಮನುಷ್ಯನ ಅದೃಶ್ಯ-ಗುಪ್ತ ಇಚ್ಛಾಶಕ್ತಿಯ ವ್ಯಕ್ತಸ್ವರೂಪಗಳು ಹಾಗೂ ಕಾರ್ಯಗಳು.

ಅದರಂತೆಯೇ ಜೀವನದ ಶುಭಾಶುಭಪ್ರವೃತ್ತಿಗಳು ಶುಭಾಶುಭ ಕರ್ಮಗಳಾಗಿರುತ್ತವೆ. ಶುಭಪ್ರವೃತ್ತಿಗಳಿಂದ ಪುಣ್ಯಕರ್ಮಗಳೂ ಅಶುಭಪ್ರವೃತ್ತಿಗಳಿಂದ ಪಾಪಕರ್ಮಗಳೂ ಉಂಟಾಗುತ್ತವೆ. ಸುಖ ದುಃಖಗಳು ಮನುಷ್ಯನು ತನ್ನ ಶುಭಾಶುಭಪ್ರವೃತ್ತಿಗಳಿಂದ ಸಂಪಾದಿಸಲ್ಪಟ್ಟ ಶುಭಾಶುಭ (ಪುಣ್ಯ-ಪಾಪ) ಕರ್ಮಗಳ ಫಲಗಳಾಗಿವೆ.

ಒಂದು ದೃಷ್ಟಿಯಿಂದ ನೋಡಿದರೆ ಸುಖದುಃಖಗಳೆರಡೂ ಉಪಾದೇಯ ವಾದವುಗಳೆಂದು ತಿಳಿಯಬೇಕಾಗುತ್ತದೆ. ಅವಿವೇಕಿಯಾದ ಮನುಷ್ಯನ ಸುಖವು ಆತನ ಮನಸ್ಸನ್ನು ವೈಭವ ವಿಲಾಸ ಹಾಗೂ ಸ್ವಾರ್ಥದ ಕಡೆಗೆಳೆದು ಆತನ ಅಧಃಪತನಕ್ಕೆ ಕಾರಣವಾಗುವುದುಂಟು. ನಮ್ಮ ಪ್ರಾಚೀನ ಇತಿಹಾಸವನ್ನು ನೋಡಿದರೆ ಮಹಾಪುರುಷರು ಸುಖಸಂಪತ್ತಿ ಹಾಗೂ ಸ್ತುತಿಗಿಂತಲೂ ದುಃಖ ವಿಪತ್ತಿ ಹಾಗೂ ನಿಂದೆಯಿಂದಲೇ ಜ್ಞಾನಿಗಳೂ ಪ್ರಭಾವಶಾಲಿಗಳೂ ಪ್ರಗತಿಶೀಲರೂ ಆಗಿದ್ದರೆಂದು ತಿಳಿದುಬರುತ್ತದೆ

ಇಂದು ವಿಶ್ವದ ಸಮಸ್ತಜೀವಿಗಳಲ್ಲಿ ಕಂಡುಬರುತ್ತಿರುವ ರಾಜ-ಸೇವಕ, ಧನಿಕ-ನಿರ್ಧನಿ, ಸುಖಿ-ದುಃಖಿ, ಇರುವೆ-ಆನೆ ಮೊದಲಾದ ಅಸಂಖ್ಯಭೇದಗಳು ಆಯಾ ಜೀವರಲ್ಲಿ ಅನೇಕ ಜನ್ಮಗಳಲ್ಲುಂಟಾದ ಇಚ್ಛೆಗಳ ಮೂರ್ತಸ್ವರೂಪಗಳಾಗಿವೆ. ಅಧಮ ಮನುಷ್ಯನಾಗಲಿ, ಅವತಾರೀ ಪುರುಷನಾಗಲಿ ಆತನು ತನ್ನ ಪೂರ್ವಜನ್ಮದ ಇಚ್ಛೆಗಳ ಮೂರ್ತಸ್ವರೂಪನಾಗಿರುತ್ತಾನೆ. ಎಲ್ಲರಿಗೂ ತಮ್ಮ ಇಚ್ಛಾನುಸಾರವಾದ ಸ್ವರೂಪವು ಪ್ರಾಪ್ತವಾಗುತ್ತದೆ. ಭೂತಕಾಲದ ಇಚ್ಛೆಗಳ ಸ್ವರೂಪವು ವರ್ತಮಾನಕಾಲದಲ್ಲೂ, ವರ್ತಮಾನಕಾಲದ ಇಚ್ಛೆಗಳ ಸ್ವರೂಪವು ಭವಿಷ್ಯತ್ಕಾಲದಲ್ಲೂ ಮೂರ್ತರೂಪವನ್ನು ಪಡೆಯುತ್ತದೆ. ಹೀಗೆ ಎಂಬತ್ತನಾಲ್ಕು ಲಕ್ಷ ಯೋನಿಗಳಲ್ಲಿ ಜನ್ಮತಾಳುವ ಸರ್ವಜೀವರೂ ಅವರವರ ಹಿಂದಿನ ಜನ್ಮಗಳ (ಭೂತಕಾಲದ) ಇಚ್ಛಾವಿಶೇಷಗಳ ಮೂರ್ತಸ್ವರೂಪರಾಗಿರುತ್ತಾರೆ. ಈ ಕಾರಣದಿಂದ ವರ್ತಮಾನ ಸಮಯದಲ್ಲುಂಟಾಗುವ ಇಷ್ಟಾನಿಷ್ಟ ಸಂಯೋಗಗಳಿಗಾಗಿ ಹರ್ಷ, ವಿಷಾದ, ಈರ್ಷ್ಯೆ, ಶೋಕಾದಿಗಳನ್ನು ಮಾಡುವುದು ವ್ಯರ್ಥ. ಏಕೆಂದರೆ ಭೂತಕಾಲದ ವಿಷಯದಲ್ಲಿ ಯಾವ ಸುಧಾರಣೆ

ಯನ್ನೂ ಮಾಡಲು ಸಾಧ್ಯವಿಲ್ಲ. "**ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್**" ಎಂಬಂತೆ ಹಿಂದೆ ಮಾಡಿದ ಕರ್ಮಗಳ ಫಲವನ್ನು ಇಂದು ಅನುಭವಿಸಲೇಬೇಕು. ಆದರೆ ಮುಂದಿನ ಜೀವನದ ರಚನೆಯು ನಮ್ಮ ಕೈಯಲ್ಲಿದೆ. ಭವಿಷ್ಯದಲ್ಲಿ ಸ್ವರ್ಗೀಯ ನಾರಕೀಯ ಪಾಶವಿಕ ಹಾಗೂ ಮಾನುಷಿಕ ಜೀವನಗಳಲ್ಲಿ ಯಾವುದು ನಮಗೆ ಪ್ರಿಯವಾಗಿರುವುದೋ ಅಂತಹ ಜೀವನವನ್ನು ಪಡೆಯಲು ಅವಿಶ್ರಾಂತ ಪ್ರಯತ್ನವನ್ನು ಮಾಡಬಹುದು. ಮನುಷ್ಯನಿಗೆ ತನ್ನ ಇಚ್ಛೆ ಅಥವಾ ಪರಿಣಾಮಕ್ಕೆ ವಿರುದ್ಧವಾಗಿ ಯಾವುದೂ ದೊರೆಯಲಾರದು. ಆದುದರಿಂದ ಮನುಷ್ಯನು ಹಿತ-ಅಹಿತ, ಕೃತ್ಯ-ಅಕೃತ್ಯಗಳನ್ನು ಚೆನ್ನಾಗಿ ವಿಚಾರಮಾಡಿ ಪ್ರತಿಯೊಂದು ಕಾರ್ಯವನ್ನೂ ಮಾಡಬೇಕು. ಕರ್ತವ್ಯವೇ ಧರ್ಮವು. ಅಕರ್ತವ್ಯವೇ ಅಧರ್ಮವು.

ಕಾರ್ಯದಿಂದ ಮನಸ್ಸಿನ ಶಕ್ತಿಯು ಪ್ರಕಟವಾಗುತ್ತದೆ ಅಥವಾ ಮಾನಸಿಕ ಶಕ್ತಿಯನ್ನು ಪ್ರಕಟಗೊಳಿಸುವುದೇ ಕಾರ್ಯವು. ಎಲ್ಲ ಕಾರ್ಯಗಳಿಗೂ ಕಾರಣಗಳಿರುತ್ತವೆ. ಕಾರಣದ ಹೊರತು ಕಾರ್ಯವಾಗಲಾರದು. ಇಂದಿನ ಜನರು ಹೆಚ್ಚಾಗಿ ಮಾನಸನ್ಮಾನ ಹಾಗೂ ಧನದ ಪ್ರಾಪ್ತಿಗಾಗಿಯೇ ಕಾರ್ಯನಿರತರಾಗಿರುವುದು ಕಂಡುಬರುತ್ತದೆ.

ಜಗತ್ತಿನ ಮನುಷ್ಯರ ಆಕೃತಿಗಳು ಬೇರೆ ಬೇರೆಯಾಗಿರುವಂತೆ ಅವರ ಇಚ್ಛೆಗಳೂ ಬೇರೆ ಬೇರೆಯಾಗಿರುತ್ತವೆ. ಸಂಪೂರ್ಣ ಒಂದೇ ಆಕಾರವುಳ್ಳ ಇಬ್ಬರು ಪುರುಷರಾಗಲಿ ಸ್ತ್ರೀಯರಾಗಲಿ ಕಾಣಸಿಗುವುದು ದುರ್ಲಭ. ಆಕೃತಿಯಲ್ಲೆಲ್ಲಾದರೂ ಅಲ್ಪಸ್ವಲ್ಪ ಸಮಾನತೆಯು ಕಂಡುಬಂದರೂ ಅವರ ಇಚ್ಛೆಗಳಲ್ಲಿ ಆಕಾಶಪಾತಾಳದಷ್ಟು ಅಂತರವಿರುತ್ತದೆ. ಭಾರತೀಯರು ಕೀರ್ತಿಗಾಗಿ ಕಾರ್ಯವನ್ನು ಮಾಡುವಂತೆ ಚೀನೀ

ಯರೂ ಕೀರ್ತಿಗಾಗಿಯೇ ಕಾರ್ಯತತ್ಪರರಾಗುತ್ತಾರೆ. ಆದರೆ ಭಾರತೀಯರ ಕಾರ್ಯದಲ್ಲೂ ಚೀನೀಯರ ಕಾರ್ಯದಲ್ಲೂ ಬಹಳ ಅಂತರವಿದೆ. ಚೀನದ ಮನುಷ್ಯರು ತಮ್ಮ ಮರಣದನಂತರ ಉಂಟಾಗ ಬಹುದಾದ ಕೀರ್ತಿಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಅವರಲ್ಲಿ ಮರಣದನಂತರ ಅವರು ಹಿಂದೆ ಮಾಡಿರುವ ಉತ್ತಮ ಕಾರ್ಯ ಗಳಿಗಾಗಿ ಸನ್ಮಾನ್ಯ ಪದವಿಗಳು ಕೊಡಲ್ಪಡುತ್ತವೆ. ಭಾರತೀಯರು ತಮ್ಮ ಜೀವಿತಕಾಲದಲ್ಲುಂಟಾಗಬಹುದಾದ ಕೀರ್ತಿ, ಅಧಿಕಾರ ಮೊದ ಲಾದವುಗಳ ಲಾಲಸೆಯಿಂದ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಇಂದು ಕೆಲವರು ದೊಡ್ಡ ದೊಡ್ಡ ಪದವಿಗಳನ್ನು ಪಡೆಯುವದಕ್ಕಾಗಿ ನ್ಯಾಯ-ಅನ್ಯಾಯಗಳ ಪರಿವೆಯಿಲ್ಲದೆ ಅವಿಶ್ರಾಂತ ಪ್ರಯತ್ನವನ್ನು ಮಾಡುತ್ತಾರೆ ಮತ್ತು ಆ ಪ್ರಯತ್ನವು ಸಫಲವಾದರೆ ಸಂತೋಷವನ್ನೂ ನಿಷ್ಫಲವಾದರೆ ಪರಿತಾಪವನ್ನೂ ಹೊಂದುತ್ತಾರೆ. ಹೀಗೆ ಮನುಷ್ಯರ ಆಕೃತಿಗಳು ಭಿನ್ನ ಭಿನ್ನವಾಗಿರುವಂತೆ ಅವರ ಪ್ರವೃತ್ತಿಗಳೂ ಭಿನ್ನ ಭಿನ್ನವಾಗಿರುತ್ತವೆಂಬುದು ಸ್ಪಷ್ಟವಾಗಿದೆ.

ಕೆಲವು ಸ್ವಾರ್ಥಿಗಳು ಅಸತ್ಯ ಹಾಗೂ ಅನೀತಿಮಯವಾದ ವ್ಯವಹಾರಗಳನ್ನು ಮಾಡುತ್ತಿದ್ದು ಅದರಿಂದುಂಟಾದ ಪಾಪದ ಪರಿ- ಹಾರಕ್ಕಾಗಿ ದಾನ ಮಾಡುವುದುಂಟು. ಅದು ವಸ್ತುತಃ ವಂಚನೆ ಯಲ್ಲದೆ ನಿಜವಾದ ದಾನವಲ್ಲ. ಓರ್ವ ಕಳ್ಳನು ಕಳವು ಮಾಡಿ ತನ್ನ ಅಪರಾಧದ ಬಿಡುಗಡೆಗಾಗಿ ಪೋಲೀಸರಿಗೆ ಲಂಚ ಕೊಡುವಂತೆ ಈ ದಾನವೂ ಶುಭಕಾರ್ಯಗಳಿಗೆ ಲಂಚ ಕೊಡುವುದಾಗಿದೆ. ಅಪರಾಧಿಯು ವಸ್ತುತಃ ಅಪರಾಧಿಯೇ ಆಗಿರುವಂತೆ ಅನ್ಯಾಯ ಮಾರ್ಗದಲ್ಲಿ ನಡೆ ಯುವವನು ವಸ್ತುತಃ ಪಾಪಭಾಜನನೇ ಆಗಿರುವನು. ವಸ್ತುತಃ ಭಾರತದಲ್ಲಿ ದಾನದ ಪರಿಪಾಠಿಯೇ ಕಡಿಮೆಯಾಗಿದೆ. ದಾನ ಮಾಡು

ನವರೂ ಬಹುಶಃ ತಮ್ಮ ಮಾನ-ಸನ್ಮಾನದ ಪ್ರಾಪ್ತಿಗಾಗಿಯೇ ದಾನ ಮಾಡುತ್ತಾರಲ್ಲದೆ ನಿಜವಾದ ಆಂತರಿಕ ಶ್ರದ್ಧೆಯಿಂದ, ಧರ್ಮಬುದ್ಧಿಯಿಂದ ದಾನ ಮಾಡುವವರು ವಿರಳ. ವಿಚಾರದೃಷ್ಟಿಯಿಂದ ನೋಡಿದಾದರೆ ಒಂದು ಲಕ್ಷ ರೂಪಾಯಿಗಳನ್ನು ದಾನ ಮಾಡುವುದು ಸುಲಭವು. ಆದರೆ ಅದರಿಂದುಂಟಾಗುವ ಮಾನ-ಸನ್ಮಾನವನ್ನು ದಾನ ಮಾಡುವುದು ಅತ್ಯಂತ ದುರ್ಲಭವು. ದಾನವು ಕೊಡುವುದಕ್ಕಾಗಿ ಅಲ್ಲ; ಅದರಿಂದ ಶತಗುಣ ಫಲವನ್ನು ಪಡೆಯುವುದಕ್ಕಾಗಿ. ಮಣ್ಣು, ಕೆಸರು ಮಿಶ್ರಿತವಾದ ಭೂಮಿಯಲ್ಲಿ ಬಿತ್ತಿದ ಒಂದು ಬೀಜವು ನೂರಾರು ಬೀಜಗಳನ್ನು ಕೊಡುವಂತೆ ಅಥವಾ ಯೋಗ್ಯಭೂಮಿಯಲ್ಲಿ ಹಾಕಿದ ಒಂದು ಸಣ್ಣ ಆಲದ ಬೀಜವು ವಿಶಾಲವೃಕ್ಷವಾಗಿ ಪರಿಣಮಿಸಿ ಅನೇಕ ಪ್ರಾಣಿಗಳಿಗೆ ವಿಶಾಲವಾದ ನೆರಳನ್ನು ಕೊಡುವಂತೆ ಯೋಗ್ಯ ಪಾತ್ರ ದೇಶ ಕಾಲಾದಿಗಳನ್ನರಿತು ಯುಕ್ತಸಮಯದಲ್ಲಿ ಮಾಡಿದ ಅತ್ಯಲ್ಪ ದಾನವೂ ವಿಶೇಷ ಫಲವನ್ನೀಯುತ್ತದೆ. ಈ ಕಾರಣದಿಂದ ದಾನ ಕೊಡುವವನು ಆ ದಾನವನ್ನು ತೆಗೆದುಕೊಳ್ಳುವವನಿಗೆ ಕೃತಜ್ಞನಾಗಿರಬೇಕು. ನೀರು ತುಂಬಿದ ಕೊಡವು ಇನ್ನೊಂದು ಬರಿಯ ಕೊಡಕ್ಕೆ ತನ್ನಲ್ಲಿದ್ದ ನೀರನ್ನು ಸುರಿಸುವಾಗ ತನ್ನ ಕತ್ತನ್ನು ಬಗ್ಗಿಸುವಂತೆ, ಫಲಭರಿತವಾದ ವೃಕ್ಷವು ತಲೆಯನ್ನು ಬಾಗಿಸುವಂತೆ ದಾನಿಯೂ ದಾನ ತೆಗೆದುಕೊಳ್ಳುವವನನ್ನು ಸಮ್ಮಾನಿಸಿ ವಿನೀತಭಾವದಿಂದ ದಾನವನ್ನೀಯಬೇಕು. ದಾನ ಕೊಡುವ ಮನುಷ್ಯನು ಅದನ್ನು ತೆಗೆದುಕೊಳ್ಳುವವನಿಗೆ ಋಣಿಯಾಗಿರುವನು. ಏಕೆಂದರೆ ದಾನ ತೆಗೆದುಕೊಳ್ಳುವವನ ಕೃಪೆಯಿಂದಲೇ ದಾನ ಕೊಡುವವನ ಸಂಪತ್ತಿನ ಉತ್ತಮ ಉಪಯೋಗವಾಗುವುದು ಹಾಗೂ ಸಾರ್ಥಕತೆಯು ಲಭಿಸುವುದು. ಕರ್ತವ್ಯದ ದೃಷ್ಟಿಯಿಂದ ಯಾವುದಾದರೊಂದು ಶುಭ ಕಾರ್ಯವನ್ನೆಸಗುವುದು ಉತ್ತಮವು ಹಾಗೂ ಶ್ರೇಯಸ್ಕರವಾದುದು.

ಯಾವಾತನು ಸ್ವರ್ಗಾದಿಸುಖಗಳ ವಿಷಯಭೋಗಗಳ ಪ್ರಾಪ್ತಿಯ ಲಾಲಸೆಯನ್ನು ತೊರೆದು ಕೇವಲ ಐದು ಮಿನಿಟುಗಳವರೆಗಾದರೂ ಸತ್ಕಾರ್ಯದಲ್ಲಿ ಪ್ರವರ್ತಿಸುವನೋ ಆತನಲ್ಲಿ ಆತ್ಮಿಕಗುಣಗಳು ವಿಕಾಸ ವನ್ನು ಹೊಂದುತ್ತವೆ. ಯಾವುದೊಂದು ಫಲಪ್ರಾಪ್ತಿಯ ಆಶೆಯನ್ನೂ ಇಟ್ಟುಕೊಳ್ಳದೆ ಸತ್ಕಾರ್ಯವನ್ನು ಮಾಡುವುದೇ ಆತ್ಮಸಂಯಮದ ಶಕ್ತಿಯ ಉಚ್ಚತಮ ಸ್ವರೂಪವಾಗಿರುತ್ತದೆ. ಆತ್ಮಸಂಯಮವೇ ಬಾಹ್ಯಶಕ್ತಿಗಳಿಗಿಂತ ಶ್ರೇಷ್ಠತಮವಾದ ವಿಶಿಷ್ಟ ಶಕ್ತಿಯಾಗಿದೆ. ಶುಭ ಕಾರ್ಯಗಳಿಂದುಂಟಾಗಬಹುದಾದ ಫಲದಲ್ಲಿ ಸ್ವಾರ್ಥಭಾವನೆಯು ನಿರ್ಮೂಲವಾಗುವುದರಿಂದ ಮನುಷ್ಯನು ವಿಶ್ವದಲ್ಲಿ ಸರ್ವಾಧಿಕ ಶಕ್ತಿ ಶಾಲಿಯಾಗುವನು. ಆದಕಾರಣ ಆತ್ಮಹಿತೈಷಿಗಳೇ! ಶುಭಕಾರ್ಯ ಗಳಲ್ಲಿ ಪ್ರತಿಫಲಾಶೆಯ ಸ್ವಾರ್ಥಮಯ ದೃಷ್ಟಿಯನ್ನಿಡದೆ ಸ್ವಸ್ವಭಾವ ಮಯವಾದ ವಿಶಾಲದೃಷ್ಟಿಯನ್ನಿಡಿರಿ. ಶತ್ರುಗಳಾಗಲಿ ಮಿತ್ರರಾಗಲಿ ಎಲ್ಲರಿಗೂ ಶ್ರೇಯಸ್ಸುಂಟಾಗುವಂತೆ ವರ್ತಿಸಿರಿ. ಶತ್ರು-ಮಿತ್ರರಲ್ಲಿ ಅಭೇದಭಾವ (ಸಮತಾಭಾವ) ದಿಂದ ಫಲಪ್ರಾಪ್ತಿಯ ಆಶೆಯನ್ನು ತೊರೆದು ಶುಭಕಾರ್ಯವನ್ನು ಮಾಡುವುದೇ ಅಸಿಧಾರೆಗೆ ಸಮಾನವಾದ ಕಠಿಣ ವ್ರತವು. ಈ ಅಸಿಧಾರಾವ್ರತವೇ ಮನುಷ್ಯನನ್ನು ಪ್ರಗತಿಪಥ ದಲ್ಲಿ ಮುನ್ನಡೆಯಿಸಬಲ್ಲುದು.

ತನ್ನ ಮರಿಯ ಮೇಲೆ ಕರುಣೆ ಹಾಗೂ ಮಮತೆಯನ್ನಿಡುವ ಬೆಕ್ಕು ದಯಾಮೂರ್ತಿ ಅಥವಾ ಪ್ರೇಮಯೋಗಿಯಾಗಲಾರದು ಹಾಗೂ ತನ್ನ ಜೀವನದಲ್ಲಿ ಕಿಂಚಿನ್ಮಾತ್ರವೂ ಸಫಲತೆಯನ್ನು ಪಡೆಯು ಲಾರದು. ಅದು ತನ್ನ ಮರಿಯ ಮೇಲೆ ವಾತ್ಸಲ್ಯವನ್ನಿಡುವಂತೆ ಸರ್ವ ಪ್ರಾಣಿಗಳ ಮೇಲೂ ಅಂತಹ ವಾತ್ಸಲ್ಯಭಾವವನ್ನಿಟ್ಟದಾದರೆ ಮಾತ್ರ ಅದರ ಜೀವನ ಸಾಫಲ್ಯವನ್ನು ಪಡೆಯಬಹುದು. ಅದೇ ಪ್ರಕಾರ

ಮನುಷ್ಯನು ತನ್ನ ಕುಟುಂಬ, ಬಂಧುಬಳಗ ಹಾಗೂ ಮಿತ್ರಜನ ರೊಡನೆ ಸ್ನೇಹಭಾವವನ್ನಿಟ್ಟಮಾತ್ರಕ್ಕೆ ಆತನು ದಯೆಯ ಅವತಾರ ರೂಪನಾಗಲಾರನು. ಶತ್ರು-ಮಿತ್ರರಲ್ಲಿ ಅಭೇದಭಾವವುಳ್ಳವನಾಗಿ ಜನಹಿತ ಕಾರ್ಯಗಳನ್ನು ಮಾಡುವವನೇ ಕರ್ತವ್ಯಪರಾಯಣನೂ ದಯಾಮೂರ್ತಿಯೂ ಆಗಿರುವನೆಂದು ತಿಳಿಯಬೇಕು.

ನಮ್ಮೊಡನೆ ಭಿಕ್ಷೆಯನ್ನು ಯಾಚಿಸುವ ಭಿಕ್ಷುಕನು ನಮ್ಮಲ್ಲಿ ಉಪಕಾರಬುದ್ಧಿಯನ್ನು ಜಾಗೃತಗೊಳಿಸಿ ನಮ್ಮನ್ನು ಋಣಿಗಳನ್ನಾಗಿ ಮಾಡುವನು. ನಮಗೆ ಉಪಕಾರವನ್ನು ಮಾಡುವ ಅವಕಾಶವನ್ನು ಕಲ್ಪಿಸಿಕೊಡುವನು. ಅತಏವ ನಾವು ಆತನಿಗೆ ಕೃತಜ್ಞರಾಗಿರಬೇಕು. ಭಿಕ್ಷುಕನ ಕೇವಲ ಭಿಕ್ಷಾಯಾಚನೆಯೇ ಶ್ರೀಮಂತರ ಉದ್ಧಾರಕ್ಕೆ ಉಪಕಾರಕವಾಗಿರುತ್ತದೆ. ಇನ್ನು ಅನಾಥರು, ದಯಾಪಾತ್ರರು ಹಾಗೂ ಜ್ಞಾನಾರ್ಥಿಗಳು ಮೊದಲಾದವರಿಗೆ ಯೋಗ್ಯ ಸಾಧನವನ್ನು ಕಲ್ಪಿಸಿ ಕೊಡುವಿಕೆಯು ಶ್ರೀಮಂತವರ್ಗದ ಉದ್ಧಾರಕ್ಕೆ ಅದೆಷ್ಟು ಸಹಕಾರಿಯಾಗಿರುತ್ತದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಶ್ರೀಮಂತ ವರ್ಗವು ಈ ವಿಷಯವನ್ನು ಪರ್ಯಾಲೋಚಿಸಿ ತನ್ನ ಕರ್ತವ್ಯಪಥ ದಲ್ಲಿ ಮುನ್ನಡೆಯಬೇಕು.

ನಾವು ಪರೋಪಕಾರ ಮಾಡಿದೆವು ಎನ್ನುವಂತಹ ವಿಚಾರವೂ ಅಹಂಕಾರಪೋಷಕವಾಗಿದೆ. ಪರೋಪಕಾರವೃತ್ತಿಯು ಬೆಳೆದಂತೆ ಅಹಂಭಾವವು ನಾಶವಾಗುತ್ತದೆ. ಕೌಪೀನಮಾತ್ರ ಪರಿಗ್ರಹವುಳ್ಳವ ನಾಗಿ ಅರಣ್ಯದಲ್ಲಿ ತಪಸ್ಸನ್ನಾಚರಿಸುವ ತ್ಯಾಗಿಯೂ ಅಹಂಭಾವ ವುಳ್ಳವನಾದರೆ ಆತನೆಂದೂ ತ್ಯಾಗಿಯೆನಿಸಲಾರನು. ಭರತಚಕ್ರೇಶ ನಂತೆ ಅನಾಸಕ್ತಭಾವವುಳ್ಳ ವ್ಯಕ್ತಿಯು ಚಕ್ರವರ್ತಿಪದಾಧಿರೂಢ ನಾಗಿದ್ದರೂ ಆತನು ತ್ಯಾಗಿಯೆನಿಸುವನು.

ಪವಿತ್ರವಿಚಾರವನ್ನು ಮಾಡುವುದು ವಿಶ್ವದಲ್ಲಿ ಅಮೃತವನ್ನು ಸುರಿಸುವುದಕ್ಕೆ ಸಮಾನವಾಗಿದೆ ಹಾಗೂ ಅಪವಿತ್ರ (ದುಷ್ಟ) ವಿಚಾರವನ್ನು ಮಾಡುವುದು ವಿಶ್ವದಲ್ಲಿ ವಿಷವನ್ನು ಸುರಿಸುವುದಕ್ಕೆ ಸಮಾನವಾಗಿದೆ. ಇತರರಿಗೆ ಸಹಾಯ ಅಥವಾ ಉಪಕಾರ ಮಾಡುವುದೆಂದರೆ ತನಗೆ ತಾನು ಸಹಾಯ ಮಾಡಿಕೊಳ್ಳುವುದೆಂದರ್ಥವು. ಪರೋಪಕಾರವನ್ನು ಮಾಡುವ ಮನುಷ್ಯನು ತನ್ನನ್ನು ಸುಶಿಕ್ಷಿತನನ್ನಾಗಿಯೂ ಸುಸಂಸ್ಕೃತನನ್ನಾಗಿಯೂ ಮಾಡಿಕೊಳ್ಳುತ್ತಾನೆ. ಒಳ್ಳೆಯ ಕಾರ್ಯಗಳಿಂದ ಒಳ್ಳೆಯ ಫಲಗಳೇ ದೊರೆಯುತ್ತವೆಂಬುದನ್ನು ಮರೆಯಲಾಗದು. ಫಲಾಶೆಯಿಲ್ಲದಿರುವ ಬುದ್ಧಿಯು ಒಂದು ಅಮೋಘ ಅಸ್ತ್ರವಾಗಿದೆ. ಇದರಿಂದಲೇ ಅಜ್ಞಾನವು ತೊಲಗುತ್ತದೆ ಹಾಗೂ ಅಪೂರ್ವ ಆನಂದದ ಅನುಭವವುಂಟಾಗುತ್ತದೆ.

ನೊಣವು ಎಣ್ಣೆ-ತುಪ್ಪ ಮೊದಲಾದ ಪದಾರ್ಥಗಳನ್ನು ತಿನ್ನಲು ಹೋಗಿ ಅವುಗಳಲ್ಲೇ ಬಿದ್ದು ಸಾಯುವಂತೆ ಮನುಷ್ಯನು ವಿಷಯ ಭೋಗಗಳ ಸುಖವನ್ನನುಭವಿಸಲು ಹೋಗಿ ಕೊನೆಗೆ ಅದರಲ್ಲೇ ಬಿದ್ದು ತನ್ನ ಸರ್ವನಾಶವನ್ನು ಮಾಡಿಕೊಳ್ಳುವವನಾಗಿ ಇತರರಿಗೆ ದಯಾಪಾತ್ರನೂ ಹಾಸ್ಯಾಸ್ಪದನೂ ಆಗುತ್ತಾನೆ. ವಿಷಯಸುಖಗಳನ್ನು ಅನುಭವಿಸಲು ಹೋಗಿ ತಾನೇ ಅನುಭವಿಸಲ್ಪಡುತ್ತಾನೆ. ಸ್ವಾಮಿಯಾಗಲು ಹೋಗಿ ಸೇವಕನಾಗುತ್ತಾನೆ. ಇಷ್ಟರಿಂದಲೂ ಆತನು ಎಚ್ಚರಗೊಳ್ಳದಿದ್ದರೆ ತನ್ನ ಸಮಸ್ತ ವೈಭವವಿಲಾಸಗಳಿಂದ ವಂಚಿಸಲ್ಪಡುತ್ತಾನೆ.

ದಾನ ಉದಾರತೆ ಸಹಿಷ್ಣುತೆ ಇವುಗಳಿಂದ ಹೆಚ್ಚಾದ ವೈಭವವು ಪ್ರಾಪ್ತವಾಗುತ್ತದೆ. ಪೂರ್ವಪುಣ್ಯಪರಿಪಾಕದಿಂದ ದೊರೆತಿರುವ ಸುಖಭೋಗಗಳ ಸಾಧನಗಳನ್ನು ಸದುಪಯೋಗಗೊಳಿಸಿರಿ. ಇಲ್ಲವಾದರೆ ಪ್ರಕೃತಿಯು ಅವೆಲ್ಲವನ್ನೂ ಅಪಹರಿಸುವುದು. ಅವಿವೇಕವನ್ನು

ತೊರೆದು ವಿವೇಕಿಗಳಾಗಿರಿ. ಇಚ್ಛೆಯಿಲ್ಲದೆ ಯಾವುದೊಂದು ಸಣ್ಣ ವಸ್ತುವನ್ನಾದರೂ ಕಳಕೊಳ್ಳುವುದರಿಂದ ದುಃಖವಾಗುತ್ತದೆ. ಆದರೆ ಸ್ವೇಚ್ಛೆಯಿಂದ ತನ್ನ ಸರ್ವಸ್ವವನ್ನು ದಾನ ಮಾಡಿದರೂ ಅದರಿಂದ ತಿಲಮಾತ್ರವೂ ದುಃಖವುಂಟಾಗುವುದಿಲ್ಲ; ಬದಲಾಗಿ ಪರಮ ಸುಖ-ಶಾಂತಿಗಳುಂಟಾಗುತ್ತವೆ. ಮಾನವನು ಒಂದಲ್ಲೊಂದು ದಿನ ಸರ್ವಸ್ವವನ್ನೂ ಬಿಡಲೇಬೇಕಷ್ಟೆ!

ಅಧಿಕವಾಗಿ ಸಂಪಾದಿಸಲ್ಪಟ್ಟ ಸಂಪತ್ತಿಯು ಅಂತ್ಯಕಾಲ (ಮರಣಕಾಲ) ದಲ್ಲಿ ಅಧಿಕವಾದ ಕ್ಲೇಶಕ್ಕೆ ಕಾರಣವಾಗುತ್ತದೆ. "ಅಯ್ಯೋ, ನಾನು ಕಷ್ಟಪಟ್ಟು ಸಂಪಾದಿಸಿದ ಈ ಅತುಲಸಂಪತ್ತಿಯನ್ನು ಹೇಗೆ ಬಿಟ್ಟುಹೋಗಲಿ; ನನ್ನೀ ಕಷ್ಟವನ್ನು ಯಾರೊಡನೆ ಹೇಳಿಕೊಳ್ಳಲಿ." ಎಂದು ಮೊದಲಾಗಿ ಪ್ರಲಾಪಿಸಿದರೂ ಈ ಅತ್ಯಾಚಾರವನ್ನು ತಡೆಗಟ್ಟುವವರು ಯಾರೂ ಇರಲಾರರು. ಹೆಚ್ಚೇಕೆ? ಇಡಿಯ ಜೀವಮಾನದಲ್ಲಿ ಸಾಕಿಸಲಹಿದ, ಪೋಷಿಸಿದ, ಅಲಂಕರಿಸಿದ ತನ್ನ ಶರೀರವೇ ತನ್ನನ್ನು ವಂಚಿಸುತ್ತದೆ. ಏಳುವ ಕುಳಿತುಕೊಳ್ಳುವ ಶಕ್ತಿಯಿಲ್ಲದೆ ಶರೀರವು ಭಾರವಾಗಿ ಕಾಣುತ್ತದೆ, ಸಂಪತ್ತಿಯು ವಿಪತ್ತಿಯಂತೆ ಕಾಣುತ್ತದೆ. ಜೀವಮಾನದಲ್ಲಿ ತಾನು ಹಿಂದೆ ಮಾಡಿರುವ ಅನ್ಯಾಯ, ಅತ್ಯಾಚಾರ ಹಾಗೂ ಪಾಪಗಳು ಕಣ್ಣಮುಂದೆ ಗೋಚರಿಸುತ್ತವೆ. ತಾನೆಸಗಿದ ಪಾಪದ ಫಲವನ್ನಾಲೋಚಿಸಿ ಹೃದಯವು ಕಂಪಿಸುತ್ತದೆ. ಈ ಸಮಯದಲ್ಲಿ ಮನುಷ್ಯನು ತನ್ನ ಸರ್ವಸ್ವವನ್ನಾದರೂ ಕೊಟ್ಟು ಅಧಿಕ ಸಮಯ ಜೀವಿಸಲಿಚ್ಛಿಸುತ್ತಾನೆ. ಆದರೇನು? ಆತನು ಪರವಶನು. ಜೀವನು ಪ್ರಕೃತಿಯ ಸಾಮ್ರಾಜ್ಯದಲ್ಲಿ ಇನ್ನೊಂದೆಡೆ (ಬೇರೊಂದು ಗತಿಗೆ) ಹೋಗಿಯೇ ಹೋಗುತ್ತಾನೆ. ಆಗ ಬಂಧುಮಿತ್ರರು ಕಣ್ಣೀರಿಡುತ್ತಾರೆ. ಅದೂ ಸ್ವಲ್ಪ ಸಮಯ. ಆಮೇಲೆ ಆತನು ಇದ್ದನೋ ಇಲ್ಲವೆಂಬಂತೆ ಆತನನ್ನು ಸಂಪೂರ್ಣ ಮರೆತುಬಿಡುತ್ತಾರೆ.

ಬೇಗನೆ ಬಿತ್ತಿದ ಬೀಜದಿಂದ ಬೇಗನೆ ಬೆಳೆಯಾಗುವಂತೆ ಶೀಘ್ರವಾಗಿ ಮಾಡಿದ ದಾನದಿಂದ ಶೀಘ್ರವೇ ಫಲಪ್ರಾಪ್ತಿಯಾಗುತ್ತದೆ. ಹಾಗಲ್ಲದೆ ಮರಣ ಸಮಯ ಸನ್ನಿಹಿತವಾಗುತ್ತಿರಲು ಬಲೆಯಲ್ಲಿ ಸಿಕ್ಕಿಬಿದ್ದ ಪಕ್ಷಿಯಂತೆ ತೊಳಲುವವನಾಗಿ ವಿಕ್ಷಿಪ್ತಮನೋವೃತ್ತಿಯುಳ್ಳ ಮಾನವನು ಯಾವ ಶುಭಕಾರ್ಯವನ್ನು ಸಾಧಿಸಬಲ್ಲನು ? ಅವಿವೇಕಿಯಾದ ಮಾನವನು ನಿರಂತರ ತನ್ನ ಸ್ತ್ರೀ ಪುತ್ರಪರಿವಾರ ಧನ ಹಾಗೂ ಅಧಿಕಾರ ಮೊದಲಾದುವುಗಳಿಂದುಂಟಾಗುವ ಮೃಗತೃಷ್ಣೆಗೆ ಸಮಾನವಾದ ಸುಖಾಭಾಸಗಳಿಗಾಗಿ ಶ್ರಮಿಸುವವನಾಗಿ ತನ್ನ ಅಲಭ್ಯವಾದ ಮಾನವಜೀವನವನ್ನು ವ್ಯರ್ಥವಾಗಿ ನಾಶಗೊಳಿಸುವನು.

ರೋಗ ಪ್ರತಿಬಂಧಕ ಶಕ್ತಿಯುಳ್ಳ ಶರೀರವನ್ನು ರೋಗವು ಆಕ್ರಮಿಸಲಾರದು. ಅದರಂತೆಯೇ ದುಃಖಪ್ರತಿಬಂಧಕವಾದ ಕಾರ್ಯಗಳನ್ನು ಮಾಡುತ್ತಿರುವ ಜೀವನನ್ನು ದುಃಖಗಳು ಆಕ್ರಮಿಸಲಾರವು. ಮನುಷ್ಯನು ತನ್ನ ಸುಖ-ದುಃಖಗಳಿಗೆ ತಾನೇ ಕಾರಣನಾಗಿರುವನು. ವಸ್ತುತತ್ತ್ವವನ್ನು ವಿಚಾರಿಸಿದರೆ ನಾವು ಇಂದಿನ ಜೀವನದಲ್ಲಿ ಎಷ್ಟೆಷ್ಟು ರೀತಿಯ ಸುಖ-ದುಃಖಗಳನ್ನನುಭವಿಸುತ್ತೇವೋ ಅದರ ಕಾರಣಗಳು ಹಿಂದೆ ನಮ್ಮಿಂದಲೇ ಮಾಡಲ್ಪಟ್ಟುವೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದರಿಂದ ಆಂತರಿಕ ತತ್ತ್ವದ ಸತ್ತೆಗೆ ಅನುಸಾರವಾಗಿಯೇ ಬಾಹ್ಯಜಗತ್ತು ನಮ್ಮ ಮೇಲೆ ಅಧಿಕಾರ ನಡೆಸುತ್ತದಲ್ಲದೆ ಅದಕ್ಕೆ ವ್ಯತಿರಿಕ್ತವಾಗಿ ನಮ್ಮ ಮೇಲೆ ಯಾವ ಅಧಿಕಾರ ಅಥವಾ ಪ್ರಭಾವವನ್ನೂ ಬೀರಲಾರದೆಂಬುದು ಸಿದ್ಧವಾಗುತ್ತದೆ. ನಾವು ನಮ್ಮ ಆಂತರಿಕ ಸೃಷ್ಟಿಯ ಮೇಲೆ ಅಧಿಕಾರವನ್ನು ಸ್ಥಾಪಿಸಿದುದಾದರೆ ಬಾಹ್ಯಜಗತ್ತಿನ ಯಾವುದೊಂದು ಸತ್ತೆಯೂ ನಮ್ಮ ಮೇಲೆ ನಡೆಯಲಾರದು.

ನಾವು ಇತರರ ದೋಷಗಳನ್ನೇ ನೋಡುತ್ತೇವಲ್ಲದೆ ನಮ್ಮಲ್ಲಿರುವ ದೋಷಗಳನ್ನು ನೋಡುವುದಿಲ್ಲ. ನಾವು ವಸ್ತುತಃ ನಿರ್ದೋಷಿ

ಗಳಾಗಿರುತ್ತಿದ್ದರೆ ನಾವೇಕೆ ಈ ದೂಷಿತ ಜಗತ್ತಿನಲ್ಲಿ ಜನಿಸಬೇಕಿದ್ದಿತು? ಜಗತ್ತಿನಲ್ಲೆಲ್ಲರೂ ದೋಷಿಗಳಾಗಿರುವುದಾದರೆ ನಾವೂ ದೋಷಿಗಳೇ. ಆದುದರಿಂದ ಇತರರ ದೋಷಗಳನ್ನು ನೋಡುವ ನೀಚವೃತ್ತಿಯನ್ನು ತೊರೆದು ನಮ್ಮ ದೋಷಗಳನ್ನೇ ನಾವು ನೋಡುವವರಾಗಿ ಧೀರವೃತ್ತಿಯುಳ್ಳ ಮಹಾವೀರರಾಗಬೇಕು.

ನಾವು ಜ್ಞಾನಸಂಬಂಧವಾದ ವಾರ್ತಾಲಾಪಗಳನ್ನು ಮಾಡುತ್ತೇವೆ, ಉದ್ಬುದ್ಧ ಭಾಷಣಗಳನ್ನು ಕೊಡುತ್ತೇವೆ ಹಾಗೂ ಜ್ಞಾನಾಭಿವೃದ್ಧಿಗಾಗಿ ಶಾಸ್ತ್ರಸ್ವಾಧ್ಯಾಯವನ್ನು ಮಾಡುತ್ತೇವೆ. ಆದರೆ ಯಾವನಾದರೊಬ್ಬ ನೀಚನು ನಮ್ಮನ್ನು ಕುರಿತು ಅಪ್ರಿಯಶಬ್ದವನ್ನು ಉಚ್ಚರಿಸಿದನೆಂದರೆ ಕೂಡಲೇ ನಮ್ಮ ಜ್ಞಾನವು ಲೋಪವಾಗುತ್ತದೆ, ಬುದ್ಧಿಯು ವಿಕೃತವಾಗುತ್ತದೆ. ಹೃದಯದಲ್ಲಿ ದ್ವೇಷವು ಉಮ್ಮಳಿಸುತ್ತದೆ. ಹಾಗೆಯೇ ನಮ್ಮ ಬಾಯಿಯಿಂದ ಅವಾಚ್ಯಶಬ್ದಗಳು ತಾವಾಗಿಯೇ ಹೊರಡುತ್ತವೆ. ಇದಕ್ಕಿಂತಲೂ ಹೆಚ್ಚಿನ ಪಾಮರತೆಯಿದೆಯೇ? ಗೋಡೆಗೆ ಮುಷ್ಟಿಪ್ರಹಾರವನ್ನು ಮಾಡುವವನ ಕೈಗೇ ನೋವಾಗುತ್ತದಲ್ಲದೆ ಗೋಡೆಗೆ ನೋವಾಗುವುದಿಲ್ಲ. ಸಣ್ಣದೊಂದು ಕಲ್ಲಹರಳಿನಂತಹ ಅಲ್ಪವಾದ ಅಪ್ರಿಯಶಬ್ದದಿಂದ ಅಲುಗಾಡುವ ನಮ್ಮ ಹೃದಯವು ಆ ಗೋಡೆಗಿಂತಲೂ ಜಡವಾದುದೇ? ಇಲ್ಲ; ಇಲ್ಲ; ನಾವು ಚೈತನ್ಯಮಯರು. ಚೈತನ್ಯದ ಶಕ್ತಿಯನ್ನು ಚೆನ್ನಾಗಿ ಅರಿತು ನಾವು ನಮ್ಮ ಕರ್ತವ್ಯಕರ್ಮದಲ್ಲಿ ಜಾಗೃತರಾಗಬೇಕು.

## ಭಾವನೆ (ವಿಚಾರ)

ದುಃಖದ ಮೂಲಕಾರಣವು ಕರ್ಮಬಂಧವಾಗಿದೆ. ಆ ಬಂಧವು ಯೋಗ ಮತ್ತು ಕಷಾಯಗಳಿಂದುಂಟಾಗುತ್ತದೆ. ಯೋಗಶಕ್ತಿಯಿಂದ

ಪ್ರಕೃತಿಬಂಧ-ಪ್ರದೇಶಬಂಧಗಳೂ ಕಷಾಯಶಕ್ತಿಯಿಂದ ಸ್ಥಿತಿಬಂಧ-ಅನ.ಭಾಗಬಂಧಗಳೂ ಉಂಟಾಗುತ್ತವೆ. ಕಷಾಯ:ಸಹಿತವಾದ ಯೋಗಗಳ ಪ್ರವೃತ್ತಿಗೆ ಲೇಶ್ಯೆಯೆಂದು ಹೆಸರು. ಅದು ಶುಭಲೇಶ್ಯೆಯೆಂದೂ ಅಶುಭಲೇಶ್ಯೆಯೆಂದೂ ಎರಡು ವಿಧವಾಗಿದೆ. ಶುಭವಿಚಾರಗಳಿಗೆ ಶುಭಲೇಶ್ಯೆಯೆಂದೂ ಅಶುಭವಿಚಾರಗಳಿಗೆ ಅಶುಭಲೇಶ್ಯೆಯೆಂದೂ ಹೇಳುತ್ತಾರೆ. ಮನೋವಾಕ್ಕಾಯರೂಪವಾದ ಮೂರು ಯೋಗಗಳಲ್ಲಿ ಕಾಯವಚನಗಳಿಗಿಂತ ಮನಸ್ಸಿನ ವಿಚಾರಗಳು ಅತ್ಯಂತ ಸೂಕ್ಷ್ಮಗಳಾಗಿದ್ದು ಶೀಘ್ರಗತಿಯುಳ್ಳ ವಿದ್ಯುತ್ತಿಗಿಂತಲೂ ಅನಂತ-ಗುಣ ಅಧಿಕ ಶಕ್ತಿಯುಳ್ಳವುಗಳಾಗಿರುತ್ತವೆ. ಆದಕಾರಣ ಕಾಯವಚನಗಳಿಗಿಂತಲೂ ಅಧಿಕವಾಗಿ ಮನಸ್ಸಿನ ವಿಚಾರಗಳನ್ನು ನಿಯಂತ್ರಿಸಬೇಕು. ಒಳ್ಳೆಯ ವಿಚಾರಗಳು ಸ್ವಪರಹಿತವನ್ನು ಸಾಧಿಸುತ್ತವೆ. ಅತಏವ ಮಹಾಪುರುಷರು ಶತ್ರುಗಳ ವಿಷಯದಲ್ಲಾದರೂ ಹಿತವನ್ನೇ ಬಯಸಬೇಕೆಂದು ಸದುಪದೇಶವನ್ನಿತ್ತಿರುವರು. ಶುಭವಿಚಾರಗಳಿಂದ ಶುಭರೂಪವಾದ ಹಾಗೂ ಅಶುಭವಿಚಾರಗಳಿಂದ ಅಶುಭರೂಪವಾದ ಕರ್ಮಪುದ್ಗಲಗಳನ್ನು ಆತ್ಮನು ಗ್ರಹಣಮಾಡುತ್ತಾನೆ. ಯಾವನೊಬ್ಬನ ಕುರಿತು ದುಷ್ಟವಿಚಾರವನ್ನು ಮಾಡುವುದರಿಂದ ತನಗೇ ಕೆಡಕುಂಟಾಗುತ್ತದೆ. ಇತರರಿಗೆ ಕೆಡುಕುಂಟಾಗುವುದು ಅದರ ಉದಯಕ್ಕೆ ಅಧೀನವಾಗಿದೆ. ದುಷ್ಟವಿಚಾರಗಳು ದುಃಖಪರಂಪರೆಯನ್ನುಂಟುಮಾಡುತ್ತವೆ. ಗುಪ್ತವಿಚಾರಗಳ ಒಳ್ಳೆಯ ಅಥವಾ ಕೆಟ್ಟ ಪ್ರಭಾವವೂ ಅವಶ್ಯವಾಗಿ ಗೋಚರಿಸುತ್ತದೆ. ಆದುದರಿಂದ ಪ್ರತಿಯೊಂದು ಗುಪ್ತವಿಚಾರವನ್ನೂ ಪವಿತ್ರವಾಗಿರಿಸಬೇಕು. ವಿಚಾರಗಳನ್ನು ಮಾತಿನ ಮೂಲಕ ವ್ಯಕ್ತಗೊಳಿಸಿದರೂ ವ್ಯಕ್ತಗೊಳಿಸದಿದ್ದರೂ ಅವುಗಳ ಪ್ರಭಾವವು ಇತರರ ಮೇಲೆ ಅವಶ್ಯವಾಗಿ ಬೀಳುತ್ತದೆ. ಒಳ್ಳೆಯ ವಿಚಾರಗಳಿಂದ ಶರೀರದ ಆರೋಗ್ಯವೂ ಮಾನಸಿಕ ಹಾಗೂ

ಆತ್ಮಿಕ ಶಕ್ತಿಯೂ ವೃದ್ಧಿಯಾಗುತ್ತದೆ. ಕೆಟ್ಟವಿಚಾರಗಳ ಪರಿಣಾಮವು ಇದಕ್ಕೆ ವಿಪರೀತವಾಗಿರುತ್ತದೆ. ವಿಚಾರಗಳಿಗನುಸಾರವಾಗಿಯೇ ಶರೀರ ಮನಸ್ಸುಗಳ ರಚನೆಯಾಗುತ್ತದೆ. ಆದುದರಿಂದ ವಿಚಾರಗಳ ಮೇಲೆ ಪೂರ್ಣ ನಿಯಂತ್ರಣವನ್ನಿಡಬೇಕು. ನೆರಳು ಶರೀರವನ್ನು ಹಿಂಬಾಲಿಸಿಕೊಂಡು ಬರುವಂತೆ ಸುಖದುಃಖಗಳು ಶುಭಾಶುಭ ವಿಚಾರಗಳನ್ನು ಹಿಂಬಾಲಿಸಿಕೊಂಡು ಬರುತ್ತವೆ.

ಪವಿತ್ರವಿಚಾರವು ದೇವರಿಗೆ ಸಮಾನವಾಗಿದೆ ಹಾಗೂ ಅಪವಿತ್ರ ವಿಚಾರವು ಪಿಶಾಚಕ್ಕೆ ಸಮಾನವಾಗಿದೆ.

ವಿಚಾರಗಳ ಪ್ರಭಾವವು ಮನುಷ್ಯನ ಚಾರಿತ್ರ (ನಡತೆ) ದ ಮೇಲೆ ಬೀಳುತ್ತದೆ.

ವಿಚಾರಗಳನ್ನೇನೋ ನೀವು ಮರೆತುಬಿಡಬಹುದು; ಆದರೆ ವಿಚಾರಗಳು ನಿಮ್ಮನ್ನೆಂದೂ ಮರೆಯಲಾರವು.

ನೂರಾರು ಶಾಸ್ತ್ರಗಳನ್ನು ಓದುವದಕ್ಕಿಂತಲೂ ಲಕ್ಷಾಂತರ ದೇವಗುರುಗಳ ಸೇವೆಗಿಂತಲೂ ಪವಿತ್ರಭಾವಗಳ ಸೇವೆಯು ಆತ್ಮನಿಗೆ ಅಧಿಕ ಉಪಯೋಗಿಯಾಗಿದೆ.

ನಿಮ್ಮ ಒಂದೇ ಒಂದು ಅಪವಿತ್ರವಿಚಾರವೂ ನಿಮಗೆ ಅನಂತ ಕಾಲದವರೆಗೆ ಲಕ್ಷಾಂತರ ನೀಚದಾನವರಿಗಿಂತಲೂ ಹೆಚ್ಚಿನ ಅಹಿತವನ್ನು ಉಂಟುಮಾಡಬಲ್ಲುದು.

ಶರೀರವನ್ನು ವ್ಯಾಯಾಮದಿಂದ ಸುದೃಢವನ್ನಾಗಿ ಮಾಡುವಂತೆ ಮನಸ್ಸನ್ನು ಉತ್ತಮವಿಚಾರಗಳಿಂದ ಸುದೃಢವನ್ನಾಗಿಸಬೇಕು.

ಕೆಲವು ಮನುಷ್ಯರಿಗೆ ದುರ್ವ್ಯಸನಗಳ ಪೂರ್ತಿಯ ಹೊರತು ಮನಸ್ಸಿಗೆ ಸಮಾಧಾನವಿರುವುದಿಲ್ಲ. ದುರಭ್ಯಾಸಗಳನ್ನು ತೊರೆದು ಉತ್ತಮವಿಚಾರಗಳ ಅಭ್ಯಾಸವನ್ನು ಮಾಡಿದುದಾದರೆ ಶೀಘ್ರವೇ ಉತ್ತಮಪದವಿಯು ಪ್ರಾಪ್ತಿಯಾಗಬಲ್ಲುದು.

ಅಭ್ಯಾಸಗಳ ಪರಿವರ್ತನೆಯಿಂದ ಚಾರಿತ್ರ (ನಡತೆ) ದ ಪರಿವರ್ತನೆಯಾಗುವುದು.

ಇಂದ್ರಿಯಗಳ ವಿಜಯ (ಜಿತೇಂದ್ರಿಯತ್ವ) ವೇ ಸರ್ವೋತ್ಕೃಷ್ಟ ವಿಜಯವು. ವಿಷಯಾಭಿಲಾಷೆಯನ್ನು ಜಯಿಸುವವನೇ ಮಹಾರಾಜ (ಮಹಾತ್ಮ) ನೆನಿಸುವನು.

ವಿಷಯಕಷಾಯಗಳ ಉತ್ಪತ್ತಿಯಿಂದ ಆತ್ಮತತ್ತ್ವದ ನಾಶವುಂಟಾಗುತ್ತದೆ.

ಸಂಯಮವಿಲ್ಲದ ಜೀವನವು ರಾಕ್ಷಸೀಯ ಜೀವನ ಅಥವಾ ಪಾಶವಿಕ ಜೀವನವಾಗಿದೆ.

ನೀರು ಗೊಬ್ಬರ ಮೊದಲಾದ ಪೋಷಕವಸ್ತುಗಳು ದೊರಕದಿರುವುದರಿಂದ ಸಸಿಗಳು ಒಣಗಿ ಹೋಗುವಂತೆ ವಿಷಯಪೋಷಕ ಸಾಮಗ್ರಿಗಳು ದೊರೆಯದಿರುವುದರಿಂದ ವಿಷಯಾಶೆಯು ನಾಶವಾಗುತ್ತದೆ.

ಅಬೋಧ ಬಾಲಕನು ಆಟದ ಸಾಮಗ್ರಿಯನ್ನು ತೆಗೆದುಕೊಳ್ಳುವುದಕ್ಕಾಗಿ ಅಮೂಲ್ಯ ರತ್ನವನ್ನು ಕೊಡುವಂತೆ ಅಜ್ಞಾನಿಯಾದ ಜೀವನು ವಿಷಯವಿಲಾಸಗಳ ಸಾಧನದ ಪ್ರಾಪ್ತಿಗಾಗಿ ಧರ್ಮರೂಪವಾದ ಅಥವಾ ಮಾನವಜನ್ಮರೂಪವಾದ ಅಮೂಲ್ಯ ಚಿಂತಾಮಣಿ ರತ್ನವನ್ನು ಕಳಕೊಳ್ಳುತ್ತಾನೆ.

ಪಾಪಿಗಳಿಂದ ದೂರವಾಗಿರುವುದಕ್ಕಿಂತಲೂ ಹೆಚ್ಚಾಗಿ ಪಾಪ (ಅಶುದ್ಧ ಕೆಟ್ಟವಿಚಾರ) ಗಳಿಂದ ದೂರವಾಗಿರಬೇಕು.

ಗುಣವಂತರ ಮೇಲಿನ ಪ್ರೇಮಕ್ಕಿಂತಲೂ ಹೆಚ್ಚಾದ ಪ್ರೇಮವನ್ನು ಗುಣಗಳ ಮೇಲಿಡಬೇಕು. ಏಕೆಂದರೆ ಕೇವಲ ಗುಣಿಗಳ ಸೇವೆಯಿಂದಲೇ ಮುಕ್ತಿಯು ಲಭಿಸಲಾರದು. ಮುಕ್ತಿಯ ಪ್ರಾಪ್ತಿಗೆ ಗುಣಗಳ ಸೇವೆಯು ಅವಶ್ಯವಾದುದು.

ಯಾವಾಗಲೂ ಶತ್ರುಗಳು ಸಮೀಪದಲ್ಲಿರುವುದು ಕ್ಲೇಶದಾಯಕವಾಗಿರುತ್ತದೆ. ದ್ವೇಷಾದಿಪರಿಣಾಮಗಳೇ ನಮ್ಮ ಘೋರಶತ್ರುಗಳು. ಆದುದರಿಂದ ಈ ಭಾವಶತ್ರುಗಳಿಂದ ಸರ್ವದಾ ಜಾಗರೂಕರಾಗಿದ್ದು ನಮ್ಮ ಸದ್ಗುಣರೂಪವಾದ ಸಂಪತ್ತನ್ನು ರಕ್ಷಿಸಿಕೊಳ್ಳಬೇಕು. ಅರ್ಥಾತ್ ಇಷ್ಟಾನಿಷ್ಟಪದಾರ್ಥಗಳಲ್ಲಿ ರಾಗದ್ವೇಷಗಳನ್ನು ತೊರೆದು ಸಮತಾಭಾವರೂಪವಾದ ಗುಣವನ್ನು ಕಾಯ್ದುಕೊಳ್ಳಬೇಕು ಹಾಗೂ ವೃದ್ಧಿಗೊಳಿಸಬೇಕು.

## ಗುಣದೃಷ್ಟಿ

ಧರ್ಮಮಾರ್ಗದ ಅನುಸರಣೆಯನ್ನು ಮಾಡುವವರು ಎಲ್ಲಕ್ಕಿಂತಲೂ ಮೊದಲು ಗುಣದೃಷ್ಟಿ ಅಥವಾ ಗುಣಗ್ರಾಹಕವೃತ್ತಿಯುಳ್ಳವರಾಗಿರಬೇಕು. ಜಗತ್ತಿನ ಎಲ್ಲ ಪದಾರ್ಥಗಳೂ ಗುಣಭರಿತಗಳಾಗಿರುತ್ತವೆ. ಆಡಿನ ಹಿಕ್ಕೆಯಲ್ಲಿ ಗುಲಾಬಿ ಹೂವಿನ ಸುಗಂಧಕ್ಕೆ ಪೋಷಕವಾದ ತತ್ತ್ವವಿರುತ್ತದೆ. ಗೊಬ್ಬರ ಮತ್ತು ಕಸಕಡ್ಡಿಗಳು ತುಂಬಿರುವ ತಗ್ಗಿನಲ್ಲಿ ಕಬ್ಬಿನ ರಸಪೋಷಕವಾದ ತತ್ತ್ವವಿರುತ್ತದೆ. ಹೀಗಿರುವಲ್ಲಿ ದೋಷಗಳನ್ನೆಲ್ಲಿ ಹುಡುಕಬೇಕು ? ಸಮಸ್ತ ಜಡ ಹಾಗೂ ಚೇತನ ತತ್ತ್ವಗಳು ಗುಣಗಳ ನಿಧಿಯಾಗಿರುತ್ತವೆ. ಜಡವಾದ ಶಿಲೆಯಿಂದಲೂ ಶಿಲ್ಪಿಗಳು ಆರಾಧ್ಯದೇವರ ಹಾಗೂ ರಾಜರು ಮೊದಲಾದವರ ಕಲಾಮಯ ಮೂರ್ತಿಗಳನ್ನು ನಿರ್ಮಿಸುತ್ತಾರೆ. ಗುಣವಂತರಿಗೆ ವಿಶ್ವದಲ್ಲಿ ಎಲ್ಲೆಲ್ಲೂ ಗುಣಗಳೇ ಕಂಡುಬರುತ್ತವೆ ಮತ್ತು ದೋಷಿಗಳಿಗೆ ಎಲ್ಲೆಲ್ಲೂ ದೋಷಗಳೇ ಕಂಡುಬರುತ್ತವೆ. ಗುಣಗ್ರಾಹಕತೆಯು ವಿಶಾಲಸಮುದ್ರಕ್ಕೆ ಸಮಾನವಾಗಿದೆ. ಆದರಲ್ಲಿ ಸಮಸ್ತಗುಣಗಳೆಂಬ ನದಿಗಳು ಬಂದು ಸೇರುತ್ತವೆ. ಆದು ತನ್ನ ಗಾಂಭೀರ್ಯದಿಂದ ಎಲ್ಲಾ ಗುಣಗಳಿಗೆ ಸ್ಥಾನವನ್ನು ಕೊಡುತ್ತದೆ.

ತಾನು ಪವಿತ್ರನಾಗಬೇಕೆಂದು ಬಯಸುವ ಮನುಷ್ಯನು ಇತರರನ್ನು ಪವಿತ್ರರನ್ನಾಗಿ ತಿಳಿಯಬೇಕು. ಇತರರ ಗುಣಗಳನ್ನು ನೋಡುವುದರಿಂದ ಮನುಷ್ಯನು ತಾನು ಗುಣವಂತನಾಗುವನು. ಹಾಗೆಯೇ ಇತರರ ದೋಷಗಳನ್ನು ನೋಡುವವನು ದೋಷಿಯಾಗುವನು. ಮನುಷ್ಯನು ರೋಗಪೀಡಿತನಾಗಿರುವಾಗ ಅವನ ದೋಷಗಳನ್ನು ನೋಡಲಾಗುವುದಿಲ್ಲ; ಯೋಗ್ಯ ಚಿಕಿತ್ಸೆಯಿಂದ ಆತನನ್ನು ರೋಗ-ಮುಕ್ತನನ್ನಾಗಿ ಮಾಡಲಾಗುತ್ತದೆ. ಅದೇ ಪ್ರಕಾರ ಮಾನಸಿಕ ವ್ಯಾಧಿಯಿಂದ ಕೂಡಿರುವ ವ್ಯಕ್ತಿಯ ದೋಷಗಳನ್ನು ಗಮನಿಸದೆ ಯೋಗ್ಯ ಉಪಚಾರಗಳಿಂದ ಆತನನ್ನು ರೋಗಮುಕ್ತನನ್ನಾಗಿ ಮಾಡಬೇಕಾಗಿದೆ. ಶಾರೀರಿಕರೋಗಿಗಿಂತಲೂ ಮಾನಸಿಕರೋಗಿಯು ವಿಶೇಷತಃ ದಯಾಪಾತ್ರನೂ ಸೇವಾಯೋಗ್ಯನೂ ಆಗಿರುತ್ತಾನೆ.

ಗುಣವಂತರ ಗುಣಗಳನ್ನು ಪಶುಗಳೂ ಗ್ರಹಣಮಾಡುತ್ತವೆ. ಆದರೆ ದೋಷವಂತರಲ್ಲೂ ಗುಣಗಳನ್ನು ಗ್ರಹಣಮಾಡುವುದು ಮಾನವತೆಯ ಲಕ್ಷಣವಾಗಿದೆ. ಗುಣದೃಷ್ಟಿಯ ಜ್ವಾಲೆಯಿಂದ ಸರ್ವದೋಷಗಳೂ ಭಸ್ಮೀಭೂತವಾಗುತ್ತವೆ. ಗುಣಗ್ರಾಹಕವೃತ್ತಿಗಿಂತ ಹೆಚ್ಚಾದ ದಯಾದಾನವಿಲ್ಲ. ಅತಏವ ಅನ್ವೇಷಕಬುದ್ಧಿಯಿಂದ ಇತರರಲ್ಲಿ ಗುಣಗಳನ್ನು ಹುಡುಕಬೇಕು. ಅದು ನಾವು ಗುಣವಂತರಾಗುವುದಕ್ಕೆ ಸಹಾಯಕವಾಗುತ್ತದೆ. ಗುಣದೃಷ್ಟಿಯು ಮಾನವಜೀವನವಿಕಾಸದ ಒಂದು ವಿಶಿಷ್ಟ ಕಲೆಯಾಗಿದೆ.

ಗುಣದೃಷ್ಟಿಯ ಅಭಾವವಿರುವಲ್ಲಿ ದುಃಖ ವ್ಯಾಧಿ ಮೊದಲಾ-ದುವುಗಳ ಆಕ್ರಮಣೆಯೂ ದೋಷದೃಷ್ಟಿಯ ಅಭಾವವಿರುವಲ್ಲಿ ಸುಖಸಂಪತ್ತಿಗಳ ವೃದ್ಧಿಯೂ ಉಂಟಾಗುವಿಕೆಯು ಅದೊಂದು ಪ್ರಕೃತಿ

ನಿಯಮದಂತಿರುತ್ತದೆ. ಫಲತಃ ಗುಣದೃಷ್ಟಿಯು ಜೀವನನ್ನು ಪರಮಾತ್ಮಪದದ ಕಡೆಗೊಯ್ಯುತ್ತದೆ.

ಚೈತನ್ಯವಾದದಲ್ಲಿ ಅಸ್ತಿಕತೆ ಹಾಗೂ ಗುಣದೃಷ್ಟಿಯೂ ಜಡವಾದದಲ್ಲಿ ನಾಸ್ತಿಕತೆ ಹಾಗೂ ದೋಷದೃಷ್ಟಿಯೂ ಇರುತ್ತದೆ.

ದೃಷ್ಟಿ (ವಿಚಾರ-ಅಭಿಪ್ರಾಯ) ಯನ್ನು ಬದಲಿಸುವುದರಿಂದ ನರಕಕ್ಕೆ ಸಮಾನವಾದ ಪ್ರಸಂಗವೂ ಸ್ವರ್ಗಸಮಾನವಾಗಿ ಕಾಣುತ್ತದೆ. ದೋಷಗಳಲ್ಲಿ ಗುಣಗಳನ್ನು ಹುಡುಕುವ ಪ್ರಯತ್ನವನ್ನು ಮಾಡುವುದೇ ಸತ್ಪುರುಷಾರ್ಥವು. ತಮ್ಮಲ್ಲಿರುವ ದೋಷಗಳನ್ನು ಸುಧಾರಿಸಿಕೊಳ್ಳುವವರೆಗೆ ಇತರರ ದೋಷಗಳನ್ನು ನೋಡುವ ಅಧಿಕಾರವೆಲ್ಲಿಯದು ? ಎಂದಿನವರೆಗೆ ನಾವು ಎಲ್ಲೆಲ್ಲೂ ಗುಣಗಳನ್ನೇ ಕಾಣುವುದಿಲ್ಲವೋ ಅಂದಿನವರೆಗೆ ನಾವು ದೋಷದ ಭಂಡಾರದಂತಿರುವೆವು. ಸದ್ಗುಣಭರಿತನಾದ ಮನುಷ್ಯನಿಗೆ ಎಲ್ಲೆಲ್ಲೂ ಗುಣಗಳೇ ಕಾಣಬರುತ್ತವೆ. ಮಾತನಾಡುವವನ ಪ್ರಿಯ ಅಥವಾ ಅಪ್ರಿಯ ಶಬ್ದಗಳನ್ನು ಲಕ್ಷಿಸದೆ ಆತನ ಆಶಯ (ಅಭಿಪ್ರಾಯ) ದ ಕಡೆಗೆ ಲಕ್ಷ್ಯವನ್ನಿಡಬೇಕು.

ವಿಶ್ವದಲ್ಲಿ ಪವಿತ್ರವಾದ ಮಾನವಭೂಮಿಯಲ್ಲಿ ದೋಷದೃಷ್ಟಿರೂಪವಾದ ವಿಷಬೀಜವನ್ನು ಬಿತ್ತಿ ಅದನ್ನೇಕೆ ನರಕಭೂಮಿಯನ್ನಾಗಿಸಬೇಕು ? ಯಾವುದೊಂದು ವಿಷಯದಲ್ಲೂ ಕೆಟ್ಟ ಅಭಿಪ್ರಾಯವನ್ನಿಟ್ಟುಕೊಳ್ಳುವಿಕೆಯು ತನ್ನ ಕಾಲಿನ ಮೇಲೆ ತಾನೇ ಕೊಡಲಿಯ ಪೆಟ್ಟನ್ನು ಹಾಕಿಕೊಳ್ಳುವುದಕ್ಕೆ ಸಮಾನವಾಗಿದೆ.

ಗುಣದೃಷ್ಟಿಯು ಪರಮಾತ್ಮನ ನಿವಾಸಸ್ಥಾನವಾಗಿದೆ. ಗುಣದೃಷ್ಟಿಯುಳ್ಳವನ ನಾಲ್ಕು ಕಡೆಗಳಲ್ಲೂ ಪ್ರೇಮಪ್ರವಾಹವೂ, ದೋಷದೃಷ್ಟಿಯುಳ್ಳವನ ನಾಲ್ಕು ಕಡೆಗಳಲ್ಲೂ (ಸುತ್ತಲೂ) ದ್ವೇಷದ ಪ್ರವಾ-

ಹವೂ ನಿರಂತರ ಹರಿಯುತ್ತಿರುತ್ತದೆ. ಗುಣೈಕದರ್ಶಿಯು ಅತ್ಯಂತ ನೀಚವೃತ್ತಿಯುಳ್ಳ ಮನುಷ್ಯರಲ್ಲಿಯೂ ಪರಮಾತ್ಮಪದದ ಅಸ್ತಿತ್ವವಿರುತ್ತದೆಂದು (ಶಕ್ತಿರೂಪದಿಂದ) ತಿಳಿದು ಅವರನ್ನು ಸತ್ಕರಿಸುತ್ತಾನೆ.

ಸೂರ್ಯನ ಭ್ರಮಣೆಯಲ್ಲಿ ಕೇವಲ ಪ್ರಕಾಶವೇ ಕಾಣುವಂತೆ ಗುಣದೃಷ್ಟಿಯುಳ್ಳವನ ಭ್ರಮಣೆಯಲ್ಲಿ, ಅನುಭವದಲ್ಲಿ, ವಿಚಾರದಲ್ಲಿ, ವಚನದಲ್ಲಿ ಹಾಗೂ ವರ್ತನೆಯಲ್ಲಿ ಕೇವಲ ಪ್ರೇಮದ ಪ್ರಕಾಶವೇ ಕಂಡುಬರುತ್ತದೆ.

ಗುಣದೃಷ್ಟಿಯು ಸಮಭಾವೀದೃಷ್ಟಿಯಾಗಿದೆ ಹಾಗೂ ಸ್ವರ್ಗ ಮತ್ತು ಮೋಕ್ಷದ ಸಾಕ್ಷಾತ್ಕಾರಕ್ಕೆ ಸಮಾನವಾಗಿದೆ. ಗುಣದೃಷ್ಟಿಯಿಲ್ಲದವನ ಜೀವನವು ನರಕ ಅಥವಾ ಪಶುತುಲ್ಯವಾದ ನೀಚಜೀವನವಾಗಿದೆ. ಪವಿತ್ರನಾದ ಜೀವನೇ ಗುಣದೃಷ್ಟಿಯನ್ನು ಪಡೆಯಬಲ್ಲನು.

ಗುಣದೃಷ್ಟಿಯುಳ್ಳವನು ಸರ್ವದಾ ಪ್ರಸನ್ನನಾಗಿರುತ್ತಾನೆ ಮತ್ತು ದೋಷದರ್ಶಿಯಾದ ಮನುಷ್ಯನು ಸರ್ವದಾ ದ್ವೇಷಾಗ್ನಿಯಿಂದ ಪೀಡಿತನಾಗಿರುತ್ತಾನೆ. ಗುಣದೃಷ್ಟಿಯೇ ಸಾಧುತ್ವ ಹಾಗೂ ಸತ್ಯಧರ್ಮವಾಗಿದೆ. ಗುಣದರ್ಶಿಗಳ ಜೀವನವು ಸುಖಗಳ ನಿಧಿಯಂತಿರುತ್ತದೆ. ಗುಣದೃಷ್ಟಿಯುಳ್ಳವನೇ ಆತ್ಮಪಥದ ಪಥಿಕನಾಗಬಲ್ಲನು. ದಯೆಯುಳ್ಳವಳಾದ ತಾಯಿಯು ತನ್ನ ಅಶಕ್ತ ಹಾಗೂ ದುರ್ಬಲನಾದ ಬಾಲಕನ ಮೇಲೆ ವಿಶೇಷ ಮಮತೆಯನ್ನಿಡುವಂತೆ ದೋಷಿಯಾದ ಮಾನವನು ವಿಶೇಷ ದಯಾಪಾತ್ರನೆಂದು ತಿಳಿದು ಆತನಿಗೆ ವಿಶೇಷ ಸಹಾಯವನ್ನು ಮಾಡಬೇಕು. ಗುಣವಂತರಿಗೆ ಎಲ್ಲರೂ ಸಹಾಯವನ್ನು ಮಾಡುತ್ತಾರೆ. ಆದರೆ ದೋಷಿಗಳಿಗೂ ಸಹಾಯತೆಯನ್ನೀಯುವುದರಲ್ಲಿ ವಿಶೇಷ ಮಹತ್ವವಿದೆ.

ಎಲ್ಲರಲ್ಲಿಯೂ ಗುಣಗಳನ್ನು ಹುಡುಕಿರಿ ಮತ್ತು ದೋಷವನ್ನು ಹುಡುಕುವ ದುರಭ್ಯಾಸವನ್ನು ಬಿಡಿರಿ. ಇದೇ ಸರ್ವಶಾಸ್ತ್ರಗಳ ಸಾರವಾಗಿದೆ. ನಿತ್ಯವೂ ಗುಣದೃಷ್ಟಿಯನ್ನು ಮುಂದಿಟ್ಟುಕೊಂಡು ನಡೆಯಿರಿ. ಗುಣದೃಷ್ಟಿಯುಳ್ಳವರಾಗುವುದರಿಂದ ಎಲ್ಲ ತರದ ವೈರ-ವಿರೋಧಗಳು ಸ್ವತಃ ದೂರವಾಗುವುವು.

ಜಗತ್ತಿನಲ್ಲಿ ಪಾಪಾತ್ಮರಿರುವುದರಿಂದಲೇ ಮಹಾತ್ಮರ ಮಹತ್ತ್ವವು ತಿಳಿದುಬರುತ್ತದೆ. ಲೋಕದಲ್ಲಿ ಹಿಂಸಕರು ಹಾಗೂ ಪಾಪಾತ್ಮರಿಲ್ಲದಿದ್ದರೆ ದಯಾಳುಗಳು ಹಾಗೂ ಧರ್ಮಾತ್ಮರೆಂಬ ಭೇದವು ಹೇಗಿದ್ದೀತು? ಆತಏವ ಗುಣದೃಷ್ಟಿಯಿಂದ ಪವಿತ್ರಾತ್ಮರು ಪಾಪಾತ್ಮರಿಗೆ ಆಭಾರಿಗಳಾಗಿರಬೇಕು.

ಮರದ ಬುಡಕ್ಕೆ ನೀರು ಹಾಕುವುದರಿಂದ ಕಾಂಡ ಪತ್ರ ಫಲ ಪುಷ್ಪಾದಿಗಳಿಗೆ ಪೋಷಣೆಯು ದೊರಕುವಂತೆ ಗುಣದೃಷ್ಟಿರೂಪವಾದ ಜಲಸೇಚನದಿಂದ ಆತ್ಮನ ಸಮಸ್ತಗುಣಗಳಿಗೆ ಪೋಷಣೆಯು ದೊರಕುತ್ತದೆ. ಬೆಕ್ಕು ತನ್ನ ಹಲ್ಲುಗಳಿಂದ ತನ್ನ ಮರಿಯನ್ನು ಹಿಡಿದುಕೊಳ್ಳುತ್ತದೆ ಹಾಗೂ ಇಲಿಯನ್ನೂ ಹಿಡಿದುಕೊಳ್ಳುತ್ತದೆ. ಇವೆರಡರಲ್ಲಿ ಮೊದಲನೆಯದರಲ್ಲಿ ಪ್ರೇಮವೂ ಎರಡನೆಯದರಲ್ಲಿ ದ್ವೇಷವೂ ಇರುತ್ತದೆ. ಆದರಂತೆ ಜೀವನ ದೃಷ್ಟಿಯಲ್ಲಿ ಗುಣಗ್ರಾಹಕತೆಯೂ ಇರಬಲ್ಲುದು; ದೋಷಗ್ರಾಹಕತೆಯೂ ಇರಬಲ್ಲುದು. ದೋಷದೃಷ್ಟಿಯನ್ನು ದೂರಗೊಳಿಸುವುದರಿಂದ ಶುದ್ಧಗುಣದೃಷ್ಟಿಯು ಪ್ರಾಪ್ತ-ವಾಗುವುದು.

ಮಹಾಕವಿ ಶ್ರೀ ವೀರನಂದಿಗಳು ಸಜ್ಜನ ಮತ್ತು ದುರ್ಜನರ ಸ್ವರೂಪವನ್ನು ವರ್ಣಿಸುತ್ತ ಹೀಗೆ ಹೇಳಿರುವರು :—

“ಗುಣಾನಗೃಹ್ಣನ್ ಸುಜನೋ ನ ನಿರ್ವೃತಿಂ ಪ್ರಯಾತಿ
ದೋಷಾನವದನ್ನ ದುರ್ಜನಃ ।
ಚಿರಂತನಾಭ್ಯಾಸನಿಬಂಧನೇರಿತಾ ಗುಣೇಷು ದೋಷೇಷು ಚ
ಜಾಯತೇ ಮತಿಃ ॥”

(ಚಂದ್ರಪ್ರಭಚರಿತಮ್)

ಅರ್ಥಾತ್ “ಸತ್ಪುರುಷನು ಇತರರಲ್ಲಿರುವ ಗುಣಗಳನ್ನು ಗ್ರಹಿಸದೆ ತೃಪ್ತಿಯನ್ನು ಹೊಂದಲಾರನು. ಅಂತೆಯೇ ದುರ್ಜನನು ಇತರರಲ್ಲಿರುವ ದೋಷಗಳನ್ನು ಹೇಳದೆ ತೃಪ್ತಿಯನ್ನು ಪಡೆಯಲಾರನು. ಬಹುಕಾಲದ ಅಭ್ಯಾಸದ ಕಾರಣದಿಂದ ಪ್ರೇರಿತವಾದ ಬುದ್ಧಿಯು ಗುಣಗಳಲ್ಲಿಯೂ ದೋಷಗಳಲ್ಲಿಯೂ ಪ್ರವರ್ತಿಸುತ್ತದೆ.” ಇದರಿಂದ ಗುಣಗ್ರಾಹಕ ಮತ್ತು ದೋಷಗ್ರಾಹಕಬುದ್ಧಿಗೆ ಚಿರಂತನಾಭ್ಯಾಸವೇ ಕಾರಣವಾಗಿರುತ್ತದೆಂಬುದು ಸ್ಪಷ್ಟವಾಗಿದೆ. ಆದಕಾರಣ ಆತ್ಮಹಿತೇಚ್ಛುವಾದ ಮನುಷ್ಯನು ದೋಷಗ್ರಹಣೆಯ ಅಭ್ಯಾಸವನ್ನು ತೊರೆದು ಗುಣಗ್ರಹಣೆಯ ಅಭ್ಯಾಸವನ್ನು ಮಾಡುವವನಾಗಿ ಶುದ್ಧಗುಣದೃಷ್ಟಿಯುಳ್ಳವನಾಗಬೇಕು.

## ದೋಷದೃಷ್ಟಿ

ಯಾವನೊಬ್ಬನ ದೋಷವನ್ನು ಹುಡುಕುವುದೂ ಒಳಿತಲ್ಲ. ದೋಷಿಗಳಲ್ಲಿರುವ ದೋಷಗಳನ್ನು ನೋಡುವುದರಿಂದ ನಾವೂ ದೋಷಿಗಳಾಗುವೆವು. ನಿರ್ಧನರು ಹಾಗೂ ರೋಗಿಗಳು ಉಪೇಕ್ಷಿಸಲು ಯೋಗ್ಯರಾಗಿರುವುದಿಲ್ಲ. ಹಾಗೆಯೇ ಗುಣಹೀನರೂ ದೋಷಿಗಳೂ ಆದ ವ್ಯಕ್ತಿಗಳೂ ತಿರಸ್ಕಾರಯೋಗ್ಯರಾಗಿರುವುದಿಲ್ಲ. ಯಾರನ್ನಾದರೂ ಟೀಕಿಸಿ ಅಥವಾ ನಿಂದಿಸಿ ಅವರನ್ನು ಸುಧಾರಿಸಲು ಯತ್ನಿಸುವುದೆಂದರೆ ಕೆಸರಿನಿಂದ ಕೆಸರನ್ನು ತೊಳೆಯಲು ಯತ್ನಿಸಿದಂತೆಯೇ ಸರಿ. ಒಬ್ಬನ

ದೋಷವನ್ನು ಇನ್ನೊಬ್ಬನೊಡನೆ ಹೇಳಿದುದಾದರೆ ಅವನು ಅದನ್ನು ಮತ್ತೊಬ್ಬನೊಡನೆ ಹೇಳುವನು. ಹೀಗೆ ಅದು ಪರಂಪರೆಯಿಂದ ಒಬ್ಬನಿಂದೊಬ್ಬನಿಗೆ ತಿಳಿದು ಊರೆಲ್ಲ ಹರಡಿ ಬಿಂದುವಿನಂತೆ ಅಲ್ಪವಾದ ದೋಷವೂ ಸಿಂಧುವಿನಂತೆ ವಿಶಾಲವಾಗಿ ವ್ಯಾಪಿಸುತ್ತದೆ. ಕ್ರಮಶಃ ದೋಷದರ್ಶಿಯು ಬಿಂದುವಿನಂತಹ ಅಲ್ಪವಿಷವನ್ನು ಸಿಂಧುವಿನಂತೆ ವಿಸ್ತೃತಗೊಳಿಸಿ ವಿಶ್ವದಲ್ಲಿ ವಿಷದ ಪರಮಾಣುಗಳನ್ನು ಬಿತ್ತರಿಸು-ತ್ತಾನೆ. ಅದರಂತೆ ಗುಣದರ್ಶಿಯು ವಿಶ್ವದಲ್ಲಿ ಗುಣರೂಪವಾದ ಅಮೃತವನ್ನು ಹರಡಿಸುತ್ತಾನೆ. ವಿಶ್ವದಲ್ಲಿ ಗುಣದೃಷ್ಟಿಯು ಸುಖದ ಉಪಾದಾನವಾಗಿಯೂ ದೋಷದೃಷ್ಟಿಯು ದುಃಖದ ಉಪಾದಾನ ವಾಗಿಯೂ ಇರುತ್ತದೆ.

ಮನುಷ್ಯನು ದೋಷದೃಷ್ಟಿರೂಪವಾದ ವಿಷವನ್ನು ತನ್ನ ಹೃದಯದಿಂದ ದೂರಗೊಳಿಸಿ ಗುಣದೃಷ್ಟಿರೂಪವಾದ ಅಮೃತದಿಂದ ತನ್ನ ಹೃದಯವನ್ನು ತುಂಬಿಸಿಕೊಳ್ಳಬೇಕು. ಇತರರ ದೋಷಗಳನ್ನು ಹೇಳುವುದೆಂದರೆ ತನ್ನ ಗುಣಗಳನ್ನು ಕೆಡಿಸಿಕೊಳ್ಳುವುದೆಂದರ್ಥವು. ದೋಷದೃಷ್ಟಿಯು ಹಿಂಸಕದೃಷ್ಟಿಯಾಗಿದೆ ಮತ್ತು ಗುಣದೃಷ್ಟಿಯು ಅಹಿಂಸಕದೃಷ್ಟಿಯಾಗಿರುತ್ತದೆ. ದೋಷದೃಷ್ಟಿಯನ್ನು ತ್ಯಾಗಮಾಡದೆ ಅಹಿಂಸೆ ಅಥವಾ ದಯೆಯ ಪಾಲನೆಯು ಅಶಕ್ಯವು. ಆರ್ಯಜನರು ಮದ್ಯಮಾಂಸಗಳನ್ನು ಹೇಯದೃಷ್ಟಿಯಿಂದ ನೋಡುವಂತೆ ದೋಷ ದರ್ಶನವನ್ನೂ ಹೇಯವನ್ನಾಗಿ ತಿಳಿಯಬೇಕು.

ದೋಷದೃಷ್ಟಿಯು ಸಂಕುಚಿತವಾದುದು ಹಾಗೂ ಭಾರ ವಾದುದು. ಗುಣದೃಷ್ಟಿಯು ಉದಾರವಾದುದು ಹಾಗೂ ಲಘು (ಹಗುರ) ವಾದುದು. ಭಾರವಾದ ವಸ್ತುವು ಕೆಳಗೆ ಹೋಗುವುದೂ ಹಗುರವಾದ ವಸ್ತುವು ಮೇಲೇರುವುದೂ ಸ್ವಾಭಾವಿಕವಾಗಿದೆ. ಅತ

ಏನ ದೋಷದೃಷ್ಟಿಯು ಮನುಷ್ಯನನ್ನು ಅಧೋಗತಿಗೂ ಗುಣ ದೃಷ್ಟಿಯು ಉಚ್ಚಗತಿಗೂ ಒಯ್ಯುತ್ತದೆ.

ದೋಷದೃಷ್ಟಿಯಿಂದ ಈರ್ಷ್ಯೆ ದ್ವೇಷ ವೈರ ವಿರೋಧ ನಿಂದೆ ಮೊದಲಾದ ಪಾಪಮಯ ಭಾವನೆಗಳುಂಟಾಗುತ್ತವೆ. ಆದಕಾರಣ ಮಾನವನು ಪರದೋಷಸಹಿಷ್ಣುವಾಗಿರಬೇಕು. ಪರದೋಷದಂತಹ ಸಾಮಾನ್ಯ ವಿಷಯವನ್ನೂ ಸಹಿಸಲಾರದವನು ತನ್ನ ಶರೀರದಲ್ಲಿ ರೋಗಾದಿಗಳಿಂದುಂಟಾದ ಭಯಂಕರ ವೇದನೆಯನ್ನು ಹೇಗೆ ಸಹಿಸ ಬಲ್ಲನು ?

ಹಂದಿಯು ನಂದನವನದಲ್ಲಿಯೂ ಮಲ (ಅಮೇಧ್ಯ) ವನ್ನು ಹುಡುಕುವಂತೆ ದೋಷದರ್ಶಿಯು ಪರಮಾತ್ಮಸ್ವರೂಪರಾದ ಮಹಾತ್ಮ ರಲ್ಲಿಯೂ ದೋಷವನ್ನು ಹುಡುಕುತ್ತಾನೆ. ಪರಧನವನ್ನು ಅಡಗಿ ಸುವುದು (ಅಥವಾ ಅಪಹರಿಸುವುದು) ಕಳ್ಳತನವಾದರೆ ಪರಗುಣರೂಪ ವಾದ ಧನವನ್ನು ಅಡಗಿಸುವುದು ದೊಡ್ಡ ಕಳ್ಳತನವು.

ಮನುಷ್ಯನು ಇತರರ ದೋಷಗಳನ್ನು ನೋಡದೆ ಆ ದೋಷ ಗಳ ಮಧ್ಯದಲ್ಲಡಗಿರುವ ಚೇತನಾನುಯನಾದ ಆತ್ಮನನ್ನು ನೋಡ ಬೇಕು.

ರೋಗಿಯಾದ ಮನುಷ್ಯನ ಶರೀರದಿಂದ ದುರ್ಗಂಧ ಹೊರಡು ತ್ತಿದ್ದರೂ ನಾವು ಅದನ್ನು ಲಕ್ಷಿಸದೆ ಪ್ರೇಮದಿಂದ ಅವನ ಸೇವೆಯನ್ನು ಮಾಡುವಂತೆ ದೋಷಿಯಾದ ಮನುಷ್ಯನ ದೋಷಗಳನ್ನು ಲಕ್ಷಿಸದೆ ಪ್ರೇಮದಿಂದ ಆತನ ಸೇವೆಯನ್ನು ಮಾಡಿ ಆತನು ದೋಷಮುಕ್ತ ನಾಗುವಂತೆ ಯತ್ನಿಸಬೇಕು. ನೀಚಮನುಷ್ಯರು ದೋಷಗಳನ್ನು ಹುಡುಕುತ್ತಾರೆ. ಆದರೆ ಸತ್ಪುರುಷರು ದೋಷಗಳನ್ನು ಮರೆಮಾಡು

ತ್ತಾರೆ. ಭಯಂಕರ ಹಿಂಸ್ರಪ್ರಾಣಿಗಳು ಪ್ರವೇಶಿಸದಂತೆ ಎಚ್ಚರದಿಂದ ನಾವು ನಮ್ಮ ಮನೆಯನ್ನು ರಕ್ಷಿಸಿಕೊಳ್ಳುವಂತೆ ಪರದೋಷಗ್ರಹಣ ಮೊದಲಾದ ದುರ್ಭಾವಗಳು ಪ್ರವೇಶಿಸದಂತೆ ಎಚ್ಚರದಿಂದ ನಾವು ನಮ್ಮ ಹೃದಯವನ್ನು ರಕ್ಷಿಸಿಕೊಳ್ಳಬೇಕು.

ಇತರ ಮನುಷ್ಯನ ದೋಷಗಳನ್ನು ನೋಡುವ ಮೊದಲು "ನಾವು ನಮ್ಮ ಅಜ್ಞಾನವಸ್ಥೆಯಲ್ಲಿ ಹೇಗಿದ್ದೆವು? ನಾವು ಈ ಮನುಷ್ಯನಿಗಿಂತಲೂ ಅಧಿಕ ದೋಷಿಗಳಾಗಿರಲಿಲ್ಲವೇ ?" ಎಂಬುದನ್ನು ಆಲೋಚಿಸಬೇಕು. ಹೀಗೆ ಆಲೋಚಿಸುವುದರಿಂದ ನಮ್ಮಲ್ಲಿ ಪರದೋಷಸಹಿಷ್ಣುತೆಯುಂಟಾಗುವುದು ಮಾತ್ರವಲ್ಲದೆ ನಾವು ಗುಣಾಧಿಕರೂ ನಿರ್ದೋಷಿಗಳೂ ಆಗುವೆವು. ಮನುಷ್ಯರು ಹೆಚ್ಚಾಗಿ ಇನ್ನೊಬ್ಬರ ದೋಷಗಳನ್ನೇ ನೋಡುತ್ತಾರಲ್ಲದೆ ತಮ್ಮ ದೋಷಗಳನ್ನು ತಾವು ತಿಳಿಯುವವರು ಅತಿವಿರಲ. ತನ್ನ ದೋಷಗಳನ್ನು ತಾನು ನೋಡುವ ವ್ಯಕ್ತಿಯ ಮಹತ್ತ್ವವನ್ನು ಮಹಾಕವಿ ಶ್ರೀ ವಾದೀಭಸಿಂಹಸೂರಿಗಳು ಬಹು ಸುಂದರವಾಗಿ ವರ್ಣಿಸಿರುವರು :—

**"ಅನ್ಯದೀಯಮಿವಾತ್ಮೀಯಮಪಿದೋಷಂ ಪ್ರಪಶ್ಯತಾ ।**
**ಕಃ ಸಮಃ ಖಲು ಮುಕ್ತೋಽಯಂ ಯುಕ್ತಃ ಕಾಯೇನ ಚೇದಪಿ ॥"**

(ಕ್ಷತ್ರಚೂಡಾಮಣಿ)

—"ಇತರ ಮನುಷ್ಯನ ದೋಷವನ್ನು ನೋಡುವಂತೆ ತನ್ನ ದೋಷಗಳನ್ನೂ ನೋಡುವಂತಹ ಮನುಷ್ಯನಿಗೆ ಸಮಾನನಾದವನಾರು ? ಈ ಆತ್ಮದೋಷದರ್ಶಿಯು ಶರೀರಸಹಿತನಾಗಿದ್ದರೂ ಮುಕ್ತಾತ್ಮನಿಗೆ ಸಮಾನನು."

ಮಣ್ಣು ಅಥವಾ ಧೂಳನ್ನು ಶೋಧಿಸುವ ಮನುಷ್ಯನು ತನ್ನ ಪ್ರಯತ್ನದಿಂದ ಆ ಮಣ್ಣು ಧೂಳುಗಳಿಂದಲೂ ಚಿನ್ನವನ್ನು ಪಡೆಯುತ್ತಾನೆ. ಅದರಂತೆ ಪ್ರಯತ್ನಶೀಲನಾದ ಗುಣಗ್ರಾಹಿಯು ಶಕ್ತಿರೂಪದಿಂದ ಅನಂತ ಜ್ಞಾನಾದಿಗುಣಧಾರಕನಾದ ಮನುಷ್ಯನಿಂದ ಎಷ್ಟು ಗುಣಗಳನ್ನಾದರೂ ಗ್ರಹಿಸಬಲ್ಲನು. ಆದರೆ ಪಾತ್ರತೆ (ಯೋಗ್ಯತೆ) ಯಿರಬೇಕಾದುದು ಅವಶ್ಯ. ಏಕೆಂದರೆ ದೋಷಿಯು ದೋಷಗಳನ್ನೇ ಗ್ರಹಣಮಾಡುತ್ತಾನೆ ಹಾಗೂ ಗುಣಿಯು ಗುಣಗಳನ್ನೇ ಗ್ರಹಣ ಮಾಡುತ್ತಾನೆ.

## ನಿಂದೆಯೂ ನಿಂದಕನೂ

ಪರನಿಂದೆಯು ಮಹಾಪಾಪವೂ ಸ್ವಪರಪತನದ ಕಾರಣವೂ ಆಗಿರುತ್ತದೆ. ಪರಂತು ಆತ್ಮನಿಂದೆಯು ಪವಿತ್ರಕರ್ತವ್ಯವೂ ಪ್ರಾಯಶ್ಚಿತ್ತದ ದ್ಯೋತಕವೂ ಆತ್ಮಶುದ್ಧಿಯನ್ನುಂಟುಮಾಡುವಂತಹದೂ ಆಗಿದೆ. ಇತರರಿಂದ ತನ್ನ ನಿಂದೆಯನ್ನು ಕೇಳಿಯೂ ಸಮಭಾವವನ್ನು ಹೊಂದುವುದಂತೂ ವಿಶಿಷ್ಟ ಮಹತ್ವವುಳ್ಳ ಹಾಗೂ ಪವಿತ್ರವಾದ ಕಾರ್ಯವಾಗಿದೆ.

ಯಾರ ಮುಂದೆಯೂ ಹೇಳಬಾರದಂತಹ ಅಥವಾ ಕೇಳಿದವರ ಮನಸ್ಸಿಗೆ ನೋವುಂಟಾಗುವಂತಹ ಮಾತನ್ನು ಹೇಳಬಾರದು. ನಿಂದಿಸುವವನಿಗೆ ನಿಂದೆಮಾಡಲು ಸ್ವಲ್ಪ ಸಮಯಮಾತ್ರ ತಗಲುತ್ತದೆ. ಆದರೆ ನಿಂದಿಸಿಕೊಂಡವನ ಹೃದಯವು ವರ್ಷಗಟ್ಟಲೆ ವರೆಗೆ ದುಃಖಕ್ಕೀಡಾಗುತ್ತದೆ. ದಾನಿಯು ಇನ್ನೊಬ್ಬನ ಕೃಪಣತೆಯನ್ನು ಅಥವಾ ಕ್ಷಮಾಶೀಲನು ಇನ್ನೊಬ್ಬನ ಕ್ರೋಧವನ್ನು ನಿಂದಿಸಿದುದಾದರೆ ಆ ಪಾಪವು ಕೃಪಣತೆ ಹಾಗೂ ಕ್ರೋಧಕ್ಕಿಂತಲೂ ಅಧಿಕವಾಗುತ್ತದೆ

ಮತ್ತು ನಿಂದಕನ ದಾನಶೀಲತೆ ಹಾಗೂ ಕ್ಷಮಾಧರ್ಮವು ನಾಶವಾಗುತ್ತದೆ. ನಿಂದೆ ಮಾಡುವಿಕೆಯು ವಿಶ್ವದ ಆಧ್ಯಾತ್ಮಿಕ ಆರೋಗ್ಯವನ್ನು ಕೆಡಿಸುವಂತಹುದೂ ತನ್ನ ಮಾತಿನಿಂದಲೇ ತನ್ನ ಅಪಾತ್ರತೆಯನ್ನು ಪ್ರಕಟಿಸುವಂತಹುದೂ ಆಗಿದೆ. ಇತರರನ್ನು ನಿಂದಿಸುವುದೆಂದರೆ ನಿಂದಾರೂಪವಾದ ಕತ್ತರಿಯಿಂದ ತನ್ನ ಹೃದಯವನ್ನು ಕತ್ತರಿಸಿಕೊಳ್ಳುವುದೇ ಆಗಿದೆ. ನಿಂದೆಯಿಂದ ನಿಂದೆ ಮಾಡುವವನ ಮನಸ್ಸಿನಲ್ಲಿಯೂ ನಿಂದಿಸಿಕೊಳ್ಳುವವನ ಮನಸ್ಸಿನಲ್ಲಿಯೂ ಮಲಿನತೆಯುಂಟಾಗುತ್ತದೆ. ದೋಷವುಳ್ಳವನ ದೋಷಕ್ಕಿಂತಲೂ ನಿಂದಿಸುವ ಅಪರಾಧವು ಅಧಿಕವಾದುದು. ಪ್ರಾಯಶಃ ನಿಂದೆಯು ತನ್ನ ದೋಷವನ್ನು ಮರೆಮಾಡುವುದಕ್ಕಾಗಿ ಹಾಗೂ ಇತರರ ದೋಷವನ್ನು ಪ್ರಕಟಿಸುವುದಕ್ಕಾಗಿ ಮಾಡಲ್ಪಡುತ್ತದೆ. ನಿಂದಿಸುವ ಮನುಷ್ಯನು ಈರ್ಷ್ಯಾಗ್ನಿಯಿಂದ ತಾನು ಸುಡುತ್ತಿರುವವನಾಗಿ ಇತರರನ್ನೂ ಸುಟ್ಟುಹಾಕುತ್ತಾನೆ. ಯಾರ ನಿಂದೆಯನ್ನೂ ಮಾಡದಿರುವಿಕೆ ಹಾಗೂ ಯಾರ ದೋಷವನ್ನೂ ನೋಡದಿರುವಿಕೆಯು ಅಭಯದಾನವನ್ನು ಕೊಡುವುದಕ್ಕೆ ಸಮಾನವಾಗಿದೆ.

ಹಗಲಿನಂತೆ ರಾತ್ರಿಯೂ ಉಪಕಾರಕವಾಗಿದೆ. ಅದರಂತೆ ಪ್ರಶಂಸಕನಂತೆ ನಿಂದಕನೂ ಉಪಕಾರಕನಾಗಿರುವನು. ನೀವು ನಿಮ್ಮನ್ನು ನಿಂದಿಸುವವನನ್ನು ಆಶೀರ್ವದಿಸಿರಿ. ಏಕೆಂದರೆ ನೀವಾಗಿಯೇ ಪಡೆಯುವುದಕ್ಕಿಂತಲೂ ಅಧಿಕವಾದ ಶ್ರೇಯಸ್ಸನ್ನು ಆತನು ನಿಮಗುಂಟುಮಾಡುವನು. ಆತನ ನಿಂದಾಜನಕವಾದ ಮಾತು ನಿಮ್ಮನ್ನು ದುರ್ಗುಣಗಳಿಂದ ರಕ್ಷಿಸಲು ರಕ್ಷಕನಂತಿರುವುದು. ನಿಂದಕನಿಗೆ ನೀವು ಕೃತಜ್ಞರಾಗಿರಬೇಕು. ಏಕೆಂದರೆ ಆತನು ನಿಮ್ಮ ಗುಣಗಳ ಅಭಿವೃದ್ಧಿಗೆ ಕಾರಣನಾಗಿರುವನು. ಆತನು ನಿಮಗರಿಯದ ನಿಮ್ಮ ದೋಷಗಳನ್ನು ಎತ್ತಿತೋರಿಸುವುದರಿಂದ ನೀವು ಆ ದೋಷಗಳನ್ನು

ತೊರೆದು ಆತ್ಮಸುಧಾರಣೆಯನ್ನು ಮಾಡಿಕೊಳ್ಳಲು ಸಮರ್ಥರಾಗುವಿರಿ. ಯಾವನಾದರೂ ನಿಮ್ಮನ್ನು ನಿಂದಿಸುವುದರಿಂದ ಪ್ರಸನ್ನನಾಗುವನಾದರೆ ನೀವು ಪರಮಭಾಗ್ಯಶಾಲಿಗಳು. ಏಕೆಂದರೆ ನೀವು ಏನೊಂದೂ ಪರಿಶ್ರಮವಿಲ್ಲದೆ ಆತನ ಪ್ರಸನ್ನತೆಗೆ—ಸುಖಕ್ಕೆ ಸಹಾಯಕರಾಗುವಿರಿ. ಕೆಲವರು ತನು-ಮನ-ಧನಗಳಿಂದ ಸಹಾಯ ಮಾಡಿ ಇತರರನ್ನು ಸಂತೋಷಪಡಿಸಲು ಯತ್ನಿಸುತ್ತಾರೆ. ಆದರೆ ಈ ನಿಂದಕನು ಕೇವಲ ನಿಮ್ಮನ್ನು ನಿಂದಿಸುವುದರಿಂದಲೇ ಪ್ರಸನ್ನತೆಯನ್ನು ಪಡೆಯುವುದರಿಂದ ಆತನನ್ನು ತೃಪ್ತಿಗೊಳಿಸಲು ನೀವು ಯಾವ ಪ್ರಯತ್ನವನ್ನೂ ಮಾಡಬೇಕಾಗಿರುವುದಿಲ್ಲ. ಆದರೆ ಆತನ ಪ್ರಸನ್ನತೆಗಾಗಿ ನೀವು ನಿಮ್ಮ ನಿಂದೆಯನ್ನು ಕೇಳುವ ಉದಾರತೆಯನ್ನೂ ಸಹಿಷ್ಣುತೆಯನ್ನೂ ಹೊಂದಬೇಕು.

ಅಧಿಕಪ್ರಭಾವವುಳ್ಳ ಔಷಧವು ರೋಗಿಗೆ ಅಧಿಕಹಿತವನ್ನುಂಟುಮಾಡುವಂತೆ ಅತಿ ದುಷ್ಟಪ್ರಕೃತಿಯುಳ್ಳವನಾದ ನಿಂದಕನು ನಿಮಗೆ ಅಧಿಕಹಿತವನ್ನುಂಟುಮಾಡುವನು. ನಿಂದಕನು ನಮ್ಮ ಜೀವನಪಥದಲ್ಲಿ ಪ್ರಕಾಶದಂತಿದ್ದು ದೋಷರೂಪವಾದ ಏರುತಗ್ಗುಗಳಲ್ಲಿ ಬೀಳುವಿಕೆಯಿಂದ ನಮ್ಮನ್ನು ರಕ್ಷಿಸುವನು. ಕತ್ತಲೆಯಿರುವ ಮನೆಯನ್ನು ಕಳ್ಳರು ಪ್ರವೇಶಿಸಬಲ್ಲರಲ್ಲದೆ ತೀವ್ರಪ್ರಕಾಶವುಳ್ಳ ಮನೆಯನ್ನು ಪ್ರವೇಶಿಸಲಾರರು. ಅದರಂತೆಯೇ ನಿಂದಕರೂಪವಾದ ಪ್ರಕಾಶವಿರುವಲ್ಲಿ ದೋಷರೂಪವಾದ ಕಳ್ಳರು ನಮ್ಮನ್ನಾಕ್ರಮಿಸಲಾರರು. ಸುವರ್ಣದ ಶುದ್ಧಿಗೆ ಶಂಖದ್ರವ (ಆ್ಯಸಿಡ್-ತೇಜಾಬ್) ವು ಸಹಾಯಕವಾಗಿರುವಂತೆ ಆತ್ಮಶುದ್ಧಿಗೆ ನಿಂದಕನು ಸಹಾಯಕನಾಗಿರುತ್ತಾನೆ. ಯಾವನಾದರೊಬ್ಬನ ನಿಂದಾಯುಕ್ತವಾದ ಹಾಗೂ ಅಪಮಾನಜನಕವಾದ ಮಾತನ್ನು ಕೇಳಿ ಆತನಲ್ಲಿ ಅಪ್ರಸನ್ನತೆಯನ್ನು ಹೊಂದುವಿಕೆಯು

ಟೆಲಿಫೋನಿನ ಮೂಲಕ ಅಶುಭಸಮಾಚಾರವನ್ನು ಕೇಳಿ ಟೆಲಿಫೋನಿನ ಮೇಲೆ ಕ್ರೋಧವನ್ನು ಹೊಂದುವುದಕ್ಕೆ ಸಮಾನವಾಗಿದೆ. ಛಳಿ, ಸೆಖೆ, ಮಳೆ ಇವುಗಳ ಪೀಡೆಗಾಗಿ ಯಾರ ಮೇಲೆಯೂ ಕ್ರೋಧವನ್ನು ಮಾಡ ಲಾಗುವುದಿಲ್ಲ. ಹಾಗೆಯೇ ನಿಂದಕನ ನಿಂದಾಯುಕ್ತವಾದ ಪ್ರತಿಕೂಲ ಶಬ್ದಗಳಿಗಾಗಿ ಆತನ ಮೇಲೆ ಕ್ರೋಧವನ್ನು ಮಾಡಬಾರದು. ನಮ್ಮ ಶರೀರವೇ ನಮ್ಮ ಇಚ್ಛೆಯಂತೆ ನಡೆಯದಿರುವಾಗ ಇತರರು ನಮ್ಮ ಕುರಿತು ಒಳ್ಳೆಯ ಮಾತುಗಳನ್ನೇ ಹೇಳಬೇಕು ಅಥವಾ ಬರೆಯಬೇಕು ಎಂದು ಹೇಳುವ ಅಧಿಕಾರ ನಮಗೆಲ್ಲಿ? ನಿಂದೆ ಹಾಗೂ ನಿಂದಕನ ಮೇಲೆ ದ್ವೇಷವನ್ನು ತಾಳುವುದರಿಂದ ಯಾವತರದ ಆತ್ಮಸುಧಾ-ರಣೆಯೂ ಆಗಲಾರದು. ಕೇವಲ ಸಮಭಾವವನ್ನಿಡುವುದರಲ್ಲೇ ಶ್ರೇಯಸ್ಸಿದೆ ಹಾಗೂ ಸುಖವಿದೆ.

## ಪ್ರಶಂಸಕ

ಮನುಷ್ಯನಿಗೆ ತನ್ನ ಅನುಯಾಯಿಗಳಿಗಿಂತಲೂ ಟೀಕಾಕಾರ ರಿಂದ ವಿಶೇಷ ಪ್ರಯೋಜನವು ಲಭಿಸುತ್ತದೆ. ಶತ್ರುವಿನ ಮೂಲಕ ತನ್ನ ರಕ್ಷಣೆಯಾಗಬೇಕೆಂದು ಯಾರೂ ಬಯಸುವುದಿಲ್ಲ. ಪರಂತು ಮಿತ್ರರಿಂದ ತನಗೆ ಘಾತವಾಗಬಾರದು ಮತ್ತು ಅವರಿಂದ ತನ್ನ ರಕ್ಷಣೆ ಯಾಗಬೇಕೆಂದು ಪ್ರಾಯಶಃ ಎಲ್ಲರೂ ಬಯಸುತ್ತಾರೆ. ಶತ್ರುವು ನಿಂದಾಜನಕ ಅಪ್ರಿಯ ವಚನಗಳನ್ನಾಡಿ ನಮ್ಮ ಸ್ವಲ್ಪ ಸಮಯವನ್ನು ಹಾಳುಮಾಡುತ್ತಾನೆ. ಆದರೆ ಮಿತ್ರರು ಪ್ರಶಂಸಾತ್ಮಕ ವಚನ ಗಳನ್ನಾಡಿ ನಮ್ಮ ಬಹು ಸಮಯವನ್ನು ಕೆಡಿಸುತ್ತಾರೆ. ನಿಂದಕ ಹಾಗೂ ಪ್ರಶಂಸಕ ಇವರಿಬ್ಬರೂ ನಮ್ಮ ಕಣ್ಣಿಗೆ ಧೂಳೆರಚುತ್ತಾರೆ. ನಿಂದಕನೆರಚಿದ ಧೂಳು ಮೆಣಸಿನಪುಡಿಯಂತೆ ತೀಕ್ಷ್ಣವಾಗಿದ್ದರೂ ಅದರ ಬಾಧೆ (ಉರಿ) ಯನ್ನು ಬೇಗನೆ ಪರಿಹರಿಸಲು ಸಾಧ್ಯವಿದೆ.

ಆದರೆ ಪ್ರಶಂಸಕನೆರಚುವ ಧೂಳು ಹಾಗಲ್ಲ. ಅದು ಚಿನ್ನದ ಪುಡಿ ಯಂತೆ ಕಣ್ಣಿಗೆ ಬಹು ಅಪಾಯಕಾರಿಯಾಗಿದೆ. ಅದನ್ನು ಹೋಗ ಲಾಡಿಸುವುದೂ ಬಹುಕಷ್ಟ. ಆದಕಾರಣ ಆತ್ಮನಿಗೆ ನಿಂದಕನಿಗಿಂತಲೂ ಪ್ರಶಂಸಕನು ಹೆಚ್ಚಿನ ಘಾತಕನಾಗಿರುವನು. ಅಪಮಾನಪರೀಷಹ ವನ್ನು ಜಯಿಸಿದವನು ದೇಶ (ಅಂಶ) ವಿಜಯಿಯೆಂದೂ ಮಾನಪರೀ ಷಹವನ್ನು ಜಯಿಸಿದವನು ಸರ್ವವಿಜಯಿಯೆಂದೂ ಶಾಸ್ತ್ರಕಾರರು ಹೇಳಿರುತ್ತಾರೆ. ಇತರರಿಂದ ತನ್ನ ನಿಂದೆಯನ್ನು ಕೇಳುವ ಸಂದರ್ಭ ದಲ್ಲಿ ಸಮಭಾವವನ್ನು ತಾಳುವುದು ಅಷ್ಟೇನೂ ಕಷ್ಟವಲ್ಲ. ಆದರೆ ತನಗೆ ಮಾನ ಸನ್ಮಾನ ಪ್ರಶಂಸಾದಿಗಳು ಪ್ರಾಪ್ತವಾದಾಗ ಸಮಭಾವ ವನ್ನು ತಾಳುವಿಕೆಯು ಅತಿ ಕಷ್ಟವು. ಇಂತಹ ಪ್ರಸಂಗಗಳಲ್ಲಿ ಸಮ ಭಾವ ಅಥವಾ ಸಂಯಮವನ್ನು ಹೊಂದುವ ಮಹಾತ್ಮನೇ ಪೂರ್ಣ ವಿಜಯಿಯೆಂದು ಹೇಳಲ್ಪಡುತ್ತಾನೆ.

## ಭೋಗ

ಉಚ್ಛಿಷ್ಟ (ಎಂಜಲು) ವಾಗಿರುವ ಉತ್ತಮ ಪಕ್ವಾನ್ನವೂ ಸೇವಿ ಸುವುದಕ್ಕೆ ಅಯೋಗ್ಯವಾಗಿರುವಂತೆ ಉತ್ತಮವಾದ ಭೋಗಗಳು ಅನಂತಜೀವಗಳಿಂದ ಬಾರಿಬಾರಿಗೆ ಅನುಭವಿಸಿಬಿಡಲ್ಪಟ್ಟುವುಗಳಾದುದ ರಿಂದ ಉಚ್ಛಿಷ್ಟಸಮಾನವಾದ ಆ ಭೋಗಗಳೂ ಸೇವಿಸುವುದಕ್ಕೆ ಯೋಗ್ಯವಾಗಿರುವುದಿಲ್ಲ. ಭೋಗವನ್ನು ರೋಗವು ನೆರಳಿನಂತೆ ಹಿಂಬಾಲಿಸುತ್ತಿರುತ್ತದೆ. ಆದುದರಿಂದ ನೀತಿಕಾರರು **"ಭೋಗೇ ರೋಗಭಯಂ"** ಅರ್ಥಾತ್ ಭೋಗದಲ್ಲಿ ರೋಗದ ಭಯವಿರುತ್ತ ದೆಂದು ಹೇಳುತ್ತಾರೆ. ಭೋಗಲಾಷೆಯೂ ಒಂದು ಭಾವರೋಗ ವಾಗಿದೆ. ಅದು ಶಾರೀರಿಕರೋಗರೂಪವಾದ ದ್ರವ್ಯರೋಗಕ್ಕಿಂತ ಅತಿ ಭಯಂಕರವಾಗಿದೆ. ಶಾರೀರಿಕ ರೋಗವು ಬೆಳೆದ.ದಾದರೆ ಅದು

ಭೌತಿಕಶರೀರವನ್ನು ಮಾತ್ರ ನಾಶಪಡಿಸಬಹುದು ಅಥವಾ ಶಾರೀರಿಕ ದುಃಖವನ್ನುಂಟುಮಾಡಬಹುದು. ಆದರೆ ಭೋಗಾಭಿಲಾಷಾರೂಪವಾದ ಭಾವರೋಗವು ಅನಂತಸಂಸಾರಕ್ಕೆ ಕಾರಣವಾಗಿ ಜನ್ಮಜನ್ಮಾಂತರಗಳಲ್ಲಿ ದುಃಖವನ್ನುಂಟುಮಾಡುವುದು. ಇಂತಹ ಭೋಗದಿಂದುಂಟಾಗುವ ಅನರ್ಥಪರಂಪರೆಯನ್ನು ವಿಚಾರಮಾಡಿ ಭೋಗವನ್ನು ತ್ಯಾಗಮಾಡುವವನೇ ನಿಜವಾದ ತ್ಯಾಗಿಯು. ಅಜ್ಞಾನಿಯು ಇಂದ್ರಿಯ ಭೋಗವಲ್ಲಿ ಸುಖವಿರುತ್ತದೆಂದು ತಿಳಿಯುತ್ತಾನೆ. ಆದರೆ ವಸ್ತುತಃ ಅದರಲ್ಲಿ ಸುಖವಿರುವುದಿಲ್ಲ. ಜ್ಞಾನಿಗಳು ಇಂದ್ರಿಯಸುಖವನ್ನು **"ಕಚ್ಛೂಕಂಡೂಯನೋಪಮಮ್"** ಎಂದು ವರ್ಣಿಸುತ್ತಾರೆ. ಅಂದರೆ ಗಜಕರ್ಣ, ತುರಿಕಜ್ಜಿ ಮೊದಲಾದ ಚರ್ಮರೋಗವುಳ್ಳವನಿಗೆ ಅದನ್ನು ಉಗುರಿನಿಂದ ಕೆರೆದುಕೊಳ್ಳುವಾಗ ಬಹು ಸುಖವಾದಂತೆ ಕಾಣುತ್ತದೆ. ಆದರೆ ಉತ್ತರಕ್ಷಣದಲ್ಲಿ ವಿಶೇಷ ವೇದನೆಯುಂಟಾಗುವುದಲ್ಲದೆ ರೋಗವೂ ಪ್ರಬಲಿಸುತ್ತದೆ. ಅದರಂತೆ ಇಂದ್ರಿಯಭೋಗವನ್ನು ಅನುಭವಿಸುವಾಗ ಪ್ರಾರಂಭದಲ್ಲಿ ಸ್ವಲ್ಪ ಸುಖವಿರುವಂತೆ ಭಾಸವಾದರೂ ಮುಂದೆ ಅದರಿಂದ ಅಧಿಕದುಃಖವುಂಟಾಗುತ್ತದೆ. ಅತಏವ ವಿಷಯಸುಖವು ವಿಷಕ್ಕೆ ಸಮಾನವಾದುದೆಂದು ಜ್ಞಾನಿಗಳು ತಿಳಿಯುತ್ತಾರೆ. ಭೋಗಾಸಕ್ತರಾದ ಮನುಷ್ಯರ ಮೇಲೆ ಜ್ಞಾನಿಗಳಿಗೆ ಕರುಣೆಯುಂಟಾಗುತ್ತದೆ. ಭೋಗಾಸಕ್ತರಾದ ಈ ಪಾಮರಜೀವರು ಭೋಗಾಸಕ್ತಿಯ ಕಠಿಣ ದುಷ್ಫಲವನ್ನೆಂತು ಸಹಿಸುವರೋ ಎಂದವರು ಚಿಂತಿಸುತ್ತಾರೆ. ಆದರೆ ಭೋಗಾಸಕ್ತರಿಗೆ ಇಹಲೋಕದ ಭಯವೇ ಇಲ್ಲದಿರುವಲ್ಲಿ ಪರಲೋಕದ ವಿಚಾರವೆಲ್ಲಿಂದ ಬರಬೇಕು ?

ಮನುಷ್ಯನಿಗೆ ಭೋಗಸಾಮಗ್ರಿಗಳನ್ನು ಸಂಗ್ರಹಿಸುವಲ್ಲಿ, ಭೋಗಗಳನ್ನನುಭವಿಸುವಲ್ಲಿ ಹಾಗೂ ಫಲತಃ ಪರಲೋಕದಲ್ಲಿ ಉತ್ತ

ರೋತ್ತರ ಅಧಿಕವಾದ ತಾಪವುಂಟಾಗುತ್ತದೆ. ಭೋಗಾಸಕ್ತನು ಆದೊಂದು ಸಮಯ (ಮರಣಸಮಯ) ದಲ್ಲಿ ಮೃತ್ಯುವೇದನೆಯಿಂದ ಪೀಡಿತನಾಗಿ ಐಹಿಕಭೋಗಗಳೆಲ್ಲವನ್ನೂ ತೊರೆದು ತನ್ನ ಭೋಗಾ ಸಕ್ತಿಯ ಫಲವನ್ನನುಭವಿಸುವುದಕ್ಕಾಗಿ ಪರಲೋಕವನ್ನು ಸೇರಲೇ ಬೇಕಾಗುತ್ತದೆ. ಅದು ಅನಿವಾರ್ಯ. ಅತಏವ ಭೋಗಾಭಿಲಾಷೆ ಯನ್ನು ತ್ಯಾಗಭಾವನೆಯಿಂದ ನಿಗ್ರಹಿಸಿ ಯಥಾರ್ಥತ್ಯಾಗಿಯಾಗುವಿ ಕೆಯೇ ಮಾನವನಿಗೆ ಶ್ರೇಯಸ್ಕರವಾಗಿದೆ.

## ರೋಗ

ರೋಗದ ಪ್ರಾಪ್ತಿಯನ್ನು ಯಾರೂ ಬಯಸುವುದಿಲ್ಲ. ರೋಗ ಸಂಪ್ರಾಪ್ತಿಗೆ ಪ್ರಕೃತಿ ವಿರುದ್ಧವಾದ ಆಹಾರವಿಹಾರಗಳು ಬಾಹ್ಯ ಕಾರಣಗಳಾಗಿದ್ದರೂ ಪೂರ್ವಾರ್ಜಿತ ಕರ್ಮವೂ ಅಂತರಿಕಕಾರಣ ವಾಗಿರುತ್ತದೆ. ರೋಗವು ಅನಪೇಕ್ಷಿತವಾಗಿ ಬರುವುದಾದರೂ ಅದು ಬಹುಮಟ್ಟಿಗೆ ಆತ್ಮಜಾಗೃತಿಗೆ ಕಾರಣವಾಗುವುದುಂಟು. ಸಂಸಾರದ ಅಸಾರತೆಯನ್ನೂ ಶರೀರದ ನಶ್ವರಸ್ವಭಾವವನ್ನೂ ರೋಗವು ತೋರಿಸಿ ಕೊಡುತ್ತದೆ. ಅದು ಭೂತಕಾಲದ ಮಲಿನತೆಯನ್ನು ಶೋಧಿಸಿ ಭವಿಷ್ಯ ತ್ಕಾಲದಲ್ಲಿ ಆತ್ಮೋನ್ನತಿಯ ಅರುಣೋದಯವನ್ನುಂಟುಮಾಡುತ್ತದೆ. ಸಂಸಾರಕಾರಾಗೃಹದಿಂದ ಹಾಗೂ ಮೋಹಶೃಂಖಲೆಯಿಂದ ಮುಕ್ತ ರಾಗುವಂತೆ ಸಂಸಾರೀಜೀವರನ್ನು ಎಚ್ಚರಿಸುತ್ತದೆ. ಈ ದೃಷ್ಟಿಯಿಂದ ರೋಗವು ಸ್ವಾಗತಾರ್ಹವಾಗಿದೆ.

ಸುವರ್ಣದ ಪರಿಶುದ್ಧತೆಗೆ ಅಗ್ನಿಯು ಅವಶ್ಯಕವಾಗಿರುವಂತೆ ಮಾನವನ ಪ್ರಗತಿಗೆ ರೋಗಜನಿತ ಕ್ಲೇಶಾದಿಗಳು ಆವಶ್ಯಕವಾಗಿರು ತ್ತವೆ. ಜಗತ್ತಿನಲ್ಲಿ ದುಃಖ ಶೋಕ ಕ್ಲೇಶಾದಿಗಳು ಇಲ್ಲದಿದ್ದರೆ ಮಾನ

ಉತ್ತಮವಾದುದು. ಏಕೆಂದರೆ ಮನುಷ್ಯನು ತನ್ನ ಭವಿಷ್ಯವನ್ನು ತನ್ನ ಇಚ್ಛಾನುಸಾರವಾಗಿ ನಿರ್ಮಿಸಬಲ್ಲನು. ಇಂತಹ ಶಕ್ತಿಯು ಇತರ ಯಾವ ಜೀವಯೋನಿಯಲ್ಲಿಯೂ ಇರಲಾರದು. ಅತಏವ ಮನುಷ್ಯ ಭವವು ಸರ್ವಾಧಿಕ ಮಹತ್ತ್ವವುಳ್ಳುದು. ಅನಂತಭವಗಳಲ್ಲಿ ಮಾಡಿದ ಕೃಷಿಯು, ಬಿತ್ತಿದ ಬೀಜಗಳ ಫಲವನ್ನನುಭವಿಸುವ ಸಮಯವಿದು. ಅತಏವ ಪರಮೋತ್ಕೃಷ್ಟವಾದೀ ಮಾನವಭವದಲ್ಲಿ ಉತ್ಕೃಷ್ಟವಾದ ಕಾರ್ಯಗಳನ್ನೇ ಮಾಡಬೇಕು.

ದುರ್ಲಭವಾದೀ ಮನುಷ್ಯಭವದ ಸ್ಥಿತಿಯು ಮೇಲಕ್ಕೆಸೆದ ಕಲ್ಲುಹರಳು ಆಕಾಶದಲ್ಲಿ ನಿಲ್ಲುವ ಸಮಯದಷ್ಟು ಅಲ್ಪವಾದುದು. ಮಾನವಭೂಮಿಯೆಂಬುದು ಮೋಕ್ಷಭೂಮಿಯು. ಇದು ಆತ್ಮಗುಣ ಗಳ ವಿಕಾಸದ ಪರೀಕ್ಷೆಯನ್ನೀಯುವ ಪರೀಕ್ಷಾಭೂಮಿಯು. ಮಾನವ ಭವವು ಜೀವ ಮತ್ತು ಶಿವ ಇವುಗಳ ಮಧ್ಯದ ಸುದೃಢ ಸೇತುವೆಯು. ಮಾನವಭವರೂಪವಾದ ಕಲ್ಪವೃಕ್ಷದಿಂದ ಮನೋವಾಂಛಿತ ಫಲ ವನ್ನು ಪಡೆಯಬಹುದಾಗಿದೆ. ಆದರೆ ಕೆಲವರು ಇದರಿಂದ ಸ್ವರ್ಗವನ್ನು ಬಯಸುವವರಾದರೆ ಇನ್ನು ಕೆಲವರು ನರಕವನ್ನು ಬಯಸುವವರು. ಅಂತೂ ಎಲ್ಲರೂ ತಮ್ಮ ತಮ್ಮ ಯೋಗ್ಯತೆಗನುಸಾರವಾದ ಬಯಕೆ ಯುಳ್ಳವರಾಗಿರುತ್ತಾರೆ ಹಾಗೂ ತದನುಸಾರವಾದ ಗತಿಯನ್ನು ಪಡೆ ಯುತ್ತಾರೆ.

ಶಾಂತಸ್ವಭಾವ, ಪರೋಪಕಾರಮಯಜೀವನ ಹಾಗೂ ಸದ್ಗುಣ ಗಳ ಪ್ರಾಪ್ತಿ ಇವುಗಳು ಮನುಷ್ಯಭವದಲ್ಲಿ ಸಾಧಿಸಬೇಕಾದ ಉತ್ತಮ ವಿಷಯಗಳು. ಪರಮಾರ್ಥವನ್ನು ಸಾಧಿಸುವುದರಿಂದಲೇ ದುರ್ಲಭ ಮನುಷ್ಯಭವವು ಸಾರ್ಥಕವಾಗುವುದು.

**ಮನುಷ್ಯನಿಗೆ ಮೂರು ಪ್ರಕಾರವಾದ ಸಂಬಂಧಿಗಳಿರುತ್ತಾರೆ :**

೧. ದೇವ, ಗುರು, ಧರ್ಮ, ಕ್ಷಮೆ, ನಮ್ರತೆ, ಸರಲತೆ, ಸಂತೋಷ, ಜ್ಞಾನ, ದರ್ಶನ, ಚಾರಿತ್ರ, ದಾನ, ಶೀಲ, ತಪ ಮತ್ತು ಭಾವನೆಗಳು ಇತ್ಯಾದಿ.

೨. ಕ್ರೋಧ, ಮಾನ, ಮಾಯೆ, ಲೋಭ, ರಾಗ, ದ್ವೇಷ, ಈರ್ಷ್ಯೆ ಮತ್ತು ಅಜ್ಞಾನ ಇತ್ಯಾದಿ.

೩. ತಂದೆ, ತಾಯಿ, ಸಹೋದರ, ಸಹೋದರಿ, ಪುತ್ರ, ಪುತ್ರಿ, ಪತ್ನಿ ಹಾಗೂ ಅತ್ತೆ, ಮಾವ ಇತ್ಯಾದಿ.

ಇವುಗಳಲ್ಲಿ ಮೊದಲನೆಯ ಸಂಬಂಧಿಕರು ಮನುಷ್ಯನ ಹಿತ ಚಿಂತನೆಯನ್ನು ಮಾಡುತ್ತಾರೆ. ಎರಡನೆಯವರು ಅಹಿತಚಿಂತನೆಯನ್ನು ಮಾಡುವವರಾಗಿರುತ್ತಾರೆ ಮತ್ತು ಮೂರನೆಯವರು ಅಲ್ಪಸಮಯದ ವರೆಗೆ ದೊರೆಯುತ್ತಾರೆ ಹಾಗೂ ಅಲ್ಪಕಾಲಕ್ಕಾಗಿ ಇರುತ್ತಾರೆ. ಹೀಗೆ ಅಲ್ಪಸಮಯದವರೆಗೆ ಮಾತ್ರವಿರುವ ಈ ಸಂಬಂಧಿಕರು ಮೃತ್ಯುವಿನ ನಂತರ ಬಿಟ್ಟುಹೋಗುತ್ತಾರೆ. ಇವರು ಎರಡನೆಯ ಸಂಬಂಧಿಕರನ್ನು ವೃದ್ಧಿಗೊಳಿಸಲು ಸಹಾಯಕರಾಗಿರುತ್ತಾರೆ ಹಾಗೂ ಅಜ್ಞಾನವಶದಿಂದ ಮೊದಲನೆಯ ಸಂಬಂಧಿಕರನ್ನು ಅನಾವಶ್ಯಕವಾಗಿ ತೀವ್ರ ವಿರೋಧಿಸುತ್ತಾರೆ. ಮನುಷ್ಯನು ಮೊದಲನೆಯ ಸಂಬಂಧಿಕರನ್ನು ಪ್ರೀತಿಸಿದುದಾದರೆ ಮೂರನೆಯ ಸಂಬಂಧಿಕರು ಎರಡನೆಯ ಸಂಬಂಧಿಕರ ಸಹಾಯದಿಂದ ಮೊದಲನೆಯವರನ್ನು ಹೊಡೆದೋಡಿಸುತ್ತಾರೆ ಹಾಗೂ ಪದೇ ಪದೇ ಆಘಾತದಿಂದ ಅವರನ್ನು ನಿಃಸತ್ತ್ವಗೊಳಿಸಿ ಪುನಃ ಮನುಷ್ಯನ ಸಮೀಪಕ್ಕೆ ಬರದಂತೆ ಮಾಡುತ್ತಾರೆ. ಎರಡನೆಯ ಮತ್ತು ಮೂರನೆಯ ಸಂಬಂಧಿಕರು ಮೊದಲನೆಯವರೊಡನೆ ಸಪತ್ನಿಯರಂತೆ ದ್ವೇಷವನ್ನೂ, ಅಸೂಯೆಯನ್ನೂ ಮಾಡುತ್ತಾರೆ. ಅವರಿಗೆ ಮೊದಲನೆ

ಯವರೊಡನೆ ಅನಾದಿಕಾಲದಿಂದ ದ್ವೇಷವಿರುತ್ತದೆ. ಆದರೆ ಎರಡನೆಯ ಹಾಗೂ ಮೂರನೆಯ ಸಂಬಂಧಿಕರಲ್ಲಿ ಆಕರ್ಷಣಶಕ್ತಿಯು ಹೆಚ್ಚಾಗಿರುವುದರಿಂದ ಅವರಿಗೆ ಪ್ರಾಯಶಃ ಎಲ್ಲೆಲ್ಲೂ ಸನ್ಮಾನವು ದೊರೆಯುತ್ತದೆ. ಮೊದಲನೆಯ ಸಂಬಂಧಿಕರು ಆಕರ್ಷಣರಹಿತರಾಗಿರುವುದರಿಂದ ಅವರು ತಿರಸ್ಕೃತರಾಗುತ್ತಾರೆ. ಎರಡನೆಯ ಸಂಬಂಧಿಕರು ಪರಲೋಕದಲ್ಲಿಯೂ ಒಟ್ಟಿಗಿರುತ್ತಾರೆ. ಜೀವನು ಅಜ್ಞಾನವಶದಿಂದ ಸುಖವನ್ನುಂಟುಮಾಡುವ ಸಂಬಂಧಿಕರನ್ನು ತಿರಸ್ಕರಿಸುತ್ತಾನೆ ಮತ್ತು ದುಃಖವನ್ನುಂಟುಮಾಡುವ ಸಂಬಂಧಿಕರನ್ನು ಸನ್ಮಾನಿಸುತ್ತಾನೆ ಹಾಗೂ ಅವರ ರಕ್ಷಣೆ ಮತ್ತು ಸೇವೆಗಾಗಿ ತನ್ನ ಸಂಪೂರ್ಣ ಆಯುಷ್ಯವನ್ನು ಕಳೆಯುತ್ತಾನೆ

## ಮನುಷ್ಯತ್ವ

ವಿಶ್ವವಿದ್ಯಾಲಯಗಳ ಉಚ್ಚತಮ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಉಪಾಧಿಧಾರಿಗಳಾದ ವಿದ್ವಾಂಸರು ಪ್ರತಿವರ್ಷವೂ ಗೋಚರಿಸುತ್ತಾರೆ. ಆದರೆ ಮನುಷ್ಯತ್ವದ ಪರೀಕ್ಷೆಯನ್ನು ತೆಗೆದುಕೊಳ್ಳುವ ಪರೀಕ್ಷಾಸಂಸ್ಥೆಯಾಗಲಿ, ಅಂತಹ ಪರೀಕ್ಷೆಯನ್ನು ಕೊಟ್ಟು ಉತ್ತೀರ್ಣರಾಗುವ ವ್ಯಕ್ತಿಗಳಾಗಲಿ ಎಲ್ಲಿಯೂ ಕಾಣಬರುವುದಿಲ್ಲ. ಸರ್ವಪರೀಕ್ಷೆಗಳಿಗಿಂತಲೂ ಸಮಸ್ತ ಉಚ್ಚತಮ ಪದವಿಗಳಿಗಿಂತಲೂ ಮನುಷ್ಯತ್ವದ ಪರೀಕ್ಷೆ ಹಾಗೂ ಪದವಿಯು ಮಹತ್ತರವಾದುದು. ಪರಿಪೂರ್ಣ ಮನುಷ್ಯಾಕೃತಿಯುಳ್ಳ ಮಾನವರು ಎಲ್ಲೆಲ್ಲಿಯೂ ಕಾಣಸಿಗುತ್ತಾರೆ. ಆದರೆ ಅಂತಹ ಆಕೃತಿಗೆ ಅನುರೂಪವಾದ ಹೃದಯವುಳ್ಳ ಮನುಷ್ಯತ್ವ ಸಂಪನ್ನರಾದ ಹಾಗೂ ಮಾನವತೆಯ ಗುಣಗಳಿಂದ ಅಲಂಕೃತರಾದ ಮನುಷ್ಯರ ದರ್ಶನವು ಅತಿ ದುರ್ಲಭವಾಗಿದೆ.

ಯಾವುದೊಂದು ಕಾರ್ಯದಲ್ಲಿಯೂ ಹೇಯ-ಉಪಾದೇಯ

ವಿಚಾರವನ್ನು ಮಾಡದೆ ಮನ-ವಚನ-ಕಾಯಗಳಿಂದ ಪ್ರವರ್ತಿಸದಿರುವುದೇ ಮನುಷ್ಯತ್ವಪ್ರಾಪ್ತಿಯ ಏಕಮಾತ್ರ ಉಪಾಯವಾಗಿರುತ್ತದೆ. ಸೂರ್ಯೋದಯದಿಂದ ಸಮಗ್ರ ಅಂಧಕಾರದ ವಿನಾಶವಾಗುವಂತೆ ಮನುಷ್ಯತ್ವದ ಪ್ರಾಪ್ತಿಯಿಂದ ಸರ್ವದೋಷಗಳೂ ನಷ್ಟವಾಗುತ್ತವೆ. ಮಾನವಜೀವನದಲ್ಲಿ ಮನುಷ್ಯತ್ವಕ್ಕೆ ಸರ್ವೋಚ್ಚ ಸ್ಥಾನವಿರುತ್ತದೆ. ಮನುಷ್ಯತ್ವರಹಿತವಾದ ಜೀವನವು ಪಶುಪಕ್ಷಿಗಳ ಜೀವನಕ್ಕಿಂತಲೂ ನಿಕೃಷ್ಟವಾದುದು. ಶಾರೀರಿಕಸ್ವಾಸ್ಥ್ಯದ ರಕ್ಷಣೆಗಿಂತಲೂ ಹೆಚ್ಚಾಗಿ ಮನುಷ್ಯತ್ವದ ರಕ್ಷಣೆಯನ್ನು ಮಾಡಬೇಕು.

ಭೂಮಿ, ನೀರು, ಅಗ್ನಿ, ವಾಯು ಮತ್ತು ವನಸ್ಪತಿ ಇವೈದು ಸ್ಥಾವರಜೀವಿಗಳ ಜೀವನವೂ ಮನುಷ್ಯಜೀವನಕ್ಕೆ ಅತ್ಯುಪಯುಕ್ತವಾಗಿರುತ್ತದೆಂದಮೇಲೆ ಮನುಷ್ಯಜೀವನವು ವಿಶ್ವಕ್ಕೇ ವಿಶೇಷತಃ ಉಪಯುಕ್ತವಾಗಿರಬೇಕು.

ಪಶುಪಕ್ಷಿಗಳೂ ತಮ್ಮ ಸಂತತಿಯ ಹಾಗೂ ಜಾತಿಯ ಸೇವೆಯನ್ನೂ, ರಕ್ಷಣೆಯನ್ನೂ ಸರ್ವಪ್ರಯತ್ನದಿಂದ ಮಾಡುತ್ತವೆ. ಅದರಂತೆ ಮನುಷ್ಯನೂ ತನ್ನ ಸಂತತಿಯ ಮತ್ತು ಜಾತಿಯ ಸೇವೆಯನ್ನೂ, ರಕ್ಷಣೆಯನ್ನೂ ಸರ್ವವಿಧದಿಂದಲೂ ಮಾಡಬೇಕು. ಸೂರ್ಯಚಂದ್ರರು ತಮ್ಮ ಪ್ರಕಾಶದ ಮೂಲಕ ಅಭೇದಭಾವದಿಂದ ವಿಶ್ವದ ಸೇವೆಯನ್ನು ಮಾಡುವಂತೆ ಮನುಷ್ಯತ್ವದ ಪ್ರಾಪ್ತಿಯನ್ನು ಬಯಸುವ ಮಾನವನು ಅಭೇದಭಾವದಿಂದ ವಿಶ್ವದ ಸೇವೆಯನ್ನು ಮಾಡಬೇಕು. ಜಗತ್ಸೇವೆಯ ಈ ವಿಶಾಲಭಾವನೆಯಲ್ಲಿ ಎಷ್ಟು ಸಂಕುಚಿತತ್ವವಿರುವುದೋ ಅಷ್ಟು ಅಂಶದಲ್ಲಿ ಮನುಷ್ಯತ್ವದಲ್ಲಿಯೂ ಅಪೂರ್ಣತೆಯುಂಟಾಗುವುದು.

# ಸಂಪ್ರದಾಯಭೇದ

ಒಂದು ದೊಡ್ಡ ಮರದಲ್ಲಿ ಅನೇಕ ಶಾಖೆಗಳು ಬೇರೆ ಬೇರೆ ದಿಕ್ಕಿಗೆ ಪಸರಿಸಿರುವಂತೆ ಧರ್ಮದಲ್ಲಿ ಭಿನ್ನ ಭಿನ್ನ ಮಾನ್ಯತೆಯುಳ್ಳ ಅನೇಕ ಸಂಪ್ರದಾಯಗಳಿರುತ್ತವೆ. ಈ ಸಂಪ್ರದಾಯಗಳ ಶಾಸ್ತ್ರಗಳೂ, ಗುರುಗಳೂ, ಆಚಾರ್ಯರೂ ಬೇರೆ ಬೇರೆಯಾಗಿದ್ದರೂ ಇವೆಲ್ಲವುಗಳ ಧ್ಯೇಯವು ಒಂದೇ ಆಗಿರುತ್ತದೆ. ಮನುಷ್ಯರ ಪ್ರಕೃತಿಯು ಭಿನ್ನ ಭಿನ್ನವಾಗಿರುವಂತೆ ಅವರ ಅಭಿರುಚಿಯೂ ಭಿನ್ನ ಭಿನ್ನವಾಗಿರುತ್ತದೆ. ಅನೇಕ ಶಾಖೆಗಳಿಂದ ವೃಕ್ಷಕ್ಕೆ ಶೋಭೆಯುಂಟಾಗುವಂತೆ ಈ ವಿಭಿನ್ನ ಸಂಪ್ರದಾಯಗಳಿಂದಲೂ ಧರ್ಮಕ್ಕೆ ಶೋಭೆಯುಂಟಾಗುತ್ತದೆ ಆದರೆ ಸಂಪ್ರದಾಯಾಂಧತೆಯು ಧರ್ಮಕ್ಕೆ ಕಂಟಕಪ್ರಾಯವಾಗುತ್ತದೆ. ಸಂಪ್ರದಾಯಾಂಧತೆಯಿಂದ ಒಂದು ಸಂಪ್ರದಾಯವು ಇನ್ನೊಂದು ಸಂಪ್ರದಾಯವನ್ನು ತನ್ನ ಶತ್ರುವನ್ನಾಗಿ ತಿಳಿಯುತ್ತದೆ. ಒಂದು ಇನ್ನೊಂದರ ಬುಡವನ್ನೇ ಕಡಿಯಲು ಯತ್ನಿಸುತ್ತದೆ. ಇದರಿಂದ ಧರ್ಮಕ್ಕೆ ವಿನಾಶವೊದಗುತ್ತದೆ. ಧರ್ಮದಲ್ಲಿ ಗುಣಗ್ರಾಹಕಬುದ್ಧಿ, ಸ್ವದೋಷದರ್ಶಕಬುದ್ಧಿ, ಸಮತೆ, ಸರಲತೆ ಹಾಗೂ ಶಾಂತಿ ಮೊದಲಾದ ಸದ್ಗುಣಗಳಿರುತ್ತವೆ. ಪರಂತು ಸಂಪ್ರದಾಯಿಕತೆಯಲ್ಲಿ ಇದಕ್ಕೆ ವಿಪರೀತವಾಗಿ ಪರದೋಷದರ್ಶನ, ಸ್ವದೋಷಾಚ್ಛಾದನೆ, ಪರ-ಲಾಘವ, ಸ್ವಗುರುತ್ವ, ವಿಷಮತೆ, ವಕ್ರತೆ ಹಾಗೂ ಅಶಾಂತಿ ಮೊದಲಾದ ದೋಷಗಳಿರುತ್ತವೆ. ಧರ್ಮವು ವರ್ಷಾಜಲದಂತೆ ಪವಿತ್ರವಾಗಿದೆ. ಆದರೆ ಸಾಂಪ್ರದಾಯಿಕತೆಯ ಪಾತ್ರಭೇದದಿಂದ ಅದು ವಿಕೃತವಾಗುತ್ತದೆ. ಸಾಂಪ್ರದಾಯಿಕತೆಯಿಲ್ಲದಿರುವಲ್ಲಿ ಧರ್ಮತತ್ತ್ವವು ಉಜ್ವಲವಾಗಿ ಚಿರಸ್ಥಾಯಿಯಾಗಿ ಬೆಳಗುತ್ತದೆ.

# ಉಪದೇಶ

ಪವಿತ್ರ ಆಚಾರವಿಚಾರಗಳಿಂದ ಕೂಡಿದ ಜೀವನವು ಧಾರ್ಮಿಕ ಜೀವನವಾಗಿದೆ. ಧರ್ಮತತ್ತ್ವ (ಪವಿತ್ರ ಆಚಾರವಿಚಾರ) ದ ಅವಹೇಳನೆಯೇ ಅಧಾರ್ಮಿಕತೆಯು. ಧರ್ಮಶ್ರದ್ಧೆಯ ಅಭಾವವು ದುಃಖ ಹಾಗೂ ದರಿದ್ರತೆಗೆ ಮೂಲಕಾರಣವಾಗಿದೆ. ಯೋಗ್ಯಕಾರ್ಯ (ಕರ್ತವ್ಯ) ವೇ ಧರ್ಮವು. ಅಯೋಗ್ಯಕಾರ್ಯ (ಅಕರ್ತವ್ಯ) ವೇ ಅಧರ್ಮವು.

ಧನಾಚಾರ್ಯ (ಧನಿಕ) ಹಾಗೂ ಧನದ ಸೇವೆಯು ಸುಖ ಸಾಧನವಲ್ಲ. ಪರಂತು ಧರ್ಮಾಚಾರ್ಯರ ಹಾಗೂ ಧರ್ಮದ ಸೇವೆಯೇ ಸುಖದ ಸಾಧನವಾಗಿರುತ್ತದೆ.

ಸುಖಶಾಂತಿಗಳು ಆತ್ಮನ ಸ್ವಭಾವಗಳು. ಸ್ವಭಾವವು ಸ್ವಭಾವವುಳ್ಳವನಾದ ಆತ್ಮನಿಂದ ಬೇರೆಯಾಗಿರುವುದಿಲ್ಲ. ಆದಕಾರಣ ಪರದ್ರವ್ಯಾದಿಗಳಿಂದ ಸುಖಶಾಂತಿಗಳನ್ನು ಪಡೆಯುವ ಆಶೆಯು ನಿಷ್ಫಲವಾದುದು. ಅತಏವ ಸುಖಾಭಿಲಾಷಿಗಳಾದ ಮನುಷ್ಯರು ಪರದ್ರವ್ಯ-ಕ್ಷೇತ್ರಾದಿಗಳ ಮಮತೆಯನ್ನು ತೊರೆದು ಸ್ವದ್ರವ್ಯಕ್ಷೇತ್ರಕಾಲಭಾವಗಳಲ್ಲಿ ಆಸಕ್ತರಾಗಬೇಕು. ಇದರಿಂದ ಸ್ವಾಧೀನವೂ, ನಿಜಾನಂದಮಯವೂ, ನಿತ್ಯವೂ ಆದ ಪರಮಸುಖವನ್ನು ಪಡೆಯಬಲ್ಲರು.

ಅಹಿತವಾದ ವಿಷಯಕಷಾಯಗಳ ನಿವೃತ್ತಿಯೇ ಜ್ಞಾನದ ಫಲವು. ಬಾಹ್ಯದಲ್ಲಿ ಜನರನ್ನು ವಂಚಿಸುತ್ತಿದ್ದು ಧರ್ಮಸ್ಥಾನದಲ್ಲಿ ಧರ್ಮಗುರುಗಳೊಡನೆ ಜ್ಞಾನಧ್ಯಾನಗಳ ಮಾತುಗಳನ್ನಾಡುವಿಕೆಯು ಪರವಂಚನೆಗಿಂತಲೂ ಅಧಿಕ ಹಾಗೂ ಭಯಂಕರವಾದ ಆತ್ಮವಂಚನೆಯು.

ಪರವಂಚನೆಯಿಂದ ದ್ರವ್ಯೋಪಾರ್ಜನೆಯನ್ನು ಮಾಡಿ ಅದನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸುವುದು ಧರ್ಮವಲ್ಲ. ಅದು ಧರ್ಮವನ್ನು ಕಲಂಕಿತಗೊಳಿಸುವುದೂ ಸ್ವಪರಪತನವೂ ಆಗಿದೆ.

ಶಾರೀರಿಕರೋಗಗಳಿಂದ ಆತ್ಮನಿಗೆ ಹಾನಿಯುಂಟಾಗುವುದಿಲ್ಲ. ವಿಕಾರಭಾವನೆಗಳಿಂದ ಆತ್ಮನಿಗೆ ವಿಶೇಷ ಹಾನಿಯೊದಗುತ್ತದೆ ಆದುದರಿಂದ ಶಾರೀರಿಕರಕ್ಷಣೆಗಿಂತ ಅತ್ಯಧಿಕವಾಗಿ ಭಾವಗಳನ್ನು ರಕ್ಷಿಸುತ್ತ ಆತ್ಮನನ್ನು ರಕ್ಷಿಸಿಕೊಳ್ಳಬೇಕು.

ಮೋಹವಶನಾದ ಜೀವನು ಶಾರೀರಿಕ ಅನಾರೋಗ್ಯದಿಂದ ದುಃಖಿಯಾಗುವಂತೆ ನಿರ್ಮೋಹಿ (ಜ್ಞಾನಿ) ಯಾದ ಜೀವನು ಆತ್ಮಿಕ ಅನಾರೋಗ್ಯದಿಂದ ದುಃಖಿಯಾಗುವನು.

ಅಜ್ಞಾನಿಯಾದ ಮನುಷ್ಯನು ಇಂದ್ರಿಯವಿಷಯಗಳಲ್ಲಿ ಅತ್ಯಂತ ಆಸಕ್ತಿಯುಳ್ಳವನಾಗಿ ಸ್ವರ್ಗಮೋಕ್ಷಸುಖವನ್ನೂ ತುಚ್ಛವನ್ನಾಗಿ ಭಾವಿಸುತ್ತಾನೆ. ಇದಕ್ಕಿಂತಲೂ ಹೆಚ್ಚಾದ ಆಶ್ಚರ್ಯವೇನಿದೆ ?

ಜಗತ್ತಿನ ಜೀವಿಗಳೊಡನೆ ವೈರ ಹಾಗೂ ಶತ್ರುತ್ವವನ್ನು ಬಿಡಲು ನೀವು ಅಸಮರ್ಥರಾಗಿರುವುದಾದರೆ ಕೊನೆಗೆ ನಿಮಗೆ ನೀವಾದರೂ ಶತ್ರುಗಳಾಗಬೇಡಿರಿ. ಸತ್ಯಜ್ಞಾನ, ಸತ್ಸಮಾಗಮ ಹಾಗೂ ಸತ್ಯಧರ್ಮದ ಅನುಷ್ಠಾನದಿಂದಲೇ ಮಾನವತೆಯು ಲಭಿಸುವುದು. ಮನುಷ್ಯನು ಮನಸ್ಸಂಯಮವನ್ನು ಪಡೆದಾಗಲೇ ಮಾನವತೆಯನ್ನು ಪಡೆಯುವನು. ಮನಸ್ಸಂಯಮವಿಲ್ಲದ ಮನುಷ್ಯನು ಪಶುತುಲ್ಯನಾಗುವನು.

ಜಡಜೀವನವು ಮನುಷ್ಯನಿಗೆ ಶೋಭಿಸುವುದಿಲ್ಲ. ಅದು ಸದ್ಗುರು

ಹಾಗೂ ಸತ್ಯ ಧರ್ಮಕ್ಕೆ ಉಪಹಾಸ ಮಾಡುವುದಕ್ಕೆ ಸಮಾನವಾದುದು. ನಿಮ್ಮಲ್ಲಿ ವಿಚಾರಶಕ್ತಿ ಇರುವುದಾದರೆ ಸತ್ಯಾಸತ್ಯ ಹಾಗೂ ಯೋಗ್ಯಾಯೋಗ್ಯಗಳನ್ನು ವಿಚಾರ ಮಾಡಿರಿ. ಆತ್ಮಕಲ್ಯಾಣದ ಯೋಗ್ಯಸಾಮಗ್ರಿಯು ದೊರೆತರೂ ಅದನ್ನು ಉಪೇಕ್ಷಿಸುವ ಜೀವನು ವಿಶೇಷ ದಯಾಪಾತ್ರನಾಗಿರುವನು. ಪೂರ್ವಪುಣ್ಯಪುರುಷಾರ್ಥದಿಂದ ದೊರೆತ ಉತ್ತಮ ಸಂಯೋಗಗಳನ್ನು ಸದುಪಯೋಗಗೊಳಿಸಿರಿ. ದುರ್ಗತಿಗೆ ಕಾರಣಗಳಾದ ವಿಷಯಭೋಗಗಳನ್ನು ತಿರಸ್ಕರಿಸದೆ ಪರಮಕಲ್ಯಾಣಕಾರಿಯಾದ ಧರ್ಮವನ್ನು ತಿರಸ್ಕರಿಸುವುದು ಅಕ್ಷಮ್ಯ ಅಪರಾಧವು. ಅತಏವ ಜೀವನನ್ನು ದುರ್ಗತಿನಗರಿಗೊಯ್ಯುವ ವಿಷಯ ಕಷಾಯಗಳನ್ನು ತ್ಯಾಗ ಮಾಡಿ ಪರಮಪದವಾದ ಮೋಕ್ಷನಗರಿಗೊಯ್ಯುವ ಧರ್ಮವನ್ನು ದೃಢವಾಗಿ ಅವಲಂಬಿಸಿರಿ.

ಅಜ್ಞಾನಿಯಾದ ಪಾಮರಜೀವನು ವಿಷಯಭೋಗಗಳಿಂದುಂಟಾಗುವ ದುಷ್ಫಲ (ದುಃಖ) ಗಳನ್ನು ಪ್ರತ್ಯಕ್ಷ ಕಾಣುತ್ತಿರುವನಾದರೂ ಜ್ಞಾನಿಗಳ ವಚನಗಳನ್ನು ತಿರಸ್ಕರಿಸುವನು. ಧರ್ಮಗುರುಗಳ ಮುಂದೆಯೂ "ಏನಾಗುವುದಾದರೂ ಆಗಲಿ ಸಾಯುವ ತನಕ ಸ್ತ್ರೀ, ಧನ, ವಿಷಯಕಷಾಯಗಳನ್ನು ಬಿಡಲು ನನ್ನಿಂದಾಗದು." ಎಂದು ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಹೀಗೆ ಅವನು ಜ್ಞಾನಿಗಳ ಜ್ಞಾನವನ್ನು ತಿರಸ್ಕರಿಸಿ ವಿಷಯಭೋಗಗಳ ಸೇವನೆಯ ಮೂಲಕ ದುರ್ಗತಿಗೆ ಆಮಂತ್ರಣವೀಯುವನು.

ಗಾಢನಿದ್ರೆಯಲ್ಲಿರುವ ಮನುಷ್ಯನು ಹೊರಗಿನ ಸುಂದರ ದೃಶ್ಯಗಳನ್ನು ನೋಡಲು ಹಾಗೂ ಮನೋಹರ ವಚನಗಳನ್ನಾಲಿಸಲು ಅಸಮರ್ಥನಾಗಿರುವಂತೆ ಮೋಹನಿದ್ರೆಯಲ್ಲಿರುವ ಜೀವನು ಜ್ಞಾನಿಗಳ ಹಿತವಚನಗಳನ್ನಾಲಿಸಲು ಅಸಮರ್ಥನಾಗಿರುತ್ತಾನೆ. ಮನುಷ್ಯನ

ಧನ, ಸುಖ, ವೈಭವಾದಿಗಳು ದಿನೇ ದಿನೇ ವೃದ್ಧಿ ಹೊಂದುತ್ತಿದ್ದರೆ ಅದು ಅವನ ಕುಶಲತೆ ಅಥವಾ ಕುಶಾಗ್ರಬುದ್ಧಿಯಿಂದಲ್ಲ. ಪೂರ್ವ-ಜನ್ಮದ ಪುಣ್ಯಪ್ರಭಾವವೇ ಅದಕ್ಕೆ ಕಾರಣವು. ಆತಏವ ಸುಖಸಂಪದಾದಿಗಳ ಅಭಿವೃದ್ಧಿಗೆ ಮೂಲಕಾರಣವಾದ ಧರ್ಮತತ್ತ್ವವನ್ನು ಸರ್ವ ಪ್ರಯತ್ನದಿಂದ ರಕ್ಷಿಸಿರಿ. ಧರ್ಮದಿಂದುಂಟಾಗುವ ಶುಭಫಲವನ್ನು ಪ್ರತ್ಯಕ್ಷವಾಗಿ ನೋಡಿಯೂ ಅದನ್ನು ಅನಾದರಿಸುವಿಕೆಯು ಘೋರ ಪ್ರಮಾದವು. ಪುಣ್ಯಪಾಪಗಳ ಪ್ರತ್ಯಕ್ಷ ಸ್ವರೂಪವನ್ನು ತಿಳಿದೂ ಮೂರ್ಖರಂತೆ, ನಾಸ್ತಿಕರಂತೆ ಜೀವನವನ್ನು ನಡೆಸುವುದು ಲಜ್ಜಾ-ಸ್ಪದವು.

ಪೂರ್ವೋಕ್ತ ವಿಷಯಗಳನ್ನು ತಿಳಿದು ವಿವೇಚಿಸಿ ಜೀವನದಲ್ಲಿ ಅಳವಡಿಸಿಕೊಂಡು ಧರ್ಮತತ್ತ್ವದ ಆರಾಧನೆ (ಆಚರಣೆ) ಯನ್ನು ಮಾಡಬೇಕು. ಧರ್ಮವೇ ಆತ್ಮಕಲ್ಯಾಣದ ಪ್ರಧಾನ ಮಾರ್ಗವು.

## ಧರ್ಮತತ್ತ್ವ

ಪ್ರಾಣಿಗಳನ್ನು ದುಃಖಜಾಲದಿಂದ ಬಿಡಿಸಿ ನಿರ್ಬಾಧವಾದ ಸುಖಸ್ಥಾನಕ್ಕೊಯ್ಯುವುದೇ ಧರ್ಮವು ಯಾವ ಧರ್ಮದಿಂದ ಇಹ-ಪರಗಳಲ್ಲಿ ಶಾಂತಿ ದೊರೆಯಲಾರದೋ ಅದು ನಿಜವಾದ ಧರ್ಮವಲ್ಲ. ಅದು ಪಾಖಂಡವೆನಿಸುವುದು. ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇವೈದು ಧರ್ಮದ ನಾಮಾಂತರಗಳು. ಇವುಗಳನ್ನು ಆರಾಧಿಸುವುದರಿಂದ ಇಹಪರ ಜನ್ಮಗಳಲ್ಲಿ ಸುಖವು ಲಭಿಸುವುದು. ರಾಜ್ಯಭಾರ ನಿರ್ವಹಣೆಯಲ್ಲಿ ಧರ್ಮರೂಪವಾದ ಸಮುದ್ರದ ಕೇವಲ ಒಂದು ಬಿಂದುವಿನಷ್ಟು ಧರ್ಮತತ್ತ್ವದ ಅಂಶವನ್ನು ತೆಗೆದುಕೊಂಡು ನ್ಯಾಯ-ನೀತಿಯ ಕಾನೂನುಗಳನ್ನು ನಿರ್ಮಿಸಿರುವುದ

ರಿಂದ ರಾಜ್ಯಶಾಸನದಿಂದ ಕೋಟಿಸಂಖ್ಯಾತರಾದ ಪ್ರಜೆಗಳಿಗೆ ಶಾಂತಿಮಯವಾದ ಜೀವನವು ದೊರೆಯುತ್ತಿರುವುದು ಕಾಣಲ್ಪಡುತ್ತಿದೆ. ಹೀಗಿರಲು ಸಂಪೂರ್ಣ ಧರ್ಮತತ್ತ್ವದ ಅನುಷ್ಠಾನದಿಂದ ಧರ್ಮಾನುಯಾಯಿಗಳ ಜೀವನವು ಅದೆಷ್ಟು ಪವಿತ್ರವೂ, ಶಾಂತಿಮಯವೂ ಆಗಬಲ್ಲುದೆಂಬುದನ್ನು ನೀವೇ (ವಾಚಕರೇ) ಆಲೋಚಿಸಿರಿ.

ವಿಶ್ವದ ಸಂಪೂರ್ಣ ವ್ಯವಹಾರವು ಧರ್ಮದಿಂದಲೇ ನಡೆಯುತ್ತಿದೆ. ಧರ್ಮದ ಹೊರತು ಲೋಕವ್ಯವಹಾರ ಹಾಗೂ ರಾಜ್ಯವ್ಯವಸ್ಥೆಯು ನಡೆಯಲಾರದು. ರಾಜ್ಯಸತ್ತೆಯಲ್ಲಿ ಧರ್ಮಸತ್ತೆಯು ಬಲವತ್ತರವಾಗಿರುತ್ತದೆ. ಈ ಕಾರಣದಿಂದ ರಾಜ್ಯಸತ್ತೆಯು ಧರ್ಮಸತ್ತೆಯನ್ನವಲಂಬಿಸಿರುತ್ತದೆ ಆದರೆ ಇಂದು ಜನರು ಇಂತಹ ಅತ್ಯಾವಶ್ಯಕವಾದ ಧರ್ಮತತ್ತ್ವವನ್ನು ಅನಾವಶ್ಯಕವನ್ನಾಗಿ ತಿಳಿದು ಉಪೇಕ್ಷಿಸುತ್ತಿದ್ದಾರೆ.

ಧರ್ಮಾನುಸಾರವಾಗಿ ರಚಿಸಲ್ಪಟ್ಟಿರುವ ರಾಜ್ಯವ್ಯವಸ್ಥೆಯ ನಿಯಮ (ಕಾನೂನು) ಗಳನ್ನು ಜನರು ಅನುಸರಿಸುತ್ತಾರೆ. ಆದರೆ ಧರ್ಮದ ನಿಯಮಗಳನ್ನು ಅಲ್ಲಗಳೆಯುತ್ತಾರೆ. ಇದು ಆಶ್ಚರ್ಯವು. ರಾಜ್ಯದ ನಿಯಮಗಳೂ ಧರ್ಮತತ್ತ್ವದ ಆಧಾರದ ಮೇಲೆಯೇ ನಿರ್ಮಿಸಲ್ಪಟ್ಟುವುವೆಂಬುದನ್ನು ಜನರು ತಿಳಿಯುವುದಿಲ್ಲ. ಪಿನಲ್ ಕೋಡನ್ನು ರಚಿಸಿದವರು ಧರ್ಮಶಾಸ್ತ್ರಕಾರರ ಅಭಿಪ್ರಾಯವನ್ನು ಅನುಸರಿಸದಿರುತ್ತಿದ್ದರೆ ಇಂದು ಲೋಕರಕ್ಷಣೆಯ ವ್ಯವಸ್ಥೆಯು ಇಷ್ಟು ಸಫಲವಾಗುತ್ತಿದ್ದಿಲ್ಲ. ಸರ್ವಧರ್ಮಗಳೂ ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ (ಪರಸ್ತ್ರೀತ್ಯಾಗ), ಸಂತೋಷ (ಪರಿಗ್ರಹಪರಿಮಾಣ) ಮೊದಲಾದ ಧರ್ಮತತ್ತ್ವಗಳನ್ನು ಸಮರ್ಥಿಸುತ್ತವೆ. ಆದಕಾರಣ

ರಾಜ್ಯದ ಕಾನೂನು- ಕಾಯಿದೆಗಳೂ ಗೃಹಸ್ಥಧರ್ಮ ಆಧಾರದ ಮೇಲೆ ರಚಿಸಲ್ಪಟ್ಟಿವೆ.

ಧರ್ಮತತ್ತ್ವವೇ ರಾಜ್ಯದ ಹಾಗೂ ಮಾನವಜೀವನದ ಪ್ರಾಣವು. ರಾಜ್ಯನಿಯಮವನ್ನುಲ್ಲಂಘಿಸುವ ಅಪರಾಧಿಗಳೂ, ಸುಳ್ಳಾಡುವ ವಂಚಕರೂ, ಕಳ್ಳತನ ಮಾಡುವವರೂ, ಪರಸ್ತ್ರೀಯರನ್ನು ಬಲಾತ್ಕರಿಸುವ ವ್ಯಭಿಚಾರಿಗಳೂ, ಲೋಭಿಗಳೂ, ಪ್ರಾಣದಂಡದವರೆಗಿನ ಶಿಕ್ಷೆಗಳಿಗೆ ಭಾಜನರಾಗುತ್ತಾರೆ. ವ್ಯವಹಾರದಲ್ಲಿ ಹೀಗಿರುತ್ತಿರಲು ಧರ್ಮತತ್ತ್ವದ ನಿಯಮಗಳನ್ನು ಉಲ್ಲಂಘಿಸುವ ಪಾಪಿಗಳಿಗೆ ಎಂತಹ ದುರ್ಗತಿಯುಂಟಾದೀತೆಂಬುದನ್ನು ನೀವೇ ವಿಚಾರಿಸಿರಿ.

ಸರ್ಪ, ಸಿಂಹ, ಅಗ್ನಿ ಮತ್ತು ಅಫೀಮು ಮೊದಲಾದವುಗಳ ಸ್ವಭಾವವನ್ನು ತಿಳಿಯದೆ ಅವುಗಳನ್ನು ಸೇವಿಸುವವರ ಪ್ರಾಣವು ಯಾವಾಗಲೂ ಸಂದಿಗ್ಧವಾಗಿರುತ್ತದೆ. ಇವುಗಳಿಂದ ಮನುಷ್ಯನಿಗೆ ಮೃತ್ಯುವೂ ಒದಗಬಲ್ಲುದು. ಸರ್ಪವನ್ನು ತಿಳಿಯದೆ ಮೆಟ್ಟಿದವನಿಗೆ ಅದು ರಾಜ್ಯಶಾಸನಕ್ಕಿಂತಲೂ ಕಠೋರವಾದ ಸಜೆಯನ್ನು ಕೊಡುವುದು. ಅಫೀಮು ಜಡವಸ್ತುವಾಗಿದ್ದರೂ ಅದನ್ನು ಅಪರಿಮಿತವಾಗಿ ಸೇವಿಸುವವರಿಗೆ ಅದೂ ರಾಜ್ಯಶಾಸನಕ್ಕಿಂತ ಹೆಚ್ಚಿನ ಶಿಕ್ಷೆಯನ್ನೀಯುವುದು. ರಾಜ್ಯಶಾಸನದಲ್ಲಿ ಅಪರಾಧಿಯ ಆಶಯ, ವಿಚಾರ, ಧ್ಯೇಯ ಹಾಗೂ ಜೀವನವನ್ನು ವಿಮರ್ಶಿಸಲಾಗುತ್ತದೆ. ಇದರಿಂದ ಒಮ್ಮೊಮ್ಮೆ ಪ್ರಾಣಘಾತ (ಖೂನಿ) ಮಾಡಿದವನೂ ನಿರಪರಾಧಿಯೆಂದು ಬಿಡಲ್ಪಡುತ್ತಾನೆ. ಆದರೆ ಪೂರ್ವೋಕ್ತ ಸರ್ಪ ಮೊದಲಾದುವು ಯಾವ ವಿಚಾರವನ್ನೂ ಮಾಡದೆ ಎಲ್ಲರಿಗೂ ಸಮಾನವಾದ ದಂಡನೆಯನ್ನು ಕೊಡುತ್ತವೆ. ಧರ್ಮತತ್ತ್ವದ ಕಾಯದೆಯಾದರೋ ಬಹಳ ಸೂಕ್ಷ್ಮವಾದುದು. ಅದು ಮನ, ವಚನ, ಕಾಯ ಹಾಗೂ

ಆತ್ಮಸಂಬಂಧವಾದ ಅಪರಾಧವನ್ನು ಅಪರಾಧವೆಂದು ನಿರ್ಣಯಿಸುತ್ತದೆ. ಧರ್ಮವು ಸ್ಥಾವರಜೀವಘಾತಕರನ್ನೂ ದೋಷಿಗಳನ್ನಾಗಿ ತಿಳಿಯುತ್ತದೆ. ರಾಜ್ಯಶಾಸನದಲ್ಲಿ ಮಾನವರಕ್ಷಣೆಗಾಗಿ ಕಾಯದೆಗಳನ್ನೂ, ದಂಡನೆಗಳನ್ನೂ ನಿರ್ಮಿಸಿರುವಂತೆ ಪೃಥ್ವಿ, ಜಲ, ಅಗ್ನಿ, ವನಸ್ಪತಿ, ವಾಯು, ನೊಣ ಹಾಗೂ ಸೊಳ್ಳೆ ಮೊದಲಾದ ಜೀವಿಗಳ ರಕ್ಷಣೆಗಾಗಿಯೂ ಧರ್ಮರಾಜ್ಯದಲ್ಲಿ ವಿಶೇಷವಾದ ಕಾಯದೆಗಳೂ, ದಂಡನೆಗಳೂ ನಿರ್ಮಿಸಲ್ಪಟ್ಟಿವೆ.

ವಿಜ್ಞಾನವು ಪ್ರಗತಿಯನ್ನು ಹೊಂದುತ್ತಿರುವಂತೆ ವೈಜ್ಞಾನಿಕರ ಶ್ರದ್ಧೆಯಲ್ಲಿಯೂ ಪರಿವರ್ತನೆಯುಂಟಾಗುತ್ತಿದೆ. ಇಂದು ವೈಜ್ಞಾನಿಕರು ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ವನಸ್ಪತಿಗಳಲ್ಲಿ ಜೀವವಿದೆಯೆಂದು ತಿಳಿದಿದ್ದಾರೆ. ಅವರು ಜಲ, ವಾಯು ಮತ್ತು ವನಸ್ಪತಿ ಜೀವಿಗಳ ಛಾಯಾಚಿತ್ರವನ್ನೂ ತೆಗೆದಿದ್ದಾರೆ. ವೈಜ್ಞಾನಿಕ ಸಂಶೋಧನೆಯಿಂದ ಒಂದು ಬಿಂದು ಜಲದಲ್ಲಿ ೩೬,೪೫೦ ಜೀವಗಳಿರುತ್ತವೆಂದೂ ಸೂಜಿಯ ಅಗ್ರಭಾಗದಷ್ಟು ವಾಯುವಿನಲ್ಲಿ "ಥೈಕಸಸ್" ಎನ್ನುವ ಹತ್ತು ಲಕ್ಷ ಜೀವಗಳಿರುತ್ತವೆಂದೂ ತಿಳಿದುಬಂದಿದೆ. ಹೀಗೆ ವಿಜ್ಞಾನದಿಂದ ಚೈತನ್ಯವಾದದ ಪ್ರಚಾರವಾಗುತ್ತಿದೆ. ಈ ಕಾರಣದಿಂದಲೇ ಯೂರೋಪಿನಲ್ಲಿ ಅನೇಕ "ಮಾಂಸನಿಷೇಧಕಮಂಡಲ" ಗಳು ತೆರೆಯಲ್ಪಟ್ಟಿದ್ದು ಅವುಗಳ ಹಲವು ಸದಸ್ಯರು ಹಾಲು, ಮೊಸರು ಮತ್ತು ತುಪ್ಪವನ್ನು ಸೇವಿಸುವುದೂ ಪಾಪವೆಂದು ತಿಳಿಯುತ್ತಾರೆ. ತಾಯಿಯ ಹಾಲನ್ನು ಸೇವಿಸುವ ಅಧಿಕಾರವು ಮಗುವಿಗೆ ಮಾತ್ರವಿರುತ್ತದಲ್ಲದೆ ಇತರರಿಗಿರಲಾರದು. ಅದರಂತೆ ಹಸು, ಎಮ್ಮೆ, ಆಡು ಮೊದಲಾದುವುಗಳ ಹಾಲನ್ನು ಸೇವಿಸುವ ಅಧಿಕಾರವು ಅವುಗಳ ಶಿಶು (ಕರು–ಮರಿ) ಗಳಿಗಲ್ಲದೆ ನಮಗೆಲ್ಲಿಯದು ! ಎಂದವರು ಹೇಳುತ್ತಾರೆ.

ಹಿಂದೆ ಪರಲೋಕವನ್ನು ನಂಬದಿದ್ದ ಪಾಶ್ಚಿಮಾತ್ಯಜನರೂ ಇಂದು ಪರಲೋಕದ ಅಸ್ತಿತ್ವವನ್ನು ಒಪ್ಪುತ್ತಾರೆ. ಇದರಿಂದಾಗಿ ಅನೇಕ ರಾಜ್ಯಗಳಲ್ಲಿ ಪ್ರಾಣದಂಡನೆ (ಫಾಶೀಶಿಕ್ಷೆ) ಯು ನಿಷೇಧಿಸಲ್ಪಟ್ಟಿದೆ ಹಾಗೂ ಅಪರಾಧಿಗಳನ್ನು ಧಾರ್ಮಿಕಸಂಸ್ಕಾರಗಳಿಂದ ಪವಿತ್ರಗೊಳಿಸಲಾಗುತ್ತಿದೆ.

ಯೂರೋಪಿನ ಕಾರಾಗೃಹಗಳಲ್ಲಿ ಖೈದಿಗಳಿಗೆ ಬೈಬಲನ್ನು ಕಲಿಸಲಾಗುತ್ತಿದೆ ಹಾಗೂ ಅವರೊಡನೆ ಒಳ್ಳೆಯ ವ್ಯವಹಾರದಿಂದಿದ್ದು ಖೂನಿ, ಕಳ್ಳತನ ಮೊದಲಾದ ದುರ್ಗುಣಗಳಿಂದ ಅವರನ್ನು ಬಿಡಿಸಲು ಯತ್ನಿಸಲಾಗುತ್ತದೆ. ಇಂದು ಪಾಶ್ಚಿಮಾತ್ಯರು ಹಿಂಸೆಯ ಸೂಕ್ಷ್ಮತೆಯನ್ನು ಅರಿಯುತ್ತಿದ್ದಾರೆ. ಫಲತಃ ಅವರು "ನಿಂದಾನಿಷೇಧಕ ಮಂಡಲ" ಗಳನ್ನು ತೆರೆದಿರುವರು. ಅವುಗಳನ್ನು "Pad lock society" ಎಂದು ಕರೆಯುತ್ತಾರೆ. ಅವುಗಳ ಎಲ್ಲ ಸದಸ್ಯರು ಯಾರನ್ನೂ ನಿಂದಿಸುವುದಿಲ್ಲ ಹಾಗೂ ಯಾರೊಬ್ಬನ ನಿಂದೆಯನ್ನೂ ಕೇಳುವುದಿಲ್ಲ.

ಜಗತ್ತಿನಲ್ಲಿ ಧರ್ಮದ ಮೂಲವು ಬಹಳ ಆಳವಾದುದು. ಧರ್ಮವು ವಿಶ್ವಕ್ಕೆ ಪ್ರಾಣಸ್ವರೂಪವಾದುದು. ಆದರೆ ಅಜ್ಞಾನಿಗಳು ಧರ್ಮವನ್ನಿಂದು ಸಂಪೂರ್ಣ ಮರೆತಿರುವರು. ರಾಜ್ಯಶಾಸನವ್ಯವಸ್ಥೆಯೂ ಇಂದು ಧಾರ್ಮಿಕ ನಿಯಮಗಳ ಆಧಾರದ ಮೇಲೆ ನಿರ್ಮಿಸಲ್ಪಡದಿರುತ್ತಿದ್ದರೆ ಜಗತ್ತಿನಲ್ಲಿ ಪರಸ್ವಾಪಹರಣ, ವ್ಯಭಿಚಾರ ಮೊದಲಾದ ದುಷ್ಕೃತ್ಯಗಳು ಸ್ವೇಚ್ಛೆಯಾಗಿ ನಡೆದು ಭೀಕರ ಅಶಾಂತಿಯುಂಟಾಗುತ್ತಿದ್ದಿತು. ಮನುಷ್ಯನಿಗೆ ಸಂಯಮವು ಅತ್ಯಾವಶ್ಯಕವಾದುದು. ಮನುಷ್ಯನು ಇಂದ್ರಿಯಸಂಯಮದ ಅಭಾವದಿಂದಲೇ ವಿಲಾಸೀಜೀವನವನ್ನು ನಡೆಸುತ್ತಾನೆ. ವಿಲಾಸಮಯಜೀವನಕ್ಕಾಗಿ

ಧನವು ಬೇಕಾಗುತ್ತದೆ. ಧನಪ್ರಾಪ್ತಿಗಾಗಿ ಮನುಷ್ಯನು ಅನ್ಯಾಯ, ಕಪಟ, ಅತ್ಯಾಚಾರಾದಿ ದುಷ್ಕೃತ್ಯಗಳನ್ನು ಮಾಡುತ್ತಾನೆ. ಇಂದ್ರಿಯ ಸಂಯಮದ ಅಭಾವದಿಂದ ವಿಲಾಸಿತೆಯು ಬೆಳೆಯುತ್ತದೆ. ಅದು ಬೆಳೆದಂತೆ ಮನುಷ್ಯನು ಅಧಿಕ ಸ್ವಾರ್ಥಿಯಾಗುತ್ತಾನೆ. ಆತನು ತನ್ನ ಅಲ್ಪ ಸ್ವಾರ್ಥಕ್ಕಾಗಿ ಇತರರಿಗೆ ಮಹತ್ತರವಾದ ಹಾನಿಯನ್ನುಂಟುಮಾಡುತ್ತಾನೆ.

ಮನುಷ್ಯನು ತನ್ನ ಜೀವನವನ್ನು ನಿರೀಕ್ಷಿಸಬೇಕು. ತನ್ನ ಧರ್ಮದ ಜಾತಿಯ ಸಾಮಾನ್ಯ ನಿಯಮಗಳಾದರೂ ತನ್ನಿಂದ ಪಾಲಿಸಲ್ಪಡುತ್ತಿವೆಯೋ ? ಇಂತಹ ಸಾಮಾನ್ಯ ನಿಯಮಗಳನ್ನೂ ತನ್ನಿಂದ ಪಾಲಿಸಲಾಗದಿದ್ದರೆ ಸರ್ವಜ್ಞ ಜಿನೇಂದ್ರರ ಆಜ್ಞೆಯನ್ನು ನಾನು ಹೇಗೆ ಪಾಲಿಸಬಲ್ಲೆನು ? ಎಂಬುದನ್ನು ಪ್ರತಿದಿನ ವಿಚಾರಿಸಬೇಕು. ರಾಜ್ಯ ಶಾಸನದ ಕಾಯದೆಗಳನ್ನು ಪಾಲಿಸುವುದಕ್ಕಿಂತಲೂ ಹೆಚ್ಚಾದ ಸಾವಧಾನತೆಯು ಧಾರ್ಮಿಕ ಕಾಯದೆ (ನಿಯಮ-ಆಜ್ಞೆ) ಗಳನ್ನು ಪಾಲಿಸುವುದರಲ್ಲಿರಬೇಕು.

ವಾಚಕರೆ, ಧರ್ಮತತ್ತ್ವಗಳ ಆಧಾರದಿಂದಲೇ ಜಗತ್ತಿನ ಸರ್ವವ್ಯವಹಾರಗಳೂ ಸುಸೂತ್ರವಾಗಿ ನಡೆಯಬಲ್ಲವು. ಎಂದಿನವರೆಗೆ ಈ ಭೂಮಿಯಲ್ಲಿ ಸತ್ಯ ಶೀಲಗಳಿರುವವೋ ಅಂದಿನವರೆಗೆ ಶಾಂತಿಯು ನೆಲಸಿರಬಲ್ಲುದು.

## ಧರ್ಮವಿಚಾರ

ಶರೀರರಕ್ಷಣೆಗೋಸ್ಕರ ಅನ್ನ, ಜಲ ಹಾಗೂ ಪ್ರಾಣವಾಯು ಇವುಗಳ ಆವಶ್ಯಕತೆಯು ಉತ್ತರೋತ್ತರ ಅಧಿಕವಾಗಿರುವಂತೆ ಮಾನವ ಜೀವನಕ್ಕೆ ಧರ್ಮತತ್ತ್ವದ ಆವಶ್ಯಕತೆಯು ಅಧಿಕವಾಗಿದೆ. ಆತ್ಮರಹಿತವಾದ ಶರೀರವು ದ್ರವ್ಯ-ಶವವಾದರೆ ಧರ್ಮರಹಿತವಾದ ಶರೀರವು

ಭಾವ-ಶವವು. ದ್ರವ್ಯ-ಶವಕ್ಕಿಂತಲೂ ಭಾವ-ಶವವು ಅಧಿಕಭಯಂಕರವಾದುದು. ದ್ರವ್ಯ ಶವವು (ಮೃತಶರೀರವು) ಬೆಂಕಿಯಿಂದ ಸುಡಲ್ಪಡುವಂತೆ ಭಾವ-ಶವವು ಭಾವಾಗ್ನಿಯಿಂದ ಸುಡಲ್ಪಡುತ್ತದೆ. ದ್ರವ್ಯ-ಶವದಿಂದ ದುರ್ಗಂಧ ಹೊರಡುತ್ತಿದ್ದು ಅದರಲ್ಲಿ ಕ್ರಿಮಿಗಳು ಹುಟ್ಟುತ್ತಿರುವಂತೆ ಭಾವ-ಶವ (ಧರ್ಮರಹಿತಶರೀರ) ದಿಂದ ವಿಷಯಕಷಾಯರೂಪವಾದ ಭಾವದುರ್ಗಂಧ ಹೊರಡುತ್ತದೆ ಹಾಗೂ ಅದರಲ್ಲಿ ಈರ್ಷ್ಯೆ, ನಿಂದೆ, ದ್ವೇಷ, ಕಲಹ, ಘೃಣೆ, ಮತ್ಸರ, ಅಹಂಭಾವ, ತೃಷ್ಣೆ ಮತ್ತು ಮಮತ್ವರೂಪವಾದ ಕೀಟಗಳು ಪ್ರತಿಸಮಯ ಹುಟ್ಟುತ್ತಿರುತ್ತವೆ.

ಪವಿತ್ರ ಆಚಾರ, ಪವಿತ್ರ ವಿಚಾರ ಹಾಗೂ ಪವಿತ್ರ ಅಂತಃಕರಣಗಳೆಂಬ ತ್ರಿವೇಣೀಸಂಗಮದಿಂದ ಧರ್ಮತೀರ್ಥದ ಪ್ರಾಪ್ತಿಯುಂಟಾಗುತ್ತದೆ.

## ಧರ್ಮದ ಪರೀಕ್ಷೆ

ಎಲ್ಲ ಸಮಾಜದ ಮನುಷ್ಯರೂ ತಾವು ಧರ್ಮಾತ್ಮರೆಂದು ಹೇಳಿಸಲ್ಪಡುವುದರಲ್ಲಿ ತಮಗೆ ಗೌರವವಿದೆಯೆಂದು ತಿಳಿಯುತ್ತಾರೆ. ಅಂತಹ ಮಹಾಶಯರು ಈ ಕೆಳಗಿನ ಪ್ರಶ್ನೆಗಳಿಗೆ ವಿಚಾರ ಮಾಡಿ ಉತ್ತರವನ್ನು ಕೊಡಬೇಕು.

ಪರೋಪಕಾರವನ್ನು ಮಾಡುವ ಉದ್ದೇಶವುಳ್ಳ ಹಾಗೂ ಆ ಉದ್ದೇಶವನ್ನು ಕಾರ್ಯತಃ ಪೂರ್ತಿಗೊಳಿಸುತ್ತಿರುವ ಸಂಸ್ಥೆಗಳು ನಿಮ್ಮ ಸಮಾಜದಲ್ಲಿವೆಯೋ ? ಇತರ ಸಮಾಜದಲ್ಲಿವೆಯೋ ?

ದಾನಮಾಡುವ ಪರಿಪಾಠಿಯು ನಿಮ್ಮಲ್ಲಿ ಅಧಿಕವಾಗಿದೆಯೋ ? ಇತರ ಧರ್ಮಿಗಳಲ್ಲಿ ಅಧಿಕವಾಗಿದೆಯೋ ?

ವಿಷಯಕಷಾಯಗಳ ಪ್ರವೃತ್ತಿಯೇ ಧರ್ಮದ ಪರಾಙ್ಮುಖತೆಗೆ ಕಾರಣವಾಗಿರುತ್ತದೆ. ಧರ್ಮದ ಅಭಾವದಿಂದಲೇ ಮನುಷ್ಯನಲ್ಲಿ ಪಾಶವಿಕತೆಯು ಪ್ರಾದುರ್ಭವಿಸುತ್ತದೆ. ಮನುಷ್ಯನಲ್ಲಿ ಎಷ್ಟು ಅಂಶದಲ್ಲಿ ಧರ್ಮದ ಅಭಾವವಿರುವುದೋ ಅಷ್ಟು ಅಂಶದಲ್ಲಿ ಪಾಶವೀಕತೆಯು ಸದ್ಭಾವವಿರುತ್ತದೆ ಮತ್ತು ಧರ್ಮದ ಸದ್ಭಾವವಿರುವಷ್ಟು ಅಂಶದಲ್ಲಿ ಚೈತನ್ಯಭಾವವಿರುತ್ತದೆ. ಪುಣ್ಯಾನುಬಂಧಿಪುಣ್ಯದ ಉದಯದಿಂದ ಧರ್ಮತತ್ತ್ವದ ಪ್ರಾಪ್ತಿಯುಂಟಾಗುತ್ತದೆ.

ಧರ್ಮವಿಲ್ಲದೆ ಪುಣ್ಯವೂ, ಪುಣ್ಯವಿಲ್ಲದೆ ಸುಖ ಅಥವಾ ಶಾಂತಿಯೂ ದೊರೆಯಲಾರವು. ಧರ್ಮವು ಸಮಸ್ತ ಸುಖಗಳಿಗೆ ಮೂಲವೂ ಅಧರ್ಮವು ಸಮಸ್ತ ದುಃಖಗಳಿಗೆ ಮೂಲವೂ ಆಗಿರುತ್ತದೆ.

ಸಮುದ್ರವನ್ನು ದಾಟುವುದಕ್ಕೆ ಸುದೃಢನೌಕೆಯ ಆವಶ್ಯಕತೆಯಿರುವಂತೆ ಸಂಸಾರಸಾಗರವನ್ನು ದಾಟುವುದಕ್ಕೆ ಧರ್ಮರೂಪವಾದ ಸುದೃಢಪ್ರವಹಣ (ನೌಕೆ) ದ ಆವಶ್ಯಕತೆಯಿರುತ್ತದೆ. ಶುದ್ಧ ಹವೆಯ ಅಭಾವದಿಂದ ಹಾಗೂ ಅಶುದ್ಧ ಹವೆಯಿಂದ ರೋಗವು ಬೆಳೆಯುವಂತೆ ಧರ್ಮದ ಅಭಾವದಿಂದ ಹಾಗೂ ಅಧರ್ಮದಿಂದ ಸಂಸಾರರೋಗವು ಬೆಳೆಯುತ್ತದೆ.

ಚಾರಿತ್ರವನ್ನು ವಿಕಾಸಗೊಳಿಸುವ ಕಲೆಯೇ ಧರ್ಮವು. ಧಾರ್ಮಿಕ ಜೀವನವೇ ನೈಸರ್ಗಿಕ ಜೀವನವು. ಧರ್ಮರಹಿತ ಜೀವನವು ಅನೈಸರ್ಗಿಕ ಹಾಗೂ ನಿರರ್ಥಕವಾದುದು. ಧಾರ್ಮಿಕ ಜೀವನವನ್ನು ದೇವತೆಗಳೂ ಬಯಸುತ್ತಾರೆ. ಧರ್ಮದ ಆಶ್ರಯವನ್ನು ಪಡೆಯದೆ ಲೇಶಮಾತ್ರ ಸುಖವೂ ದೊರೆಯಲಾರದು. ಧರ್ಮವು ನಿರಂತರ ಸೇವಿಸಲ್ಪಡುವಂತಹುದು. ಧರ್ಮವೆಂಬುದು ರೋಗಸಮಯದಲ್ಲಿ

ಮಾತ್ರ ಸೇವಿಸಲ್ಪಡುವಂತಹ ಕಟು ಔಷಧವಲ್ಲ ಮತ್ತು ಪರ್ವದಿನ ಗಳಲ್ಲಿ ಮಾತ್ರ ಧರಿಸಲ್ಪಡುವಂತಹ ಆಭೂಷಣವಲ್ಲ. ಅರ್ಥಾತ್ ನಿರಂತರ ಧರಿಸಲ್ಪಡುವಂತಹುದು.

ಧರ್ಮಸಾಧನದ ಯೋಗ್ಯತೆಯು ಪಶುಗಳಲ್ಲಿರುವುದಿಲ್ಲ. ಅಂತಹ ಯೋಗ್ಯತೆಯುಳ್ಳ ಮನುಷ್ಯನು ತನ್ನ ಶಕ್ತಿಯನ್ನು ಸದುಪಯೋಗ ಗೊಳಿಸದವನಾದರೆ ಅವನು ಪಶುಗಳಿಗಿಂತಲೂ ನಿಕೃಷ್ಟನೆಂದು ಬೇರೆ ಹೇಳಬೇಕಾಗಿಲ್ಲ.

ಧರ್ಮದ ಅವಹೇಳನೆಯಿಂದ ಅಧರ್ಮದಲ್ಲಿ ಪ್ರವರ್ತಿಯುಂಟಾಗು ತ್ತದೆ. ಧರ್ಮದ ಅಶ್ರದ್ಧೆಯೇ ದುಃಖ ಹಾಗೂ ದರಿದ್ರತೆಯ ಮೂಲವು. ಧರ್ಮವು ನಮ್ಮ ರಕ್ಷಣೆಗಾಗಿ ನಿರ್ಮಿಸಲ್ಪಟ್ಟ ಕೋಟೆಯಂತಿದೆ. ಸಮಸ್ತ ಜಾತಿಗಳ, ಸಮಾಜಗಳ ಹಾಗೂ ದೇಶಗಳ ಐಕ್ಯತೆಗೆ ಧರ್ಮವೇ ಮೂಲಕಾರಣವು. ಮಾನವಸಮಾಜದಲ್ಲಿ ಧರ್ಮತತ್ತ್ವದ ಅಸ್ತಿತ್ವವೇ ಇಲ್ಲವಾದುದಾದರೆ ಸಮಸ್ತ ದೇಶದ ಮನುಷ್ಯರೂ ವನ್ಯಪಶುಗಳಿ ಗಿಂತಲೂ ಅಧಿಕ ಭಯಂಕರರಾದಾರು.

ಇಂದಿನಕಾಲದ ಜಡವಾದೀ ಸಮಾಜವು ಧರ್ಮವನ್ನು ಆರಾಧಿ ಸುವ ಬದಲು ಅದನ್ನು ಉಪೇಕ್ಷಿಸುತ್ತಿದೆ. ಇಂದು ಉದರನಿರ್ವಾಹ ಕ್ಕಾಗಿ ಬ್ರಾಹ್ಮಣನೂ ಕಸಾಯಿಯ ನೌಕರನಾಗಲು ಹಿಂಜರಿಯುವು ದಿಲ್ಲ. ಧರ್ಮದ ಹಾಗೂ ಧರ್ಮಾಚಾರ್ಯರ ಸ್ಥಾನದಲ್ಲಿಂದು ಧನದ ಹಾಗೂ ಧನಾಚಾರ್ಯರ ಪೂಜೆಯು ನಡೆಯುತ್ತಿದೆ.

ಯೋಗ್ಯಕಾರ್ಯವೇ ಧರ್ಮವು. ಅಯೋಗ್ಯಕಾರ್ಯವೇ ಅಧರ್ಮವು. ಪ್ರಾಣಿಮಾತ್ರದ ಹಿತವನ್ನು ಸಾಧಿಸುವುದರಲ್ಲಿ ಸರ್ವ

ಗುಣಗಳ ಸಮಾವೇಶವಾಗುತ್ತದೆ. ನೀತಿಯೇ ಧರ್ಮದ ಮೂಲವು. ಮೂಲರಹಿತವಾದ ಧರ್ಮವು ಸ್ಥಿರವಾಗಿರಲಾರದು.

ಮಾನವನು ಧನದ ಅಭಾವದಿಂದ ಲಜ್ಜಿತನಾಗಬೇಕಾಗಿಲ್ಲ. ಆತನು ಧರ್ಮದ ಅಭಾವದಿಂದ ಲಜ್ಜಿತನಾಗಬೇಕು. ವಸ್ತುತಃ ಅಧೋಗತಿಯ ಕಾರಣಗಳನ್ನು ನಷ್ಟಗೊಳಿಸುವುದೇ ಧರ್ಮವು. ಶಾಂತ ಸ್ವಭಾವ ಹಾಗೂ ನಿರಭಿಮಾನತೆಯು ಧಾರ್ಮಿಕತೆಯ ಲಕ್ಷಣವಾಗಿದೆ. ಧರ್ಮವು ಬುದ್ಧಿಗ್ರಾಹ್ಯವಾದುದಲ್ಲ. ಅದು ಹೃದಯಗ್ರಾಹ್ಯವಾದುದು. ಪವಿತ್ರ ಆಚಾರ ಹಾಗೂ ಪವಿತ್ರ ವಿಚಾರಗಳಿಂದ ಕೂಡಿರುವ ಜೀವನವೇ ಧಾರ್ಮಿಕ ಜೀವನವು.

## ಕಲ್ಯಾಣಮಾರ್ಗ

ಸಮಸ್ತ ಪ್ರಾಣಿಗಳೂ ಸುಖವನ್ನು ಬಯಸುತ್ತವೆ ಹಾಗೂ ಸುಖ ಪ್ರಾಪ್ತಿಗಾಗಿ ಅಹರ್ನಿಶಿ ಪ್ರಯತ್ನಿಸುತ್ತವೆ. ಆದರೆ ಅವುಗಳಿಗೆ ಇಚ್ಛಿತ ಸುಖವು ದೊರೆಯುವುದಿಲ್ಲ. ಯಥಾರ್ಥಸುಖ ಮತ್ತು ಅದರ ಸಾಧನಗಳ ಪರಿಜ್ಞಾನ, ಶ್ರದ್ಧೆ ಹಾಗೂ ಯಥಾರ್ಥ ಆಚರಣೆಯಿಲ್ಲದಿರುವಿಕೆಯೇ ಸುಖಪ್ರಾಪ್ತಿಯಾಗದಿರುವುದಕ್ಕೆ ಕಾರಣವಾಗಿದೆ.

ನಿಜವಾದ ಸುಖದ ಲಕ್ಷಣವೇನು ಮತ್ತು ಅದರ ಪ್ರಾಪ್ತಿಯ ಉಪಾಯವೇನು ? ಎಂಬೀ ವಿಷಯವನ್ನು ಸುನಿಶ್ಚಿತರೂಪದಿಂದ ಚೆನ್ನಾಗಿ ತಿಳಿಯದೆ ಸುಖಪ್ರಾಪ್ತಿಯ ಸಮೀಚೀನ ಉಪಾಯವನ್ನವಲಂಬಿಸಲು ಸಾಧ್ಯವಾಗದು. ನಿರಾಕುಲತೆಯೇ ಯಥಾರ್ಥ ಸುಖದ ಲಕ್ಷಣವಾಗಿರುತ್ತದೆ. ಇಚ್ಛೆ, ಆಶೆ ಅಥವಾ ತೃಷ್ಣೆಯ ಅಭಾವದಿಂದ ನಿರಾಕುಲತೆಯು ಪ್ರಾಪ್ತವಾಗುವದು. ಇಚ್ಛೆ (ತೃಷ್ಣೆ) ಯು ಎಷ್ಟೆಷ್ಟು ಕಡಿಮೆಯಾಗುತ್ತ ಹೋಗುವುದೋ ಅಷ್ಟಷ್ಟು ನಿರಾಕುಲತಾರೂಪ

ವಾದ ಸುಖ ಶಾಂತಿಯ ಪ್ರಾಪ್ತಿಯುಂಟಾಗುವುದು. ಅಹಿತಕಾರ್ಯ (ಪಾಪಪ್ರವೃತ್ತಿ) ಗಳ ತ್ಯಾಗವು ತೃಷ್ಣೆಯನ್ನು ದೂರಗೊಳಿಸುವ ಸಫಲ ಸಾಧನವಾಗಿದೆ. ಅಹಿತಕಾರ್ಯ ಅರ್ಥಾತ್ ಪಾಪಪ್ರವೃತ್ತಿಗಳ ತ್ಯಾಗವೇ ಗೃಹಸ್ಥರ ಹಾಗೂ ಮುನಿಗಳ ಧರ್ಮವೆಂದು ಹೇಳಲ್ಪಡುತ್ತದೆ. ಅರ್ಥಾತ್ ಗೃಹಸ್ಥಧರ್ಮವೂ, ಮುನಿಧರ್ಮವೂ ಪಾಪ-ಪ್ರವೃತ್ತಿಗಳ ತ್ಯಾಗರೂಪವಾದುದು. ಧರ್ಮದ ಸಾಧನವು ಶೀಲ, ಸಂಯಮ, ತಪ, ದಾನ ಮತ್ತು ಪೂಜಾ ಇತ್ಯಾದಿ ಅನೇಕ ಪ್ರಕಾರವಾಗಿದೆ. ಆದರೆ ಇವೆಲ್ಲವುಗಳಲ್ಲೂ ತ್ಯಾಗ ಅಥವಾ ವ್ರತವು ಪ್ರಧಾನವಾದುದು.

ತ್ಯಾಗವೆಂದರೆ ನಿವೃತ್ತಿ ಅರ್ಥಾತ್ ಬಿಡುವುದೆಂದರ್ಥ. ಇದು ಏಕದೇಶತ್ಯಾಗವೆಂದೂ, ಸಕಲದೇಶತ್ಯಾಗವೆಂದೂ ಎರಡು ವಿಧವಾಗಿದೆ. ಗೃಹಸ್ಥರು ಏಕದೇಶತ್ಯಾಗವನ್ನೂ, ಸಾಧುಗಳು ಸಕಲದೇಶ ತ್ಯಾಗವನ್ನೂ ಮಾಡುತ್ತಾರೆ. ತ್ಯಾಗವು ಇಹಪರಸುಖವನ್ನು ಕೊಡುವಂತಹುದು. ತ್ಯಾಗದಿಂದಲೇ ಧರ್ಮತೀರ್ಥದ ರಕ್ಷಣೆಯಾಗುವುದು. ಗೃಹಸ್ಥಧರ್ಮದ ಹಾಗೂ ಮುನಿಧರ್ಮದ ರಕ್ಷಣೆಯು ತ್ಯಾಗದಿಂದಲೇ ಉಂಟಾಗುವುದು. ತ್ಯಾಗವು ವಿಶ್ವಕಲ್ಯಾಣದ ಜನನಿಯು. ಇಂದ್ರತ್ವ, ಚಕ್ರವರ್ತಿತ್ವ, ತೀರ್ಥಂಕರತ್ವ ಮೊದಲಾದ ಉತ್ತಮೋತ್ತಮ ಪದವಿಗಳು ತ್ಯಾಗದಿಂದಲೇ ಲಭಿಸುವುವು. ಹೀಗೆ ತ್ಯಾಗದಿಂದಲೇ ಭುಕ್ತಿಯೂ ಮುಕ್ತಿಯೂ ಲಭಿಸುವುದು.

ತ್ಯಾಗವು ನಿಶ್ಚಯವ್ಯವಹಾರಭೇದದಿಂದ ಎರಡು ಪ್ರಕಾರವಾಗಿದೆ. ಕಷಾಯಭಾವಗಳ ತ್ಯಾಗವು ನಿಶ್ಚಯತ್ಯಾಗವಾಗಿದೆ ಹಾಗೂ ಹಿಂಸಾದಿ ಪಂಚಪಾಪ, ದಶವಿಧಬಾಹ್ಯಪರಿಗ್ರಹ, ಸಮಸ್ತ ಆರಂಭ ಇವುಗಳ ತ್ಯಾಗವು ನಿಶ್ಚಯತ್ಯಾಗಕ್ಕೆ ಸಾಧನಭೂತವಾದ ವ್ಯವಹಾರ

ವ್ಯರ್ಥವ್ಯಯ ಮತ್ತು ವಿಲಾಸಸಾಧಾನಗಳ ಆಧಿಕ್ಯವು ನಿಮ್ಮ-ಲ್ಲಿದೆಯೇ, ಇತರ ಧರ್ಮಿಗಳಲ್ಲಿವೆಯೇ ?

ಅತ್ಯಾರಂಭವುಳ್ಳ ವ್ಯಾಪಾರಿಗಳಿಗೆ ಉತ್ತೇಜನವೀಯುವವರು ನೀವೇ, ಇತರರೇ ?

ಹಿಂಸಕವಸ್ತುಗಳ ವ್ಯಾಪಾರವು ನಿಮ್ಮಲ್ಲಿ ಅಧಿಕವಾಗಿದೆಯೇ, ಇತರರಲ್ಲಿ ಅಧಿಕವಾಗಿದೆಯೇ ?

ವಸ್ತ್ರಭೂಷಣ ಹಾಗೂ ಬಾಹ್ಯಾಡಂಬರದ ಮೋಹವು ನಿಮ್ಮಲ್ಲಿ ಹೆಚ್ಚಾಗಿದೆಯೇ, ಇತರರಲ್ಲಿ ಹೆಚ್ಚೇ ?

ಕೋರ್ಟುಕಛೇರಿಗಳ ವ್ಯವಹಾರಗಳಲ್ಲಿ ಮುಂದಾಗಿರುವವರು ನೀವೇ, ಅನ್ಯರೇ ?

ಹಣದಾಶೆಯಿಂದ ಪ್ರೇರಿತರಾಗಿ ಸಮುದ್ರದಾಚೆಯ ದೇಶಗಳಲ್ಲಿ ಸಂಚರಿಸುತ್ತಿರುವವರು ನೀವೇ, ಬೇರೆಯುವರೇ ?

ಸತ್ಯ, ನೀತಿ ಹಾಗೂ ನ್ಯಾಯವು ನಿಮ್ಮಲ್ಲಿದೆಯೇ, ಇತರರಲ್ಲಿದೆಯೇ ?

ಧಾರ್ಮಿಕ ನಿಯಮಗಳನ್ನು ಹೆಚ್ಚಾಗಿ ನೀವು ಪಾಲಿಸುವಿರೇ, ಇತರ ಧರ್ಮಿಗಳು ಪಾಲಿಸುವರೇ ?

ಧಾರ್ಮಿಕ ಪರ್ವಗಳಲ್ಲಿ ಹಾಗೂ ಧರ್ಮಗುರುಗಳಲ್ಲಿ ವಿಶೇಷ ಆದರವು ನಿಮ್ಮಲ್ಲಿದೆಯೇ, ಅನ್ಯ ಧರ್ಮಿಗಳಲ್ಲಿದೆಯೇ ?

ಧಾರ್ಮಿಕ ಮರ್ಯಾದೆಯೊಳಗಿರುವವರು ನೀವೇ, ಇತರ ಧರ್ಮಿಗಳೇ ?

ಧಾರ್ಮಿಕ ಕಲಹ (ಸಾಂಪ್ರದಾಯಿಕ ಕಲಹ) ಗಳು ನಿಮ್ಮಲ್ಲಿ ಹೆಚ್ಚಾಗಿವೆಯೇ, ಇತರ ಸಮಾಜದ

ಈ ಮೇಲಿನ ಪ್ರಶ್ನೆಗಳಿಗೆ ಸಂತೋಷಜನಕವಾದ ಉತ್ತರವನ್ನು ಕೊಡಬಲ್ಲ ಸಮಾಜದ ಮನುಷ್ಯರಲ್ಲೇ ಧರ್ಮತತ್ತ್ವದ ಉಪಸ್ಥಿತಿ ಯಿರುವುದೆಂದು ತಿಳಿಯಬೇಕು. ಆ ಮನುಷ್ಯರ ಜಾತಿ ದೇಶಾದಿಗಳು ಯಾವುವೇ ಆಗಿರಲಿ, ಅವರು ತಮ್ಮ ಧರ್ಮವನ್ನು ಯಾವ ಹೆಸರಿ ನಿಂದಲೇ ಕರೆಯಲಿ, ವಸ್ತುತಃ ಆ ಜನರೇ ಶುದ್ಧ ಧಾರ್ಮಿಕರೂ, ಆರ್ಯರೂ, ಆಸ್ತಿಕರೂ ಆಗಿದ್ದು ಮೋಕ್ಷಪಥವರ್ತಿಗಳಾಗಿರುವರು. ಇದಕ್ಕೆ ವ್ಯತಿರಿಕ್ತವಾದ ಸಮಾಜವು ಪವಿತ್ರ ಜಾತಿ, ದೇಶ, ಧರ್ಮ ಮೊದಲಾದವುಗಳ ಬಾಹ್ಯಮುದ್ರೆಯನ್ನೊತ್ತಿಕೊಂಡಿದ್ದರೂ ವಸ್ತುತಃ ಅದು ಅಧಾರ್ಮಿಕ, ಅನಾರ್ಯ ಹಾಗೂ ನಾಸ್ತಿಕವಾದುದು.

ಅನ್ನಪಾನಸೇವನೆಯಲ್ಲಿ ಹಾಗೂ ವಸ್ತ್ರಾಭೂಷಣಗಳ ಧಾರಣೆ ಯಲ್ಲಿ ಉತ್ಕಟ ಲಾಲಸೆಯ ಭಾವವುಂಟಾಗುವಂತೆ ಧಾರ್ಮಿಕ ಕ್ರಿಯೆ ಗಳಲ್ಲಿ ಎಂದಾದರೂ ತೀವ್ರ ಲಾಲಸೆಯು ಸಹಜವಾಗಿ ಉಂಟಾಗು ವುದೇ ? ತೀವ್ರಭಾವ ಹಾಗೂ ಪ್ರಯತ್ನವಿಲ್ಲದೆ ಧನವೂ ಸಿಗದಿರು ವಾಗ ಧರ್ಮದಂತಹ ಅಮೂಲ್ಯ ವಸ್ತುವು ಹೇಗೆ ಸಿಗಬಲ್ಲುದು ?

ಒಂದು ಲಕ್ಷ ರೂಪಾಯಿಗಳ ಲಾಭ-ನಷ್ಟಗಳು ಮನುಷ್ಯನ ಹೃದಯದ ಮೇಲೆ ಯಾವ ಪ್ರಭಾವವನ್ನು ಬೀರುತ್ತವೋ ಅದೇ ಪ್ರಭಾವವನ್ನು ಧರ್ಮದ ಸಂಯೋಗ-ವಿಯೋಗಗಳು ಆಸ್ತಿಕಜನರ ಹೃದಯದ ಮೇಲೆ ಬೀರುತ್ತವೆ. ಆದರೆ ಇಂದಿನ ಮಾನವಸಮಾಜವು ವಿಷಯಕಷಾಯಗಳಲ್ಲಿ ಮಗ್ನವಾಗಿ ಧರ್ಮತತ್ತ್ವದಿಂದ ವಿಮುಖ ವಾಗಿದೆ.

ಕಾಡಿನಪ್ರದೇಶದಲ್ಲಿ ರತ್ನಕ್ಕೆ ಮೂಲ್ಯವಿರುವುದಿಲ್ಲ. ಅದರಂತೆ ಜಡವಾದದ ಸಾಮ್ರಾಜ್ಯದಲ್ಲಿ ಧರ್ಮತತ್ತ್ವಕ್ಕೆ ಮೂಲ್ಯವಿರುವುದಿಲ್ಲ.

ಮನುಷ್ಯರು ಸುಖವನ್ನೇನೋ ಬಯಸುತ್ತಾರೆ ನಿಜ. ಆದರೆ ಸುಖಕ್ಕೆ ಉಪಾದಾನ ಕಾರಣವಾದ ಧರ್ಮತತ್ತ್ವವನ್ನು ಮಾತ್ರ ಬಯಸುವುದಿಲ್ಲ ಮಾತ್ರವಲ್ಲದೆ ಅದರ ಅವಹೇಳನೆಯನ್ನೇ ಮಾಡುತ್ತಾರೆ. ಎಂತಹ ಆಶ್ಚರ್ಯವಿದು! ವಸ್ತುತಃ ಧರ್ಮತತ್ತ್ವದ ಅಸ್ತಿತ್ವದಲ್ಲೇ ಮನುಷ್ಯನ ಮನುಷ್ಯತ್ವವಿರುತ್ತದೆ.

ಸ್ವಾರ್ಥವನ್ನು ತ್ಯಾಗಮಾಡದ ಹೊರತು ಧರ್ಮವನ್ನಾರಾಧಿಸಲು ಎಂದಿಗೂ ಸಾಧ್ಯವಾಗದು.

ಸಾಂಸಾರಿಕ ರೋಗಿಗಳಾದ ಮನುಷ್ಯರಲ್ಲಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ಧರ್ಮೌಷಧವನ್ನು ಸೇವಿಸುವವನು ಸುಖಸಾಧ್ಯರೋಗಿಯು. ತನ್ನ ಅನುಕೂಲತೆಗನುಸಾರವಾಗಿ ಧರ್ಮವನ್ನಾರಾಧಿಸುವವನು ಕಷ್ಟಸಾಧ್ಯರೋಗಿಯು ಮತ್ತು ಲೋಕವ್ಯವಹಾರ ದೃಷ್ಟಿಯಿಂದ ಧರ್ಮವನ್ನು ಸೇವಿಸುವವನು ಅಸಾಧ್ಯರೋಗಿಯು. ಧರ್ಮರೂಪವಾದ ಆತ್ಮಪ್ರಕೃತಿಯನ್ನುಲ್ಲಂಘಿಸುವುದರಿಂದ ಮನುಷ್ಯನಿಗೆ ಮೋಹರೂಪವಾದ ಉನ್ಮಾದ, ರಾಗರೂಪವಾದ ಜ್ವರ, ದ್ವೇಷರೂಪವಾದ ಶೂಲ, ವಿಷಯಕಷಾಯರೂಪವಾದ ಗಜಕರ್ಣ (ಚರ್ಮರೋಗ), ಈರ್ಷ್ಯಾ ಮತ್ತು ನಿಂದಾರೂಪವಾದ ರಕ್ತಪಿತ್ತ, ಅಜ್ಞಾನರೂಪವಾದ ಅಂಧತ್ವ ಹಾಗೂ ಪ್ರಮಾದರೂಪವಾದ ಜಲೋದರ ಮೊದಲಾದ ನಾನಾ ಪ್ರಕಾರವಾದ ರೋಗಗಳುಂಟಾಗುತ್ತವೆ.

ಭವ್ಯಜನರೆ! ನೀವು ಧರ್ಮರೂಪವಾದ ಕಲ್ಪವೃಕ್ಷದ ಮಧುರ ಫಲವನ್ನು ಪಡೆಯಲಿಚ್ಛಿಸುವಿರಾದರೆ ಅದರ ಬೀಜವನ್ನು ಬಿತ್ತುವುದರಲ್ಲಿ ತತ್ಪರರಾಗಿರಿ. ಧನಕ್ಕಿಂತ ಅಧಿಕವಾಗಿ ಧರ್ಮವನ್ನಾರಾಧಿಸಿರಿ. ವಿಶ್ವದ ಪ್ರಾಣಿಗಳಿಗೆ ಹಿತಕರವಾದ ಸೇವಾಧರ್ಮವನ್ನು ಕೈಕೊಳ್ಳಿರಿ.

ಶಿಲೆಯು ಸಮುದ್ರದಲ್ಲಿ ಬಹುಕಾಲದಿಂದ ಮುಳುಗಿದ್ದರೂ ಮೆತ್ತಗಾಗದಿರುವಂತೆ ಆರಂಭಪರಿಗ್ರಹಗಳಲ್ಲಾಸಕ್ತವಾದ ಅಜ್ಞಾನೀಜೀವನ ಹೃದಯವು ಎಷ್ಟೊಂದು ಧರ್ಮೋಪದೇಶದಿಂದಲೂ ಮೆತ್ತಗಾಗದು. ಧನದ ಅಭಾವಕ್ಕಾಗಿ ನಿರಂತರ ಕಣ್ಣೀರನ್ನು ಸುರಿಸುತ್ತಿರುವ ಮನುಷ್ಯನು ಎಂದಾದರೂ ಧರ್ಮದ ಅಭಾವಕ್ಕಾಗಿ ಒಂದು ತಟಕು ಕಣ್ಣೀರನ್ನಾದರೂ ಸುರಿಸಿರುವನೇ ? ಸ್ವಲ್ಪ ವಿಚಾರಿಸಿರಿ ; ಸ್ತ್ರೀಪುತ್ರಧನಾದಿಗಳಿಗಾಗಿ ಅಶ್ರುಪಾತವನ್ನು ಮಾಡುವುದರಿಂದ ಸಿಕ್ಕುವ ಫಲವೇನು ? ನಿರಾಶೆಯೇ ಅಲ್ಲವೇ ? ಆದರೆ ಧರ್ಮಕ್ಕಾಗಿ ಹಾರ್ದಿಕ ಅಶ್ರುವರ್ಷಣಮಾಡುವುದರಿಂದ ಅದರ ಸತ್ಫಲವು ಪ್ರಾಪ್ತವಾಗುವುದರಲ್ಲಿ ಸಂದೇಹವೇನಿದೆ ? ಧನದ ಪ್ರಾಪ್ತಿಗಾಗಿ ಮಾಡಬೇಕಾದ ಪುರುಷಾರ್ಥಕ್ಕಿಂತಲೂ ಕೋಟಿಪಾಲು ಅಧಿಕವಾದ ಪುರುಷಪ್ರಯತ್ನವನ್ನು ಧರ್ಮದ ಪ್ರಾಪ್ತಿಗಾಗಿ ಮಾಡಬೇಕಾಗುವುದು. ಲೋಕದಲ್ಲಿ ರಾತ್ರಿ ಹಗಲೆನ್ನದೆ ಅವಿಶ್ರಾಂತವಾಗಿ ಶ್ರಮಿಸುವವರಿಗೂ ಹೊಟ್ಟೆತುಂಬ ಅನ್ನ ಸಿಕ್ಕುವುದು ಕಠಿಣವಾಗಿರುವಾಗ ಸಾಮಾನ್ಯ ಅಲ್ಪ ಪ್ರಯತ್ನದಿಂದ ಧರ್ಮಭೋಗವು ದೊರೆತೀತೇ ? ಅಜ್ಞಾನಿಯಾದ ಬಾಲಕನು ರತ್ನದ ಮೂಲ್ಯವನ್ನು ತಿಳಿಯದೆ ಆಟದ ಬೊಂಬೆಗಾಗಿ ಅದನ್ನು ಕೊಟ್ಟು-ಬಿಡುವಂತೆ ಧರ್ಮದ ಮೂಲ್ಯವನ್ನರಿಯದೆ ಭೋಗವಿಲಾಸಸಾಮಗ್ರಿಗಳ ಪ್ರಾಪ್ತಿಗಾಗಿ ಆ ಅಮೂಲ್ಯ ಧರ್ಮರತ್ನವನ್ನು ಕಳಕೊಳ್ಳಬೇಡಿರಿ.

ತಾನಾಗಿ ಧರ್ಮವನ್ನಾರಾಧಿಸುವವನು ಉತ್ತಮನು.

ಇತರರ ಪ್ರೇರಣೆಯಿಂದ ಧರ್ಮವನ್ನಾರಾಧಿಸುವವನು ಮಧ್ಯಮನು.

ಅನ್ಯರ ಪ್ರೇರಣೆಯಿಂದಲೂ ಧರ್ಮವನ್ನಾರಾಧಿಸದವನು ಅಧಮನಾಗಿರುವನು.

ತ್ಯಾಗವಾಗಿರುತ್ತದೆ. ದಾನ ಅರ್ಥಾತ್ ಕೊಡುವುದೆಂಬುದೂ ತ್ಯಾಗದ ಇನ್ನೊಂದು ಅರ್ಥವಾಗಿದೆ. ದಾನವು ಆಹಾರ, ಔಷಧ, ಅಭಯ ಮತ್ತು ಜ್ಞಾನವೆಂದು ನಾಲ್ಕು ವಿಧವಾಗಿದೆ. ಇವುಗಳಲ್ಲಿ ಆಹಾರದಾನ ಮತ್ತು ಔಷಧದಾನವು ಗೃಹಸ್ಥರ ಕರ್ತವ್ಯವಾಗಿದೆ. ಜ್ಞಾನದಾನ ಹಾಗೂ ಅಭಯದಾನವು ಗೃಹಸ್ಥರ ಕರ್ತವ್ಯವೂ ಮುನಿಗಳ ಮುಖ್ಯ ಕರ್ತವ್ಯವೂ ಆಗಿರುತ್ತದೆ.

ಈ ನಾಲ್ಕು ಪ್ರಕಾರವಾದ ದಾನಗಳಲ್ಲಿ ಜ್ಞಾನದಾನವು ಸರ್ವ ಶ್ರೇಷ್ಠವಾಗಿದೆ. ಏಕೆಂದರೆ ಇತರ ಆಹಾರಾದಿ ದಾನಗಳಿಂದ ಪ್ರಾಣಿಗಳಿಗೆ ಸ್ವಲ್ಪ ಕಾಲದ ವರೆಗೆ ಶಾಂತಿಯು ದೊರೆಯುತ್ತದೆ. ಆದರೆ ಜ್ಞಾನದಾನದಿಂದ ಪ್ರಾಣಿಗಳಿಗೆ ಅನಂತಕಾಲದ ವರೆಗೆ ಶಾಶ್ವತವಾದ ಸುಖ-ಶಾಂತಿಯು ದೊರೆಯುತ್ತದೆ. ಖ್ಯಾತಿಪೂಜಾಲಾಭಾದಿಗಳ ಲಾಲಸೆಯಿಂದ ದಾನ ಕೊಡುವಿಕೆಯು ಅತ್ಯಂತ ನೀಚಕಾರ್ಯವಾಗಿದೆ. ಖೇದವನ್ನು ಬಿಟ್ಟು ಮಾನಾದಿಕಷಾಯಗಳನ್ನು ತೊರೆದು ನಿಸ್ವಾರ್ಥ ಭಾವದಿಂದ ಸ್ವಪರಹಿತಕ್ಕಾಗಿ ದಾನವನ್ನು ಮಾಡಬೇಕು. ವಸ್ತುತಃ ದಾನವು ಪರರ ಹಿತಕ್ಕಾಗಿ ಮಾಡಲ್ಪಡುವಂತಹುದಲ್ಲ; ಅದು ತನ್ನ (ಆತ್ಮನ) ಹಿತಕ್ಕಾಗಿ ಮಾಡಲ್ಪಡುವಂತಹುದು. ದಾನದಿಂದ ಸಮಸ್ತ ಆತ್ಮಗುಣಗಳ ವಿಕಾಸವುಂಟಾಗುತ್ತದೆ. ಆದರೆ ಆ ದಾನವು ಮಾನಾದಿ ಕಷಾಯಗಳನ್ನು ತೊರೆದು ಮಾಡಲ್ಪಟ್ಟುದಾದರೆ ಮಾತ್ರ ಫಲಕಾರಿಯಾಗುವುದು. ದಾನ ಮಾಡುವುದರಿಂದ ಪ್ರಾಪ್ತವಾಗಬಹುದಾದ ಖ್ಯಾತಿಪೂಜಾಲಾಭಾದಿಗಳನ್ನು ತ್ಯಾಗಮಾಡಿ ಯಥೋಚಿತ ದಾನವನ್ನೀಯುವವನೇ ನಿಜವಾದ ದಾನಿಯೂ ತ್ಯಾಗಿಯೂ ಸ್ವಪರಕಲ್ಯಾಣ ಸಾಧಕನೂ ಆಗಿರುವನು. ದಾನವೆಂಬುದು ಯಥಾರ್ಥ-ಸಂಪಾದನೆಯ ದೊಂದು ಸಾಧನವು ಹಾಗೂ ನಷ್ಟದ ಆಶಂಕೆಯಿಲ್ಲದ ವ್ಯಾಪಾರವು.

ಆದರಲ್ಲೂ ಜ್ಞಾನದಾನವೆಂಬುದು ತ್ರಿಲೋಕಸಂಪತ್ತಿನ ದಾನವು. ಅದರಿಂದ ಮೂಲೋಕದ ಸುಖವೂ ಮೋಕ್ಷಸುಖವೂ ಲಭಿಸಬಲ್ಲುದು. ಅತಏವ ಜ್ಞಾನದಾನವು ಸಮಸ್ತಸುಖಗಳಿಗೆ ನಿಧಿಯಂತಿರುವುದು.

## ಪರೋಪಕಾರ

ಪರೋಪಕಾರವೆಂಬುದು ಆತ್ಮವಿಕಾಸದ ಅನುಪಮವಾದೊಂದು ಕಲೆಯು. ಹಿಂದೆ ಮಹಾಪುರುಷರಾಗಿದ್ದವರೆಲ್ಲರೂ ಈ ಪರೋಪಕಾರವೃತ್ತಿಯಿಂದಲೇ ಆ ಮಹತ್ತ್ವದ ಸ್ಥಾನವನ್ನು ಪಡೆದರು. ಭವಿಷ್ಯದಲ್ಲಿಯೂ ಪರೋಪಕಾರವೃತ್ತಿಯನ್ನಾಶ್ರಯಿಸುವವರೇ ಮಹಾಪುರುಷರಾಗಬಲ್ಲರು. ಯಾವ ದೇಶ ಜಾತಿಗಳಲ್ಲಿ ಪರೋಪಕಾರವೃತ್ತಿಯಿರುವುದಿಲ್ಲವೋ ಆ ದೇಶ ಜಾತಿಗಳು ಎಂದೂ ಉನ್ನತಿಯನ್ನು ಪಡೆಯಲಾರವು. ವಿಶ್ವಕಲ್ಯಾಣದ ಸಾಧನವೇ ಈ ಪರೋಪಕಾರವೃತ್ತಿಯು. ಪ್ರತಿಯೊರ್ವ ಮಾನವನ ಜೀವನದಲ್ಲಿ ಈ ಗುಣವು ಸ್ವಾಭಾವಿಕರೂಪದಿಂದ ಅವಶ್ಯವಾಗಿ ಇರಬೇಕು. ಆತನು ತನ್ನ ತನು-ಮನ-ಧನಗಳನ್ನು ಪರೋಪಕಾರಕ್ಕಾಗಿ ಅರ್ಪಿಸುವವನಾಗಬೇಕು. ಪರೋಪಕಾರದ ಅರ್ಥವು ಪರರ ಉಪಕಾರಮಾತ್ರವಲ್ಲ; ಅದು ಆತ್ಮವಿಕಾಸದ ಸೋಪಾನವು. ಎಣ್ಣೆ ಮತ್ತು ಬತ್ತಿಯ ವ್ಯಯದಿಂದ ಪ್ರಕಾಶದ ಆವಿರ್ಭಾವವೂ ಅಂಧಕಾರದ ನಾಶವೂ ಉಂಟಾಗುವಂತೆ ಧನದ ಸದ್ವ್ಯಯ (ದಾನ) ದಿಂದ ಸತ್ಯಧರ್ಮರೂಪವಾದ ಪ್ರಕಾಶದ ಆವಿರ್ಭಾವವೂ ಅಧರ್ಮರೂಪವಾದ ಅಂಧಕಾರದ ವಿನಾಶವೂ ಉಂಟಾಗುತ್ತದೆ. ಇಂದಿನ ಯುಗದಲ್ಲಿ ದಾನವು ಸರ್ವೋತ್ತಮವಾದ ಧರ್ಮವಾಗಿರುತ್ತದೆ.

ದಾನವೆಂಬುದು ಪರೋಪಕಾರವಲ್ಲ; ಆತ್ಮೋಪಕಾರವು.

ಶ್ರೀಮಂತರ ಉದ್ಧಾರಕ್ಕಾಗಿಯೇ ಬಡವರ ಉತ್ಪತ್ತಿಯಾಗುತ್ತದೆ. ಅವರ ಸಹಾಯದಿಂದಲೇ ಶ್ರೀಮಂತರಿಗೆ ಕಲ್ಯಾಣವುಂಟಾಗುತ್ತದೆ. ಬಡಜನರೇ ಇಲ್ಲವಾದರೆ ಶ್ರೀಮಂತರ ಲಕ್ಷ್ಮಿಯ (ಸಂಪತ್ತಿನ) ಸದುಪಯೋಗವು ಹೇಗಾದೀತು? ಭೋಗವಿಲಾಸಗಳಿಗಾಗಿ ವ್ಯಯಿಸಲ್ಪಟ್ಟು ದುರ್ಗತಿಯ ಪ್ರಾಪ್ತಿಗೆ ಕಾರಣವಾದ ಸಂಪತ್ತಿಯನ್ನು ದಾನಮಾಡುವುದರಿಂದ (ದೀನ-ಹೀನಪ್ರಜೆಗಳ ಉಪಕಾರಕ್ಕಾಗಿ ವಿನಿಯೋಗಿಸುವುದರಿಂದ) ಪುಣ್ಯಬಂಧವಾಗುವುದು ಹಾಗೂ ಸದ್ಗತಿಯು ಲಭಿಸುವುದು. ನಿಮಗಿಂದು ಬಡಜನರಿಗೆ ಸಹಾಯ ಮಾಡುವುದಕ್ಕಾಗಿ ಉಚಿತ ಸಾಧನ (ಸಂಪತ್ತಿ) ವು ದೊರೆತಿದೆ. ಅದನ್ನು ಸದ್ವಿನಿಯೋಗಪಡಿಸಿ ಕೃತಾರ್ಥರಾಗಿರಿ. ಬಡಜನರ ಉಪಕಾರಕ್ಕಾಗಿ ತನು-ಮನ-ಧನಗಳ ಸರ್ವಶಕ್ತಿಯನ್ನು ವಿನಿಯೋಗಿಸಿರಿ. ಇಂದಿನ ಕಾಲದಲ್ಲಿ ದಾನದ ಕ್ಷೇತ್ರವು ಬಹಳ ಸಂಕುಚಿತವಾಗಿದೆ. ದಾನವೀರರೆಂದು ಹೇಳಿಸಿಕೊಳ್ಳುವವರು ತಮ್ಮ ಆ ಹೆಸರಿನಿಂದಲೇ ತಾವು ಕೃತಾರ್ಥರೆಂದು ತಿಳಿಯುತ್ತಾರೆ. ಕೋಟ್ಯಾಧಿಪತಿಗಳು ತಮ್ಮ ಕೀರ್ತಿಯ ಲಾಲಸೆಯಿಂದ ಕೆಲವು ಸಾವಿರ ರೂಪಾಯಿಗಳನ್ನು ಮಾತ್ರ ದಾನಮಾಡಿ ಅದರಿಂದ ಅನಂತ ಕೀರ್ತಿಯನ್ನು ಪಡೆಯಲು ಬಯಸುತ್ತಾರೆ. ಕೀರ್ತಿಲಾಲಸೆಯಿಂದ ಮಾಡಲ್ಪಡುವ ಇಂತಹ ದಾನವು ಸಮೀಚೀನ ದಾನವೆಂದು ಹೇಳಲ್ಪಡುವುದಿಲ್ಲ. ಜಲಾಶಯದಲ್ಲಿ ಬಂಧಿಸಲ್ಪಟ್ಟಿರುವ ಜಲವು ಕಲಂಕಿತವಾಗಿರುವಂತೆ ಕೃಪಣ (ಲೋಭಿ) ನ ಕಟ್ಟಿಟ್ಟ ಹಣವು ಕಲಂಕಯುಕ್ತವಾಗಿರುತ್ತದೆ. ಹರಿಯುತ್ತಿರುವ ನದಿಯ ಜಲವು ಪರಿಶುದ್ಧ (ನಿರ್ಮಲ) ವಾಗಿರುವಂತೆ ಉದಾರವ್ಯಕ್ತಿಯ ಧನವು ದಾನದಿಂದ ಪರಿಶುದ್ಧವಾಗಿರುತ್ತದೆ. ಶರೀರದಲ್ಲಿ ಘಾಯದಿಂದ ಹರಿದುಹೋದ ರಕ್ತವು ಸ್ವಯಂಪೂರ್ತಿಯಾಗುವಂತೆ ದಾನಕ್ಕಾಗಿ ವ್ಯಯಿಸಿದ ಧನವು ಸ್ವಯಂಪೂರ್ತಿಯಾಗುತ್ತದೆ. ಅರ್ಥಾತ್ ದಾನದಿಂದ ಧನದ ಹಾನಿಯುಂಟಾಗುವು

ದಿಲ್ಲ. ವೃಕ್ಷವು ತನ್ನ ಹಣ್ಣಾದ ಎಲೆಗಳನ್ನು ಉದುರಿಸಿದರೆ (ತ್ಯಾಗ ಮಾಡಿದರೆ) ಪ್ರಕೃತಿಯು ಅದಕ್ಕೆ ಹೊಸ ಚಿಗುರೆಲೆಗಳ ಸಂಪತ್ತನ್ನು ಕೊಡುತ್ತದೆ. ಅದೇ ಪ್ರಕಾರ ತನ್ನ ಧನವನ್ನು ಸತ್ಕಾರ್ಯದಲ್ಲಿ ವಿನಿಯೋಗಿಸುವವನಿಗೆ ಸ್ವಾಭಾವಿಕವಾಗಿ ಅಧಿಕ ಸಂಪತ್ತಿಯು ಪ್ರಾಪ್ತವಾಗುತ್ತದೆ. **"ಉದಾರಚರಿತಾನಾಂ ತು ವಸುಧೈವ ಕುಟುಂಬಕಂ"** ಎಂಬ ನೀತಿಯಂತೆ ಜಗತ್ತನ್ನೇ ತಮ್ಮ ಕುಟುಂಬವನ್ನಾಗಿ ತಿಳಿಯುವ ಉದಾರಿಗಳಾದ ಮಹಾಪುರುಷರು ತಮ್ಮ ತನು-ಮನ-ಧನಗಳನ್ನು ಪ್ರಾಣಿವರ್ಗದ ಹಿತಕ್ಕಾಗಿ-ಉಪಕಾರಕ್ಕಾಗಿ ವಿನಿಯೋಗಿಸಿ ಕೃತಾರ್ಥರಾಗುತ್ತಾರೆ. ಉದಾರತೆಯ ಸದ್ಭಾವದಿಂದ ಹೃದಯವು ವಿಶಾಲವಾಗುತ್ತದೆ ಹಾಗೂ ಅದರ (ಉದಾರತೆಯ) ಅಭಾವದಿಂದ ಹೃದಯವು ಸಂಕುಚಿತವಾಗುತ್ತದೆ. ಉದಾರತೆಯು ದಿವ್ಯಜ್ಯೋತಿಗೂ, ಕೃಪಣತ್ವವು ಗಾಢಾಂಧಕಾರಕ್ಕೂ ಸಮಾನವಾಗಿದೆ.

ನಿಜವಾಗಿಯೂ ದಾನವು ಆತ್ಮೋಪಕಾರಕವಾಗಿರುತ್ತದೆ. ಕಾರ್ಯದ ಫಲವನ್ನು ಕಾರ್ಯವೇ ಕೊಡುತ್ತದೆ. ಕೃಷಿಕನಿಗೆ ಕೃಷಿಯಲ್ಲಿಯೂ, ವ್ಯಾಪಾರಿಗೆ ವ್ಯಾಪಾರದಲ್ಲಿಯೂ ಸ್ವಾರ್ಥವಿರುವಂತೆ ದಾನದಲ್ಲಿ ಪರಮಸ್ವಾರ್ಥವಿರುತ್ತದೆ. ದಾನಿಗೆ ದಾನದಿಂದ ತನ್ನ ಸದ್ಗುಣಗಳ ವಿಕಾಸ ಅಥವಾ ಅಭಿವೃದ್ಧಿರೂಪವಾದ ಸ್ವಾರ್ಥವು ಸಹಜವಾಗಿ ಲಭಿಸುತ್ತದೆ. ಇಹಜನ್ಮದಲ್ಲಿ ಮಾಡಿದ ಯೋಗ್ಯದಾನವು ಸುರಕ್ಷಿತವಾಗಿ ಹೂಳಿಟ್ಟ ನಿಧಿಯಂತಿರುತ್ತದೆ. ಅದು ಪರಭವದಲ್ಲಿ ಸುರಕ್ಷಿತಸ್ಥಿತಿಯಲ್ಲಿ ನಿಃಸಂದೇಹವಾಗಿ ದೊರೆಯುವುದು. ದಾನಮಾಡಲು ಯೋಗ್ಯಸುಸಂದರ್ಭವು ದೊರೆತಿರುವಾಗಲೂ ದಾನಮಾಡದಿರುವಿಕೆಯು ಘಾತಕತನದಾಗಿದೆ. ಭೋಗದ ಪರಿಣಾಮವು ನಾಶರೂಪವೂ ದಾನದ ಪರಿಣಾಮವು ಅಮರತ್ವರೂಪವೂ ಆಗಿರುತ್ತವೆ. ದಾನದಲ್ಲಿ

ತನ್ನ ಸಮೃದ್ಧಿ, ಕಲೆ ಹಾಗೂ ಚಾತುರ್ಯದ ಸದ್ವ್ಯಯವನ್ನು ಮಾಡ ಬೇಕು. ಜಗತ್ತನ್ನು ಪ್ರಕಾಶಗೊಳಿಸುವ ಶ್ರೇಯಸ್ಸು ಸೂರ್ಯನಿಗಿರುವು ದಾದರೆ ಆತ್ಮನನ್ನು ಪ್ರಕಾಶಗೊಳಿಸುವ ಶ್ರೇಯಸ್ಸು ದಾನರೂಪವಾದ ಧರ್ಮಕ್ಕಿರುತ್ತದೆ.

ದಯೆ, ದಾನ, ಪರೋಪಕಾರ ಇವುಗಳು ಹೃದಯದಲ್ಲಿರುವ ಧಾರ್ಮಿಕಭಾವವನ್ನು ಪರೀಕ್ಷಿಸುವ ಒರೆಗಲ್ಲಿನಂತಿರುತ್ತದೆ. "ನಾನು ಇಂಥವನಿಗೆ ದಾನವಿತ್ತೆನು ಅಥವಾ ನಾನು ಇಂಥವನಿಗೆ ಉಪಕಾರ ಮಾಡುತ್ತಿರುವೆನು." ಎಂಬ ವಿಚಾರವೂ (ಭಾವನೆಯೂ) ಅಪರಾಧ ವಾಗಿದೆ. ಏಕೆಂದರೆ ದಾನ ಪರೋಪಕಾರಗಳು ವಸ್ತುತಃ ತನ್ನ ಉಪ ಕಾರಕ್ಕಾಗಿ ಅಥವಾ ಶ್ರೇಯಸ್ಸಿಗಾಗಿಯೇ ಮಾಡಲ್ಪಡುತ್ತದೆ. ಇದ ರಿಂದ ಇತರರಿಗೆ (ದಾನವನ್ನು ಪಡೆದವರಿಗೆ) ಪ್ರಯೋಜನವಾಗಲಿ, ಆಗದಿರಲಿ. ದಾನವಿತ್ತವನಿಗಂತೂ ಶ್ರೇಯಸ್ಸುಂಟಾಗುವುದರಲ್ಲಿ ಸಂದೇಹವಿಲ್ಲ ತನ್ನ ಶರೀರದ ಸೇವೆಯನ್ನು ಪರೋಪಕಾರವನ್ನಾಗಿ ತಿಳಿಯುವುದು ಹಾಸ್ಯಾಸ್ಪದವಾಗಿರುವಂತೆ ಪರೋಪಕಾರವನ್ನು ಪರೋಪಕಾರವನ್ನಾಗಿ ತಿಳಿಯುವುದು ಹಾಸ್ಯಾಸ್ಪದವಾದುದು.

ದಾನವನ್ನು ಗುಪ್ತವಾಗಿ ಮಾಡಬೇಕು. ಬಲಗೈಯಿಂದ ಮಾಡ ಲ್ಪಟ್ಟ ದಾನವು ಎಡಗೈಗೆ ತಿಳಿಯದಂತಿರಬೇಕು. ಗುಪ್ತದಾನವು ಆದರ್ಶದಾನವೆನಿಸುತ್ತದೆ.

ದಾನ (ಅಥವಾ ಪರೋಪಕಾರ) ವನ್ನು ಮಾಡಿ ಅದನ್ನು ಯಾರೊಡನೆಯೂ ಹೇಳದವನು ಉತ್ತಮನು.

ತಾನು ಮಾಡಿದ ದಾನವನ್ನು ಇತರರೊಡನೆ ಹೇಳುವವನು ಮಧ್ಯಮನು.

ದಾನ ಮಾಡುವುದಕ್ಕೆ ಮೊದಲೇ ಡಂಗುರ ಹೊಡೆಯುವವನು ಅಧಮನು.

## ಸಂಸಾರವಿರಕ್ತ-ಆತ್ಮ

ಆತ್ಮತತ್ತ್ವವನ್ನು ಚೆನ್ನಾಗಿ ತಿಳಿದಿರುವ ಆತ್ಮನು ಆತ್ಮದರ್ಶಿಯಾದ ಅಂತರಾತ್ಮನೆನಿಸುವನು. ಅಂತರಾತ್ಮತ್ವವು ಭಾವ-ಆತ್ಮ ಮಂದಿರದ ಗರ್ಭದ್ವಾರವಾಗಿದೆ. ಈ ದ್ವಾರದಿಂದ ಪ್ರವೇಶಿಸಿ ಆ ಮಂದಿರದೊಳಗಿರುವ ಪರಮಾತ್ಮಭಾವರೂಪ ನಿಶ್ಚಯದೇವ (ನಿಜಾತ್ಮ) ನನ್ನು ಕಾಣಬಹುದಾಗಿದೆ. ಕಾರಾಗೃಹದಲ್ಲಿ ಬಂಧಿತನಾಗಿರುವ ಖೈದಿಯು ಯಾವಾಗಲೂ ಕಾರಾಗೃಹದಿಂದ ತನ್ನ ಬಿಡುಗಡೆಯನ್ನು ಚಿಂತಿಸುವಂತೆ ಮತ್ತು ಇತರ ಖೈದಿಗಳೊಡನೆ ಉದಾಸೀನ ಭಾವದಿಂದಿರುವಂತೆ ಅಂತರಾತ್ಮನು ತಾನು ಸಂಸಾರವೆಂಬ ಕಾರಾಗೃಹದಲ್ಲಿರುವ ಖೈದಿಯೆಂದು ತಿಳಿಯುವವನಾಗಿ ನಿರಂತರ ಸಂಸಾರದಿಂದ ಬಿಡುಗಡೆಯನ್ನೇ ಚಿಂತಿಸುತ್ತಿರುವನು ಹಾಗೂ ವಿಷಯಭೋಗ ಪರಿವಾರಾದಿಗಳಲ್ಲಿ ಅನಾಸಕ್ತ (ಉದಾಸೀನ) ನಾಗಿರುವನು. ಆತ್ಮಗುಣಗಳಲ್ಲಿ ಹೊರತು ಇತರ ಯಾವ ಪದಾರ್ಥಗಳಲ್ಲಿಯೂ ಆತನಿಗೆ ಪ್ರೀತಿಯಿರಲಾರದು. ಆತ್ಮದರ್ಶಿಯು ಸಂಸಾರಶರೀರಭೋಗಾದಿಗಳಿಂದ ಸದಾ ವಿರಕ್ತನಾಗಿರುತ್ತಾನೆ. ಪ್ರಬಲರೋಗಪೀಡಿತನಾದ ಮನುಷ್ಯನು ತಾನು ರೋಗಮುಕ್ತನಾಗುವುದಕ್ಕಾಗಿ ಪ್ರಯತ್ನಶೀಲನಾಗಿರುವಂತೆ ಕರ್ಮಬದ್ಧನಾದ ಸಮ್ಯಗ್ದೃಷ್ಟಿಜೀವನು ತಾನು ಕರ್ಮದಿಂದ ನಿರ್ಮುಕ್ತನಾಗುವುದಕ್ಕಾಗಿ ಅಧಿಕ ಪ್ರಯತ್ನಶೀಲನಾಗಿರುತ್ತಾನೆ.

ಸಮ್ಯಗ್ದೃಷ್ಟಿಯಾದ ಜೀವನಿಗೆ ತನ್ನ ಶರೀರದಲ್ಲಿಯೂ ಮಮತ್ವವಿರುವುದಿಲ್ಲವೆಂದಮೇಲೆ ಇನ್ನಾವುದರ ಮೇಲೆ ಮಮತ್ವವಿದ್ದೀತು ? ಅವನಿಗೆ ರಾಗದ್ವೇಷಾದಿಗಳಲ್ಲಿಯೂ ಮಮತೆಯಿರುವುದಿಲ್ಲ. ಸಮ-

ದೃಷ್ಟಿಯುಳ್ಳವನಾದ ಆತನ ಬಾಹ್ಯಪ್ರವೃತ್ತಿಯಲ್ಲಿ ಅಲೌಕಿಕತೆಯಿರುತ್ತದೆ. ದೇಹಧರ್ಮದಂತೆ ಆತ್ಮಧರ್ಮವೂ ಅನಿವಾರ್ಯವೆಂದು ಪ್ರತೀತವಾಯಿತೆಂದರೆ ಆಗಲೇ ಸಮ್ಯಕ್ತ್ವದಶೆಯು ಪ್ರಾಪ್ತವಾಯಿತೆಂದು ತಿಳಿಯಬೇಕು. ರಾಗದ್ವೇಷಮೋಹಗಳು ನಾಶವಾಗುವ ತನಕ ಸಮ್ಯಗ್ದೃಷ್ಟಿಗೆ ವಿಶ್ರಾಂತಿಯಿರಲಾರದು. ಸಮ್ಯಗ್ದೃಷ್ಟಿಗೆ ಕೇವಲ ವೀತರಾಗಸುಖದ ಹೊರತು ಮಿಕ್ಕುದೆಲ್ಲವೂ ದುಃಖರೂಪವಾಗಿ ಕಾಣುತ್ತದೆ. ಆತನು ದೇಹಮಯನಾಗಿರದೆ ಆತ್ಮ-ಭಾವಮಯನಾಗಿರುತ್ತಾನೆ. ದೇಹಮಯವಾದ ದಶೆಯೇ ಮಿಥ್ಯಾಭಾವದಶೆಯು.

ಸಮ್ಯಗ್ದೃಷ್ಟಿಯೋರ್ವನೇ ಸಂಸಾರನಾಟ್ಯರಂಗದಲ್ಲಿ ಯಥಾರ್ಥವೂ, ಸಫಲವೂ ಆದ ನಟನೆಯನ್ನು ಪ್ರದರ್ಶಿಸಿ ಜಗತ್ತಿಗೆ ಯೋಗ್ಯ ಪಾಠವನ್ನು ಕೊಡಬಲ್ಲನು. ಆತನು ಪಾಠವನ್ನು ಕೊಡುವವನು ಮಾತ್ರವೇ ಅಲ್ಲ; ತಾನೂ ಅದರಂತೆ ನಡೆದು ತೋರಿಸುವಂಥವನಾಗಿರುವನು. ವಿಶ್ವಪ್ರೇಮಿಯಾದ ಸಮ್ಯಗ್ದೃಷ್ಟಿಯು ಏಕಾಂತವಾದದ ವಿರೋಧಿಯು. ಆತನು ಪ್ರತಿಯೊಂದು ಕಾರ್ಯದ ಕಾರ್ಯಕಾರಣ ಹಾಗೂ ಫಲವನ್ನು ಚೆನ್ನಾಗಿ ವಿಮರ್ಶಿಸಿ ಅದರಲ್ಲಿ ಪ್ರವೃತ್ತನಾಗುವನು. ಆತನು ಏಕಾಂತವಾದದಿಂದಿರುವ ರೂಢಿಗಳಿಂದ ಬಂಧಿತನಾಗಿರಲಾರನು. ಅವನು ಸತ್ಯದ ಪೂಜಕನಾಗಿರುತ್ತಿದ್ದು ಆ ಸತ್ಯವು ಎಲ್ಲಿದ್ದರೂ ಅದನ್ನು ಸತ್ಯದ ಒರೆಗಲ್ಲಿನಲ್ಲಿ ಪರೀಕ್ಷಿಸಿ ಪ್ರೀತಿಯಿಂದ ಸ್ವೀಕರಿಸುವನು.

ಯಾವ ಕಾರ್ಯವನ್ನಾದರೂ ಉಚಿತ ರೀತಿಯಿಂದ, ಶ್ರದ್ಧೆಯಿಂದ ಮಾಡದೆ ಅದರ ಯಥಾರ್ಥ ಫಲವು ದೊರೆಯಲಾರದು. ಅದರಂತೆಯೇ ದೇಶವ್ರತವನ್ನಾಗಲಿ, ಮುನಿವ್ರತ (ಸಕಲ ಚಾರಿತ್ರ) ವನ್ನಾಗಲಿ ಆಗಮಪ್ರಮಾಣದಿಂದ ಯಥಾವತ್ ನಿಶ್ಚಯಿಸಿ ಶ್ರದ್ಧೆಯಿಂದ ಧಾರಣೆ ಮಾಡದೆ ಅದರ ಯಥಾರ್ಥಫಲವು ದೊರೆಯಲಾರದು.

# ಆತ್ಮದರ್ಶಿಯ ಎಂಟು ಅಂಗಗಳು

೧. ಅಂಧಶ್ರದ್ಧೆ (ಮಿಥ್ಯಾಶ್ರದ್ಧೆ) ಯನ್ನು ಬಿಟ್ಟು ವಸ್ತು-ಸ್ವರೂಪವನ್ನೂ ಕಲ್ಯಾಣಮಾರ್ಗವನ್ನೂ ಚೆನ್ನಾಗಿ ತಿಳಿದು ಅವುಗಳಲ್ಲಿ ನಿಶ್ಚಲಶ್ರದ್ಧೆಯನ್ನಿಡುವುದೂ ತನ್ನ ಅಶುದ್ಧಪರಿಣಾಮದಿಂದ ಸಂಸಾರವೂ, ಶುದ್ಧಪರಿಣಾಮದಿಂದ ಮೋಕ್ಷವೂ ಲಭಿಸುತ್ತದೆಂಬುದರಲ್ಲಿ ದೃಢವಿಶ್ವಾಸನನ್ನಿಡುವುದು ಮೊದಲನೆಯ "**ನಿಃಶಂಕಿತ**" ಅಂಗ-ವಾಗಿದೆ.

೨. ಪೂರ್ವಪುಣ್ಯದಿಂದ ಪ್ರಾಪ್ತವಾದುದೂ, ದುಃಖಕ್ಕೆ ಕಾರಣಗಳೂ ಆದ ವಿಷಯಭೋಗಗಳಲ್ಲಿ ಇಚ್ಛೆಯನ್ನಿಡದಿರುವುದು ಎರಡನೆಯ "**ನಿಃಕಾಂಕ್ಷಿತ**" ಅಂಗವು.

೩. ಪಾಪಕರ್ಮೋದಯದಿಂದ ಪ್ರಾಪ್ತವಾದ ಅನಿಷ್ಟಸಾಮಗ್ರಿಗಳಲ್ಲಿಯೂ, ಅಂತರಂಗದಲ್ಲಿ ರತ್ನತ್ರಯಜ್ಯೋತಿಯಿಂದ ಬೆಳಗುತ್ತಿರುವ ಆತ್ಮನ ಸ್ವಭಾವತಃ ಅಪವಿತ್ರವಾದ ಬಾಹ್ಯಶರೀರದಲ್ಲಿಯೂ ಅರುಚಿ (ಗ್ಲಾನಿ) ಯನ್ನು ಹೊಂದದಿರುವಿಕೆಯು ಮೂರನೆಯ "**ನಿರ್ವಿಚಿಕಿತ್ಸಿತ**" ಅಂಗವು.

೪. ಇಹಲೌಕಿಕ ಮತ್ತು ಪಾರಲೌಕಿಕ ಕಾರ್ಯಗಳಲ್ಲಿ ಹಿತಾಹಿತ ವಿಚಾರವನ್ನು ಮಾಡಿ ಅಹಿತಕಾರ್ಯಗಳನ್ನು ತೊರೆದು ಹಿತಕಾರ್ಯಗಳಲ್ಲಿ ಪ್ರವರ್ತಿಸುವುದೂ, ಅಸತ್ಯಧರ್ಮ ಹಾಗೂ ಅದರ ಅನುಯಾಯಿಗಳಲ್ಲಿ ಉದಾಸೀನಭಾವದಿಂದಿರುವುದೂ ನಾಲ್ಕನೆಯ "**ಅಮೂಢದೃಷ್ಟಿ**" ಅಂಗವಾಗಿರುತ್ತದೆ.

೫. ಸತ್ಯಧರ್ಮಕ್ಕೆ ಅಜ್ಞಾನಿಗಳಿಂದುಂಟಾದ ದೂಷಣೆಯನ್ನು ನಿವಾರಿಸುವುದೂ, ಪರನಿಂದೆ ಹಾಗೂ ಆತ್ಮಪ್ರಶಂಸೆಯನ್ನು ಮಾಡದಿರುವುದೂ ಐದನೆಯ "**ಉಪಗೂಹನ**" ಅಂಗವು.

೬. ತನ್ನ ಹಾಗೂ ಇತರರ ಸತ್ಯಶ್ರದ್ಧೆ, ಸದ್ವಿಚಾರ ಹಾಗೂ ಸದಾಚಾರಗಳು ಏನಾದರೊಂದು ಕಾರಣದಿಂದ ಪತನೋನ್ಮುಖವಾಗುತ್ತಿರಲು ಅವುಗಳನ್ನು ಯೋಗ್ಯ ಉಪಾಯದಿಂದ ಸ್ಥಿರಗೊಳಿಸುವಿಕೆಯು ಹಾಗೂ ವೃದ್ಧಿಪಡಿಸುವಿಕೆಯು ಆರನೆಯದಾದ "**ಸ್ಥಿತೀಕರಣ**" ಅಂಗವೆನಿಸುತ್ತದೆ.

೭. ಪ್ರಾಣಿಗಳನ್ನು ಕಲ್ಯಾಣಮಾರ್ಗಕ್ಕೊಯ್ಯುವದಕ್ಕಾಗಿ ಸಮಸ್ತ ವಿಶ್ವದಲ್ಲಿ ನಿಸ್ವಾರ್ಥ ಪ್ರೇಮಭಾವವನ್ನಿಡುವುದೂ, ಸಹಧರ್ಮಿಗಳಲ್ಲಿ, ಗುಣವಂತರಲ್ಲಿ ಹಾಗೂ ಗುಣಗಳಲ್ಲಿ ವಿಶಿಷ್ಟ ಪ್ರೇಮವನ್ನಿಡುವುದೂ ಏಳನೆಯ "**ವಾತ್ಸಲ್ಯ**" ಅಂಗವಾಗಿರುತ್ತದೆ. ಸದಾಚಾರಿಯಲ್ಲಿ ವಾತ್ಸಲ್ಯವನ್ನಿಡುವುದೆಂದರೆ ಸದಾಚಾರದಲ್ಲಿ ವಾತ್ಸಲ್ಯವಿಡುವುದೆಂದರ್ಥವು. ಈ ವಾತ್ಸಲ್ಯವು ವ್ಯಕ್ತಿಗತವಾಗಿರದೆ ಗುಣಗತವಾಗಿರುತ್ತದೆ.

೮. ಪರಮಕಲ್ಯಾಣಕಾರಿಯಾದ ಸತ್ಯಮಾರ್ಗ (ಧರ್ಮ)ವನ್ನು ಜಗತ್ತಿನಲ್ಲಿ ಪ್ರಚಾರಗೊಳಿಸುವುದೂ ಅದರ ಮಹತ್ತ್ವವನ್ನು ಜಗತ್ತಿಗೆ ತಿಳಿಸುವುದೂ ಎಂಟನೆಯದಾದ "**ಪ್ರಭಾವನಾ**" ಅಂಗವಾಗಿರುತ್ತದೆ. ಪ್ರಭಾವನೆಯ ಸಾಧನಗಳು ಅನೇಕ ಪ್ರಕಾರವಾಗಿರುತ್ತವೆ. ಯಾವ ಕ್ಷೇತ್ರ (ದೇಶ) ಕಾಲಗಳಲ್ಲಿ ಯಾವ ಸಾಧನದಿಂದ ಪ್ರಭಾವನೆಯಾದೀತೆಂಬುದನ್ನು ತಿಳಿದು ಅದರಂತೆ ವರ್ತಿಸಬೇಕು. ವಸ್ತುತಃ ನಮ್ಮ ಆಚರಣೆಯಿಂದಲೇ ಧರ್ಮದ ಪ್ರಭಾವನೆಯಾಗುತ್ತದೆ. ನಮ್ಮ ಪ್ರವೃತ್ತಿಯು ಪರೋಪಕಾರಮಯವಾಗಿದ್ದುದಾದರೆ ಜನರು ಅನಾಯಾಸವಾಗಿ ನಮ್ಮ ಧರ್ಮವನ್ನು ಪ್ರಶಂಸಿಸುತ್ತಾರೆ. ನಮ್ಮ ಆಚರಣೆಯು ಮಲಿನವಾದುದಾದರೆ ನಮ್ಮ ಧರ್ಮದ ಮೇಲೆ ಇತರರಿಗೆ ಶ್ರದ್ಧೆಯುಂಟಾಗಲಾರದು.

ಈ ಎಂಟು ಅಂಗ (ಗುಣ) ಗಳನ್ನು ಪ್ರತಿಯೊರ್ವ ಜೀವನೂ ಪಡೆಯುಬಲ್ಲನು. ಇವು ಆತ್ಮನ ಸ್ವಭಾವಗಳಾಗಿವೆ. ಇವುಗಳಿಗೆ ವಿರುದ್ಧವಾದ ಪ್ರವೃತ್ತಿಯು ದೋಷವಾಗಿರುತ್ತದೆ. ದೋಷಗಳನ್ನು ಪರಿಹರಿಸುವುದರಿಂದ ಗುಣಗಳ ವಿಕಾಸವುಂಟಾಗುತ್ತದೆ. ಮುಮುಕ್ಷು ಗಳಾದ ಜೀವರು ಈ ಗುಣಗಳ ಪ್ರಾಪ್ತಿ, ರಕ್ಷಣೆ, ಶುದ್ಧಿ ಹಾಗೂ ವೃದ್ಧಿಯಲ್ಲಿ ಸಾವಧಾನತೆಯಿಂದ ಪ್ರಯತ್ನಿಸಬೇಕು. ಇದರಿಂದ ಸರ್ವ ಆತ್ಮಗುಣಗಳ ವಿಕಾಸವುಂಟಾಗಿ ಪರಮಸುಖಶಾಂತಿಗಳು ಲಭಿ-ಸುವುವು.

## ಆತ್ಮಜ್ಞಾನ

ಆತ್ಮತತ್ತ್ವದ ಯಥಾರ್ಥಪರಿಜ್ಞಾನವು ಸಮ್ಯಗ್‌ಜ್ಞಾನವೆನಿಸುತ್ತದೆ. ಆತ್ಮಜ್ಞಾನಿಯಾದ ಮನುಷ್ಯನು ದೇವಮಾನವರ ಉತ್ತ-ಮೋತ್ತಮ ಭೋಗಗಳನ್ನು ರೋಗಕ್ಕೆ ಸಮಾನವಾದುವುಗಳನ್ನಾಗಿ ತಿಳಿಯುತ್ತಾನೆ. ಆತನು ನಿರಂತರ ಆತ್ಮನಲ್ಲೇ ರಮಿಸುವವನಾಗಿ ಬಾಹ್ಯವಸ್ತುಗಳ ಆಕಾಂಕ್ಷೆಯಿಂದ ದೂರನಾಗಿರುತ್ತಾನೆ.

ಸೂರ್ಯನ ಪ್ರಕಾಶವಿಲ್ಲದೆ ಸಸ್ಯಗಳು ಬೆಳೆಯುಲಾರವು. ಅದ ರಂತೆ ಜ್ಞಾನದ ಪ್ರಕಾಶವಿಲ್ಲದೆ ಆತ್ಮಗುಣರೂಪವಾದ ಸಸ್ಯಗಳು ಬೆಳೆಯುಲಾರವು ಜ್ಞಾನದ ಪ್ರಕಾಶದಿಂದಲೇ ಆತ್ಮಗುಣಗಳು ಅಧಿಕಾಧಿಕವಾಗಿ ವೃದ್ಧಿಯಾಗುವುವು. ಅಗ್ನಿಯು ಅಪಥ್ಯವಾದ ವಸ್ತುವನ್ನು ಪಥ್ಯವನ್ನಾಗಿಯೂ ಅಪಕ್ವವಾದ ವಸ್ತುವನ್ನು ಪಕ್ವವನ್ನಾಗಿಯೂ ಮಾಡುವಂತೆ ಆತ್ಮಜ್ಞಾನವು ಪ್ರತಿಕೂಲಸಂಯೋಗಗಳನ್ನು ಅನುಕೂಲ ಗಳನ್ನಾಗಿಯೂ, ವಿಷಮಭಾವವನ್ನು ಸಮಭಾವವನ್ನಾಗಿಯೂ ಮಾಡುತ್ತದೆ.

ಶರೀರಬಲಕ್ಕಿಂತ ಇಂದ್ರಿಯಬಲದಲ್ಲಿಯೂ, ಇಂದ್ರಿಯಬಲಕ್ಕಿಂತ ಜ್ಞಾನಬಲದಲ್ಲಿಯೂ ಅಧಿಕ ಸಾಮರ್ಥ್ಯವೂ, ಆನಂದವೂ ಇರುತ್ತದೆ. ಸಮ್ಯಗ್ಜ್ಞಾನಿಯು ತನ್ನ ಜ್ಞಾನವನ್ನು ಆಚರಣೆಯ (ಚಾರಿತ್ರದ) ಮೂಲಕ ಸಫಲಗೊಳಿಸುತ್ತಾನೆ. ಜ್ಞಾನವು ಆಚರಣೆಯಿಂದಲೇ ಸಾರ್ಥಕವಾಗುತ್ತದೆ.

ಕುಂಟನಾದ (ಶೀಘ್ರಗಮನಸಾಮರ್ಥ್ಯವಿಲ್ಲದ) ಮನುಷ್ಯನು ತಾನು ಇರುವ ಕಾಡಿಗೆ ಬೆಂಕಿ ತಗಲಿರುವುದನ್ನು ತಿಳಿದರೂ ಓಡುವ ಸಾಮರ್ಥ್ಯವಿಲ್ಲದವನಾದುದರಿಂದ ಕಾಡ್ಗಿಚ್ಚಿನಿಂದ ತನ್ನನ್ನು ರಕ್ಷಿಸಿಕೊಳ್ಳಲಾರನು. ಹೀಗೆ ಆತನ ತಿಳಿವಳಿಕೆ (ಜ್ಞಾನ) ಯು ನಡತೆ (ಆಚರಣೆ) ಯಲ್ಲಿ ಬಾರದೆ ವ್ಯರ್ಥವಾಗಿರುವಂತೆ, ಚಾರಿತ್ರ (ಆಚರಣೆ) ವಿಲ್ಲದ ಜ್ಞಾನವು ವ್ಯರ್ಥವಾಗಿರುತ್ತದೆ. ಕೈಯಲ್ಲಿ ದೀಪವನ್ನು ಹಿಡಿದುಕೊಂಡಿದ್ದೂ ಬಾವಿಯಲ್ಲಿ ಬೀಳುವ ಮನುಷ್ಯನಿಗೆ ಆ ದೀಪದಿಂದ ಫಲವೇನು ? ಅದರಂತೆ ಸಮ್ಯಗ್ಜ್ಞಾನವುಳ್ಳವನಾಗಿದ್ದೂ ಅದಕ್ಕೆ ವಿಪರೀತವಾಗಿ ವರ್ತಿಸುವವನಿಗೆ ಅರ್ಥಾತ್ ಸಚ್ಚಾರಿತ್ರವಿಲ್ಲದವನಿಗೆ ಆ ಜ್ಞಾನದಿಂದ ಫಲವೇನು ? ಅತಏವ ಕ್ರಿಯಾಶೂನ್ಯವಾದ ಜ್ಞಾನವು ನಿರರ್ಥಕವಾದುದು. ಜ್ಞಾನಚಾರಿತ್ರಗಳು ಮೋಕ್ಷಮಾರ್ಗ ರೂಪವಾದ ರಥದ ಎರಡು ಗಾಲಿ (ಚಕ್ರ) ಗಳಂತಿರುತ್ತವೆ.

## ವಸ್ತುತತ್ತ್ವ

ಸಮಸ್ತ ದ್ರವ್ಯಗಳೂ ತಮ್ಮ ತಮ್ಮ ಸ್ವಭಾವಗುಣಪರ್ಯಾಯ ರೂಪವಾಗಿ ಪರಿಣಮನವನ್ನು ಹೊಂದುತ್ತವೆ. ಅವು ಪರಭಾವಾದಿ ರೂಪವಾಗಿ ಪರಿಣಮಿಸುವುದಿಲ್ಲ. ಇದು ವಸ್ತುಸ್ವಭಾವವಾಗಿರುತ್ತದೆ. ಈ ಕಾರಣದಿಂದ ಆತ್ಮನಿಗೆ ಉಪಕಾರವನ್ನಾಗಲಿ, ಅಪಕಾರವನ್ನಾಗಲಿ

ಮಾಡುವ ಯಾವುದೊಂದು ಪರಪದಾರ್ಥವೂ ಇರುವುದಿಲ್ಲ. ಯಾವುದೊಂದು ಪರಪದಾರ್ಥವನ್ನೂ ತನಗೆ ಉಪಕಾರಕವನ್ನಾಗಿ ಅಥವಾ ಅಪಕಾರಕನನ್ನಾಗಿ ತಿಳಿದು ಆಕುಲತೆಯನ್ನು ಹೊಂದುವುದು ಕೇವಲ ಮೂರ್ಖತೆಯು. ವಸ್ತುತಃ ಶುದ್ಧಸ್ವಭಾವವೇ ನಮಗೆ ಉಪಕಾರಿಯೂ, ಅಶುದ್ಧಸ್ವಭಾವವೇ ಅಪಕಾರಿಯಾಗಿಯೂ ಆಗಿರುತ್ತದೆ. ಆದುದರಿಂದ ಇತರ ಯಾರನ್ನೂ ಮಿತ್ರನನ್ನಾಗಿ ಅಥವಾ ಶತ್ರುವನ್ನಾಗಿ ತಿಳಿದು ರಾಗದ್ವೇಷಗಳನ್ನು ಮಾಡುವುದು ಅನುಚಿತವಾಗಿದೆ. ಪರಪದಾರ್ಥಗಳಾದ ಸ್ತ್ರೀಪುತ್ರಾದಿಗಳು ಸುಖದಾಯಕರಾಗಿರುವರೆಂದು ತಿಳಿದು ಅವರ ದರ್ಶನಾದಿಗಳಿಂದ ಪ್ರಸನ್ನತೆಯನ್ನು ಹೊಂದುವುದೂ ವಿಷಕಂಟಕಸರ್ಪಾದಿಗಳು ದುಃಖದಾಯಕಗಳೆಂದು ತಿಳಿದು ಅವುಗಳ ದರ್ಶನಾದಿಗಳಿಂದ ದ್ವೇಷಭಾವವನ್ನು ಹೊಂದುವುದೂ ಕೇವಲ ಭ್ರಾಂತಿಯಾಗಿರುತ್ತದೆ. ಆದಕಾರಣ ಆತ್ಮಹಿತೈಷಿಗಳಾದ ಸತ್ಪುರುಷರು ಪರಪದಾರ್ಥಗಳಲ್ಲಿ ಇಷ್ಟಾನಿಷ್ಟಭ್ರಾಂತಿಯನ್ನು ತೊರೆದು ಈ ಪರಪದಾರ್ಥಗಳ ನಿಮಿತ್ತದಿಂದುಂಟಾಗುವ ಆತ್ಮನ ಮೋಹಜನಿತ-ರಾಗದ್ವೇಷಾದಿಭಾವಗಳೇ ಪರಮದುಃಖದಾಯಕಗಳೆಂದು ತಿಳಿದು ಅವುಗಳನ್ನು (ರಾಗದ್ವೇಷಭಾವಗಳನ್ನು) ಸರ್ವಥಾ ತ್ಯಾಗಮಾಡಿ ಕೇವಲ ಆತ್ಮನ ಶುದ್ಧಚೈತನ್ಯಾದಿ ಗುಣಪರ್ಯಾಯಗಳ ದರ್ಶನ, ಚಿಂತವನ ಹಾಗೂ ಧ್ಯಾನವನ್ನು ಮಾಡುತ್ತಾರೆ. ಇದರಿಂದಲೇ ಅವಿನಾಶಿ ಅಚಲ ಹಾಗೂ ಅಖಂಡವಾದ ಆತ್ಮಿಕ ನಿತ್ಯಸುಖವು ಪ್ರಾಪ್ತವಾಗಬಲ್ಲುದು. ಇದರ ಹೊರತು ಯಾವುದೊಂದು ಪರಪದಾರ್ಥದಿಂದಲೂ ಎಂದಿಗೂ ಸುಖಶಾಂತಿಯು ಲಭಿಸಲಾರದು.

ವಿಷಸೇವನೆಯಿಂದ ದುಃಖವೂ, ಅಮೃತಸೇವನೆಯಿಂದ ಸುಖಶಾಂತಿಯೂ ಲಭಿಸುವಂತೆ ಪರಪದಾರ್ಥಗ್ರಹಣದಿಂದ ದುಃಖವೂ

ಸ್ವಾತ್ಮಗುಣ ಹಾಗೂ ಪರ್ಯಾಯಗಳ ಗ್ರಹಣದಿಂದ ಸುಖಶಾಂತಿಯು ಲಭಿಸುತ್ತದೆ.

## ಆತ್ಮಸಂಯಮ

ಆತ್ಮದರ್ಶನ, ಆತ್ಮಜ್ಞಾನ ಮತ್ತು ಆತ್ಮಚಾರಿತ್ರ ಇವುಗಳಿಂದ ಮಹತ್ತರವಾದ ಪದವಿಯು ಪ್ರಾಪ್ತವಾಗುತ್ತದೆ. ಆತ್ಮವಿಜಯವೇ ಮಹತ್ತರವಾದ ವಿಜಯವು ಹಾಗೂ ಸತ್ಯ (ಯಥಾರ್ಥ) ವಿಜಯವು. ಇಂದ್ರಿಯಗಳ ಹಾಗೂ ವಿಷಯವಾಸನೆಗಳ ಮೇಲೆ ಶಾಸನ ನಡೆಯಿಸುವವನೇ ರಾಜಾಧಿರಾಜನಾಗಿರುವನು ಮತ್ತು ತನ್ನ ಮನಸ್ಸನ್ನು ತನ್ನ ಅಧೀನವನ್ನಾಗಿ ಮಾಡಿ ಅದನ್ನು ಆಳುವವನೇ ದೊಡ್ಡ ಅರಸನಾಗಿರುವನು. ತನ್ನ ಅಂತಃಸಾಮ್ರಾಜ್ಯದಲ್ಲಿ ಅಧಿಕಾರವನ್ನು ಸ್ಥಾಪಿಸುವವನು ನಿಜವಾದ ಮಹಾತ್ಮನಾಗಿರುವನು. ಆತ್ಮಸಂಯಮವೇ ಸಮಸ್ತ ಗುಣಗಳಿಗೆ ಮೂಲವಾಗಿದೆ. ಆತ್ಮವಿಜಯವೆಂಬುದು ಮಾನವನ ಅಂತಿಮವೂ, ಮಹತ್ತರವೂ ಆದ ವಿಜಯವಾಗಿದೆ ನೀವು ಶಾಂತ ಸಂಯಮಿಗಳಾದುದಾದರೆ ನಿಮ್ಮ ಪ್ರಭಾವವು ಎಲ್ಲರ ಮೇಲೂ ಬೀಳುವುದು. ಇದರಿಂದ ನೀವು ವಿಶ್ವದಲ್ಲಿ ನಿಮ್ಮ ಅಧಿಕಾರವನ್ನು ಸ್ಥಾಪಿಸಲು ಸಮರ್ಥರಾಗುವಿರಿ. ಆತ್ಮಸಂಯಮದ ಅಭಾವದಿಂದ ಮನುಷ್ಯನ ಯಾವ ಸದ್ಗುಣಗಳೂ ಶೋಭಿಸಲಾರವು.

ಕ್ರೋಧವನ್ನು ತಡೆಯಲು ನೀವು ಅಸಮರ್ಥರಾದ ಸಂದರ್ಭದಲ್ಲಿ ನಾಲಗೆಯನ್ನು ತಡೆಯಿರಿ ಕ್ರೋಧವು ಆತ್ಮನ ನಿಜಸ್ವರೂಪವನ್ನು ಕೆಡಿಸುತ್ತದೆ. ಕ್ರೋಧದಿಂದ ಮನುಷ್ಯನ ಆಯುರ್ಮಾನವೂ ಕಡಿಮೆಯಾಗುತ್ತದೆಂದು ವೈಜ್ಞಾನಿಕರು ಹೇಳುತ್ತಾರೆ. ಕ್ರೋಧವುಂಟಾದ ಸಮಯ ನಾಲಗೆಯನ್ನು ನಿಯಂತ್ರಿಸಿ ಮೌನಧಾರಣೆಯನ್ನು ಮಾಡುವುದರಿಂದ ಸರ್ವಸಂತಾಪಗಳು ದೂರವಾಗಿ ಮನಸ್ಸು ಶಾಂತ

ವಾಗುತ್ತದೆ. ಆತ್ಮಧರ್ಮಾಚರಣೆಯ ಅಭಾವದಿಂದ ವಿಷಯಕಷಾಯಗಳ ಉತ್ಪತ್ತಿಯಾಗುತ್ತದೆ. ವಿಷಯಕಷಾಯಗಳು ಆತ್ಮಗುಣಗಳ ವಿನಾಶಕ್ಕೆ ಕಾರಣಗಳಾಗಿರುತ್ತವೆ. ಲೋಕಾಚಾರಕ್ಕಿಂತಲೂ ಹೆಚ್ಚಾಗಿ ಸದಾಚಾರಕ್ಕೆ ಮಹತ್ತ್ವವನ್ನು ಕೊಡಬೇಕು. ವಿಷಯಕಷಾಯಗಳ ಸಂಯೋಗದಿಂದಲೂ ಪರವಶನಾಗದೆ ಶಾಂತನಾಗಿರುವವನೇ ಪೂರ್ಣ ಸ್ವತಂತ್ರನಾಗಿರುವನು. ಸಂಯಮವಿಲ್ಲದ ಮನುಷ್ಯನು ಪಶುತುಲ್ಯನಾಗಿರುತ್ತಾನೆ.

ಸಂಯಮವು ಇಹಲೋಕದ ಮತ್ತು ಪರಲೋಕದ ಸುಖಕ್ಕೆ ಸಾಧನವಾಗಿದೆ. ಅರ್ಥಾತ್ ಸಂಯಮದ ಹೊರತು ಯಾವ ಪ್ರಕಾರವಾದ ಸುಖ (ಇಂದ್ರಿಯಜನ್ಯಸುಖ ಹಾಗೂ ಅತೀಂದ್ರಿಯಜನ್ಯಸುಖ) ವೂ ಲಭಿಸಲಾರದು. ಸಂಯಮವು ಪಾಪನಿವೃತ್ತಿರೂಪವಾದುದು.

ಸಂಯಮದ ಅಭಾವದಿಂದ ಪಾಪಕರ್ಮಗಳ ಸಂಚಯ, ಸ್ವ-ಪರಪ್ರಾಣಗಳ ಘಾತ, ಶರೀರ ಧನ ಹಾಗೂ ಕೀರ್ತಿಯ ನಾಶ ಇವು ಗಳುಂಟಾಗುವುದರಿಂದ ಜೀವನು ಪತಿತನಾಗಿ ದುರ್ಗತಿಗೆ ಪಾತ್ರನಾಗುತ್ತಾನೆ.

ಸಂಯಮದ ಸದ್ಭಾವ (ಅಸ್ತಿತ್ವ) ದಿಂದ ಪುಣ್ಯಸಂಚಯವೂ, ಧರ್ಮದ ಪ್ರಾಪ್ತಿಯೂ, ಸ್ವಪರಪ್ರಾಣಗಳ ರಕ್ಷಣೆ (ಕಲ್ಯಾಣ) ಯೂ, ಶರೀರ ಧನ ಕೀರ್ತಿಗಳ ರಕ್ಷಣೆ ಹಾಗೂ ಅಭಿವೃದ್ಧಿಯೂ ಉಂಟಾಗುತ್ತದೆ ಮಾತ್ರವಲ್ಲದೆ ಇದರಿಂದ ಆತ್ಮನು ಪರಮಪದವನ್ನು ಪಡೆಯುತ್ತಾನೆ. ಸಾರಾಂಶತಃ ಅಸಂಯಮವು ಸರ್ವಪಾಪಗಳ ಮೂಲವೂ, ಸಂಯಮವು ಸರ್ವಧರ್ಮಗಳ ಮೂಲವೂ ಆಗಿರುತ್ತದೆ.

ಸಂಯಮವು ಇಂದ್ರಿಯಸಂಯಮವೆಂದೂ, ಪ್ರಾಣಿಸಂಯಮ

ವೆಂದೂ ಎರಡು ಪ್ರಕಾರವಾಗಿದೆ. ಇಂದ್ರಿಯ ಮನಸ್ಸುಗಳನ್ನು ವಿಷಯಕಷಾಯಗಳಿಂದ ನಿರೋಧಿಸುವುದು ಇಂದ್ರಿಯಸಂಯಮವು. ಆರಂಭಪರಿಗ್ರಹಾದಿಗಳ ತ್ಯಾಗದಿಂದ ಪ್ರಾಣಿಮಾತ್ರದ ರಕ್ಷಣೆಯನ್ನು ಮಾಡುವುದು ಪ್ರಾಣಿಸಂಯಮವೆನಿಸುತ್ತದೆ. ಪರಮಪದಪ್ರಾಪ್ತಿಗೆ ಇಂದ್ರಿಯಸಂಯಮವು ಸಾಕ್ಷಾತ್‌ಕಾರಣವೂ, ಪ್ರಾಣಿಸಂಯಮವು ಪರಂಪರಾಕಾರಣವೂ ಆಗಿರುತ್ತದೆ. ಆದುದರಿಂದ ಸಂಯಮಯುಕ್ತವಾದ ಜೀವನವು ದೇವತೆಗಳಿಂದಲೂ, ಆದರಿಸಲ್ಪಡುವಂತಹುದೂ ಪರಮಪದಪ್ರಾಪ್ತಿಯನ್ನುಂಟುಮಾಡುವಂತಹುದೂ ಆಗಿದೆ. ಅಸಂಯಮೀಜೀವನವು ಇದಕ್ಕೆ ವ್ಯತಿರಿಕ್ತವಾದುದು.

"ಆತ್ಮಸಂಯಮವು ಜೀವಾತ್ಮನನ್ನು ಪರಮಾತ್ಮನ ಬಳಿಗೆ ಕೊಂಡೊಯ್ಯುವುದು. ಅದರ ಅಭಾವವು ಅಜ್ಞಾನಾಂಧಕಾರಕೂಪಕ್ಕೊಯ್ಯುವುದು.

"ಆತ್ಮಸಂಯಮದಂತಹ ಅಮೂಲ್ಯವಾದ ವಸ್ತುವು ಬೇರೊಂದಿಲ್ಲ. ಆದುದರಿಂದ ಸಂಪತ್ತನ್ನು ಕಾಯುವಷ್ಟೇ ದಕ್ಷತೆಯಿಂದ ಅದನ್ನು ಕಾಯ್ದುಕೊಳ್ಳಿರಿ.

"ನಮ್ರವಾಗಿರುವಿಕೆಯು ಪ್ರತಿಯೊಬ್ಬರಿಗೆ ಶೋಭಿಸುವುದು. ಪರಂತು ಅಧಿಕಸಂಪತ್ತುಳ್ಳವರಿಗೆ ಅದು ಭೂಷಣಪ್ರಾಯವೂ, ಅಧಿಕ ಶೋಭಾಜನಕವೂ ಆಗಿರುವುದು.

"ವಿದ್ಯೆ, ಕುಲೀನತೆ ಮತ್ತು ಐಶ್ವರ್ಯ ಇವು ನಮ್ರತೆಯಿಂದ ಹೆಚ್ಚುವುವೇ ಹೊರತು ಯಾವ ಕಾಲಕ್ಕೂ ಕಡಿಮೆಯಾಗಲಾರವು."

ಎಂದು ಮನುಷ್ಯನು ಆತ್ಮಸಂಯಮದ ಜೀವನವನ್ನು ನಡೆಸಿ, ಆಮೆಯು ಹೊರಗಿನಿಂದುಂಟಾಗಬಹುದಾದ ಅಪಾಯದ ಸುಳಿವನ್ನು ತಿಳಿದೊಡನೆ ತನ್ನ ಕಾಲುಗಳನ್ನು ಚಿಪ್ಪಿನೊಳಗೆ ಎಳೆದುಕೊಳ್ಳುವಂತೆ

ಪಂಚೇಂದ್ರಿಯಗಳನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳುವನೋ ಅಂಥ ವನು ಮುಂದೆ ಏಳು ಜನ್ಮಗಳಲ್ಲಿ ಪಾಪಕರ್ಮಗಳಿಂದ ನಿಶ್ಚಿಂತನಾಗು ತ್ತಾನೆ. ಅರ್ಥಾತ್ ದುಷ್ಕರ್ಮಗಳಿಂದ (ದುಃಖಗಳಿಂದ) ಪಾರಾಗು ತ್ತಾನೆ.

ನೀವು ಬೇರೆ ಯಾವುದನ್ನು ಅಲಕ್ಷಿಸಿದರೂ ನಿಮ್ಮ ನಾಲಿಗೆ ಯನ್ನು ಅಂಕೆಯಲ್ಲಿಟ್ಟುಕೊಳ್ಳಲು ಮರೆಯಬೇಡಿರಿ. ಹಾಗೆ ತಪ್ಪಿ-ದವರು ಮುಂದೆ ಅಪಾರ ಕಷ್ಟಕ್ಕೊಳಗಾಗುವರು.

ಎಂದರೆ ಜನರ ವಿಷಯದಲ್ಲಿ ಸ್ವಾಧೀನತೆಯನ್ನು ಸಡಿಲುಗೊಳಿಸ ಬೇಕೆಂಬ ಅರ್ಥವಲ್ಲ. ಆದರೆ ಅಜಾಗ್ರತೆಯ ಹಾಗೂ ಅವಿವೇಕತನದ ಮಾತುಗಾರಿಕೆಯು ಆಗಾಗ್ಗೆ ಇದ್ದೇಯಿರುವುದರಿಂದ ಆ ಕುರಿತು ವಿಶೇಷ ಜಾಗ್ರತೆವಹಿಸುವುದು ಅತ್ಯಗತ್ಯ.

ಸುಟ್ಟಗಾಯದ ನೋವು ಅಥವಾ ವ್ರಣವು ವಾಸಿಯಾಗ ಬಹುದು. ಆದರೆ ನಾಲಗೆಯು ಎಚ್ಚರತಪ್ಪಿ ಮಾತನಾಡಿದುದರಿಂದ ಉಂಟಾದ ನೋವು ಯಾವತ್ಕಾಲವೂ ಮರೆಯಲಾರದು. ಅದು ಮಾಸಿಹೋಗದ ಪಿಶಾರಮಚ್ಚೆಯಂತೆ ಮನಸ್ಸಿನಲ್ಲಿ ಸ್ಥಿರವಾಗಿ ಉಳಿ-ಯುವುದು.

ಹಲವು ಅನ್ಯಾಯಗಳನ್ನು ಮನುಷ್ಯರು ಮರೆಯಬಲ್ಲರು; ಆದರೆ ಅವಮಾನವನ್ನು ಮರೆಯುವುದು ಇಲ್ಲವೆ ಕ್ಷಮಿಸುವುದು ಅಪರೂಪ.

ಮನಸ್ಸಿನಲ್ಲಿ ಉಕ್ಕುತ್ತಿರುವ ಕ್ರೋಧವನ್ನು ತಡೆದುಕೊಳ್ಳುವ ಶಕ್ತಿಯಿರುವವನಲ್ಲಿ ಇತರ ಎಲ್ಲಾ ಗುಣಗಳು ತಾವಾಗಿಯೇ ಸೇರಿ ಕೊಳ್ಳುವುವು.

ಅಜಾಗ್ರತೆಯ ಮಾತು ಮತ್ತು ಅನಾವಶ್ಯಕ ಕ್ರೋಧ ಇವು ಗಳಿಂದ ದೂರವಿರಲು ಸಂಸಾರಿಯು ಸಮರ್ಥನಾದನೆಂದರೆ ಇತರ ವಿಷಯಗಳನ್ನು ಜಯಿಸುವುದು ಅವನಿಗೆ ಸುಲಭಸಾಧ್ಯವಾಗಿದೆ.

# ತ್ಯಾಗ

ಜಗತ್ತಿನ ಒಂದೊಂದೇ ವಿಷಯಗಳಿಂದ ನೀವು ದೂರವಾಗು ತ್ತಿರುವಂತೆ ಆ ಸಂಬಂಧವಾದ ದುಃಖದಿಂದಲೂ ನೀವು ಮುಕ್ತರಾಗು ವಿರಿ.

ಆಸಕ್ತಿ ಹಾಗೂ ಸಂಬಂಧವು ದುಃಖದ ಕಾರಣಗಳಲ್ಲೊಂದಾ ಗಿದೆ. ಆದುದರಿಂದ ಪ್ರತಿಯೊಂದು ತ್ಯಾಗವೂ ಸುಖವನ್ನು ತರುತ್ತದೆ.

ಒಮ್ಮೆಲೇ ಎಲ್ಲವನ್ನೂ ತ್ಯಜಿಸಬೇಕಾದುದಿಲ್ಲ. ಒಂದೊಂದ ನ್ನಾಗಿ ತ್ಯಜಿಸುವುದರಿಂದ ಪ್ರಯೋಜನವೇನೂ ಕಡಿಮೆಯಾಗುವು ದಿಲ್ಲ. ಎಲ್ಲವನ್ನೂ ತ್ಯಜಿಸುವವರೆಗೆ ತ್ಯಾಗವು ಕಾಯಬೇಕಾಗಿಲ್ಲ. ಒಂದೊಂದೇ ವಿಷಯಗಳನ್ನು ತ್ಯಜಿಸುತ್ತಿರುವಂತೆ ಅಷ್ಟರಮಟ್ಟಿಗೆ ದುಃಖವು ಕಡಿಮೆಯಾಗುವುದು. ವಸ್ತುಗಳನ್ನು ಕಳಕೊಳ್ಳುವುದು ನಷ್ಟವಲ್ಲ; ದುಃಖದ ಬಿಡುಗಡೆಯು ಅದನ್ನು ಹೊಂದಿಕೊಂಡಿರುತ್ತದೆ.

ಒಂದಿಷ್ಟು ವಿಷಯವನ್ನು ಒಂದಿಷ್ಟು ಕಾಲದ ಮಟ್ಟಿಗೆ ತ್ಯಾಗ ಮಾಡಿದುದಾದರೆ ಆಮೇಲೆ ಅದನ್ನು ಸಂಪೂರ್ಣ ತ್ಯಾಗಮಾಡಲು ಸುಲಭವಾಗುವುದು. ಅದನ್ನು ಹೊಂದುವುದೆಂದರೆ ತಿರುಗಿ ಮಾಯೆಯ ಬಲೆಗೆ ನಮ್ಮನ್ನು ಸಿಕ್ಕಿಸಿಕೊಂಡಂತೆ. ಅತಏವ ಅದೊಂದು ತಡೆ ಯೆಂದೇ ಹೇಳಬೇಕಾಗಿದೆ.

ಬಾಹ್ಯದೃಷ್ಟಿಗೆ ಬಿಟ್ಟಂತೆ ತೋರಿ ಅಂತರಂಗದಲ್ಲಿ (ಮನಸ್ಸಿನಲ್ಲಿ) ಅದರ ಅಪೇಕ್ಷೆಯನ್ನಿಟ್ಟುಕೊಂಡಿರುವುದು ನಿಜವಾದ ತ್ಯಾಗವಲ್ಲ. ಆದುದರಿಂದ ಒಂದು ವಿಷಯವನ್ನು ಮನಃಪೂರ್ವಕ ಬಿಟ್ಟೇ ನಾವು ತ್ಯಾಗವನ್ನು ಅಭ್ಯಸಿಸಬೇಕು. ಹಾಗೆ ಮಾಡದಿದ್ದರೆ ಅದನ್ನು ತ್ಯಜಿ ಸುವ ಸಂದರ್ಭವನ್ನೇ ನಾವು ಕಳಕೊಳ್ಳುವೆವು.

ಜನ್ಮ ಪುನರ್ಜನ್ಮಗಳ ಭ್ರಮಣೆಯಿಂದ ಮುಕ್ತರಾಗಬೇಕಾದರೆ ಆಸಕ್ತಿ ಮತ್ತು ಸಂಪರ್ಕಗಳನ್ನು ಚೇತನಯುಕ್ತವಾಗಿ ಇಟ್ಟುಕೊಂಡು ಪ್ರಯೋಜನವಿಲ್ಲ. ದೇಹವೂ ಒಂದು ಭಾರ (ಹೊರೆ) ವೇ ; ಅದನ್ನೂ ಯಥಾಶೀಘ್ರ ತ್ಯಜಿಸುವುದು ಉಚಿತವಾಗಿದೆ.

ಪ್ರಾಪಂಚಿಕ-ವಿಷಯ ಸುಖಗಳಲ್ಲಿ ಲೋಲುಪ್ತನಾದವನನ್ನು ಎಲ್ಲಾ ರೀತಿಯ ವೇದನೆಗಳು ಬಿಗಿದಪ್ಪಿಕೊಳ್ಳುವುವು.

ಎಲ್ಲವನ್ನೂ ಸಂಪೂರ್ಣವಾಗಿ ತ್ಯಜಿಸುವವರು ಅರ್ಥಾತ್ ಆ ವಿಷಯಗಳ ಯೋಚನೆಯನ್ನೂ ಮನಸ್ಸಿನಿಂದ ದೂರಗೊಳಿಸುವವರು ನಿಜವಾಗಿಯೂ ಮುಕ್ತಜೀವಿಗಳೆನ್ನಬಹುದು. ಇತರರಾದರೋ ಮಾಯೆಯ ಬಲೆಯಿಂದ ಇನ್ನೂ ಬಿಡುಗಡೆಯನ್ನು ಹೊಂದುವುದಿಲ್ಲ ವೆಂದು ತಿಳಿಯಬೇಕಾಗುವುದು.

ಸಂಪರ್ಕ ಮತ್ತು ಆಸಕ್ತಿಗಳನ್ನು ತ್ಯಜಿಸುವುದರಿಂದಲೇ ಮುಕ್ತಿಯು ಲಭಿಸುತ್ತದೆ. ಇಲ್ಲವಾದರೆ ಈ ನಶ್ವರ ಪ್ರಪಂಚದಲ್ಲೇ ಪುನಃ ಪುನಃ ಹೊರಳಾಡಿಕೊಂಡಿರಬೇಕಾಗುತ್ತದೆ.

ಕಠಿನ ದೇಹದಂಡನೆ ಅಥವಾ ಸಾಧನೆಯನ್ನು ಮಾಡಿದರೆ ಸಾಲದು; ಆಸಕ್ತಿ ಮತ್ತು ಸಂಪರ್ಕಗಳನ್ನು ಬಿಡುವುದರ ಕಡೆಗೆ ವಿಶೇಷ ಧ್ಯಾನವನ್ನೀಯಬೇಕು.

ದೇವರಲ್ಲಿ ಆಸಕ್ತಿಯೊಂದೇ ಪ್ರಧಾನವಾಗಿರಲಿ. ಅದು ಇತರ ಆಸಕ್ತಿಗಳಿಂದ ಬಿಡುಗಡೆ ಹೊಂದಲು ನಿಮಗೆ ಸಹಕಾರಿಯಾಗುವುದು.

## ಇಂದ್ರಿಯಗಳ ಸದುಪಯೋಗ

ಇಂದ್ರಿಯಗಳ ಸದುಪಯೋಗ-ದುರುಪಯೋಗಗಳು ಆತ್ಮ-ಧರ್ಮದಲ್ಲಿ ಸಾಧಕ-ಬಾಧಕಗಳಾಗಿರುತ್ತವೆ. ಮನುಷ್ಯನು ತನ್ನಲ್ಲಿರುವ

ಎಲ್ಲ ವಸ್ತುಗಳನ್ನು ರಕ್ಷಿಸುವುದರಲ್ಲಿ ಬಹಳ ಜಾಗ್ರತೆವಹಿಸುತ್ತಾನೆ. ಬಲು ಸಣ್ಣದಾದೊಂದು ವಸ್ತುವನ್ನೂ ದುರುಪಯೋಗಗೊಳಿಸುವುದಿಲ್ಲ. ಶ್ರೋತ್ರೇಂದ್ರಿಯ ವಿಷಯ ಸಹಕಾರಿಯಾದ ಟೆಲಿಫೋನ್, ಚಕ್ಷುರಿಂದ್ರಿಯ ವಿಷಯ ಸಹಕಾರಿಗಳಾದ ದುರ್ಬಿನ್, ವಿದ್ಯುದ್ದೀಪ, ದೀಪ ಹಾಗೂ ದೃಷ್ಟಿಚಕ್ರ, ಜಿಹ್ವೇಂದ್ರಿಯ ಸಹಕಾರಿಯಾದ ರೇಡಿಯೋ, ಗ್ರಾಮೋಫೋನ್, ಶರೀರಕ್ಕೆ ಸಹಕಾರಿಯಾದ ಮೋಟಾರ್, ಸೈಕಲ್, ಕುದುರೆಗಾಡಿ ಮೊದಲಾದ ವಸ್ತುಗಳನ್ನು ಅವಶ್ಯಬಿದ್ದಾಗ ಮಾತ್ರ ಬೇಕಾದಷ್ಟೇ ಉಪಯೋಗಿಸುತ್ತಾನೆ. ಎಂದೂ ಅವುಗಳನ್ನು ದುರುಪಯೋಗಗೊಳಿಸುವುದಿಲ್ಲ. ಹೀಗೆ ಆತನು ಸಾಮಾನ್ಯ ಹಾಗೂ ಸುಲಭ ಪದಾರ್ಥಗಳನ್ನೂ ಅತಿಜಾಗ್ರತೆಯಿಂದ ರಕ್ಷಿಸುವವನಾಗಿದ್ದರೂ ಬಹುಮೂಲ್ಯ ಹಾಗೂ ದುರ್ಲಭವಾದ ತನ್ನ ಇಂದ್ರಿಯಗಳನ್ನು ಧಾರಾಳವಾಗಿ ದುರುಪಯೋಗಗೊಳಿಸುತ್ತಾನೆ. ಇಂತಹ ದುರುಪಯೋಗವು ಆಸ್ರವ (ಅಥವಾ ಆಸ್ರವಕಾರಣ) ವೆಂದು ಆಗಮದಲ್ಲಿ ಹೇಳಲ್ಪಟ್ಟಿದೆ. ಈ ಆಸ್ರವದ ಕಾರಣದಿಂದಲೇ ಜೀವನು ಸಂಸಾರಸಾಗರದಲ್ಲಿ ಅನಾದಿಕಾಲದಿಂದ ಭ್ರಮಿಸುತ್ತಿರುವನು.

ಇತರರ ನಿಂದೆ, ಕೆಟ್ಟಮಾತು, ಆತ್ಮಪ್ರಶಂಸೆ, ಅಶ್ಲೀಲವಚನ, ರಾಜಕಥೆ, ಚೋರಕಥೆ, ರಾಷ್ಟ್ರಕಥೆ ಬೋಜನಕಥೆ ಮೊದಲಾದುವುಗಳನ್ನು ಕೇಳಲು ಮನುಷ್ಯನ ಕರ್ಣೇಂದ್ರಿಯವು ಟೆಲಿಫೋನಿನಂತೆ ಪ್ರಸನ್ನತೆಯಿಂದ ಸದಾ ಸಿದ್ಧವಾಗಿರುತ್ತದೆ. ಆದರೆ ಅನಂತಜ್ಞಾನಿಯಾದ ಭಗವಂತನ ಕಲ್ಯಾಣಮಯವಾದ ಹಾಗೂ ಸರ್ವಹಿತಕರವಾದ ವಾಣಿಯನ್ನೂ, ಅದನ್ನು ವಿವರಿಸುವ ಧರ್ಮಕಥೆಯನ್ನೂ ಕೇಳಲು ಮಾತ್ರ ಆತನ ಕರ್ಣೇಂದ್ರಿಯವು ಸಿದ್ಧವಾಗಿರುವುದಿಲ್ಲ. ಇಂತಹ ಮನುಷ್ಯನಿಗೆ ಕರ್ಣೇಂದ್ರಿಯದ ಶಕ್ತಿಯಿರುವುದಕ್ಕಿಂತ ಆತನು ಬಧಿರ

ನಾಗಿರುವುದು ಮೇಲು. ಏಕೆಂದರೆ ಬಧಿರ (ಕಿವುಡ) ನು ಒಳ್ಳೆಯ ಮಾತುಗಳಂತೆ ಕೆಟ್ಟಮಾತುಗಳನ್ನೂ ಕೇಳಲಸಮರ್ಥನಾಗಿರುತ್ತಾನೆ.

ವಾಚಕರೆ! ಇದರಂತೆಯೇ ಎಲ್ಲ ಇಂದ್ರಿಯಗಳ ವಿಷಯಗಳನ್ನೂ ತಿಳಿಯಿರಿ. ಧರ್ಮರಹಿತವಾದ ಜೀವನ ಹಾಗೂ ಪ್ರವೃತ್ತಿಯು ಅತಿ ಭಯಂಕರವಾದುದು. ಪಾಪಕರ್ಮಾಸಕ್ತನಾದ ಮನುಷ್ಯನು ಎಷ್ಟು ದೀರ್ಘಕಾಲ ಬದುಕಿದ್ದರೂ ಏನು ಫಲ? ಅಂಥವನ ಆಯುಷ್ಯವು ಕಡಿಮೆಯಾದಷ್ಟು ಹಿತವು. ಧರ್ಮಾಸಕ್ತರಾದ ಜೀವರ ದೀರ್ಘಾಯುಷ್ಯ, ಆರೋಗ್ಯ, ಪಂಚೇಂದ್ರಿಯಗಳ ಪರಿಪೂರ್ಣತೆ, ಜಾಗೃತಾವಸ್ಥೆ ಹಾಗೂ ಪುರುಷಾರ್ಥ ಮೊದಲಾದುದು ಪ್ರಶಂಸನೀಯವಾಗಿರುತ್ತದೆ. ಪರಂತು ಧರ್ಮಬಾಹಿರರ ಈ ಆಯುಷ್ಯಾದಿ ಸಾಧನಗಳು ಅವರ ಹಿತಕ್ಕೆ ಅತ್ಯಂತ ಘಾತಕಗಳಾಗಿರುತ್ತವೆ.

ಭವ್ಯ ಪಾಠಕರೆ! ಈ ಪುಸ್ತಕವು ಕೇವಲ ಮನೋರಂಜನೆಯನ್ನುಂಟುಮಾಡುವಂತಹ ಕಥೆ-ಕಾದಂಬರಿಯದೇನೂ ಅಲ್ಲ. ಇದರಲ್ಲಿಯ ಪ್ರತಿಯೊಂದು ವಿಷಯವೂ ಆತ್ಮಸುಧಾರಣೆಯ ಧ್ಯೇಯದಿಂದ ಬರೆಯಲ್ಪಟ್ಟಿದೆ. ಅತಏವ ಇದರಲ್ಲಿರುವ ಪ್ರತಿಯೊಂದು ಮಾತನ್ನೂ ಶ್ರದ್ಧಾಪೂರ್ವಕ ಓದಿರಿ, ವಿಚಾರಮಾಡಿರಿ ಹಾಗೂ ಮನನಮಾಡಿರಿ. ಆಮೇಲೆ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಜೀವನದಲ್ಲಿ ಉಪಯೋಗಿಸಿರಿ.

ಅನ್ನದ ತುತ್ತನ್ನು ಬಾಯೊಳಗಿಟ್ಟು ಚೆನ್ನಾಗಿ ಜಗಿದು ನುಂಗಿ ಅದು ವ್ಯವಸ್ಥಿತ ರೀತಿಯಲ್ಲಿ ಜಠರಾಗ್ನಿಯಲ್ಲಿ ಪ್ರವೇಶಿಸುವುದರಿಂದ ಶಕ್ತಿರೂಪವಾಗಿ ಪರಿಣಮಿಸಿ ಅಂಗೋಪಾಂಗಗಳಿಗೆ ಬಲವನ್ನೀಯುವಂತೆ ಧರ್ಮಗ್ರಂಥವನ್ನು ಓದಿ ಚೆನ್ನಾಗಿ ವಿಚಾರಿಸಿ ಮನನಮಾಡಿ

ಹೃದಯದಲ್ಲಿ ಧರಿಸಿಕೊಳ್ಳುವುದರಿಂದ ಮಾತ್ರ ಅದರ ನಿಜವಾದ ಪ್ರಯೋಜನವು ಲಭಿಸುವುದು.

ಆದರೆ ಇಂದಿನ ಕಾಲದಲ್ಲಿ ಮನುಷ್ಯನು ವರ್ಷದ ಮುನ್ನೂರ ಅರವತ್ತು ದಿನಗಳಲ್ಲಿ ಧರ್ಮೋಪದೇಶವನ್ನು ಕೇಳಿದರೂ ಆತನ ಹೃದಯದಲ್ಲಿ ಧಾರ್ಮಿಕತೆಯುಂಟಾಗುವುದು ಕಠಿಣವಾಗಿದೆ.

ಧನಿಕನಾದ ತಂದೆಯು ತನ್ನ ಮಗುವಿನ ಕೈಯಲ್ಲಿ ಪ್ರೀತಿಯಿಂದ ರತ್ನವನ್ನು ಕೊಟ್ಟು ಆ ಮಗುವು ಅದರ ಬೆಲೆಯನ್ನರಿಯದೆ ಅದನ್ನು ಬಿಸಾಡಿ ಕಳಕೊಂಡರೆ ಅದು ಮಗುವಿನ ಅಪರಾಧಕ್ಕಿಂತಲೂ ಹೆಚ್ಚು ತಂದೆಯ ಅಪರಾಧವಾಗಿರುವಂತೆ ಗುರುವಿನ ಉಪದೇಶವನ್ನು ಕೇಳಿ ಅದರ ಮಹತ್ತ್ವವನ್ನರಿಯದೆ ಅದನ್ನು ದುರುಪಯೋಗಗೊಳಿಸುವವನು ಅಪರಾಧಿಯಾಗುವಂತೆ ಅಂತಹ ಅಯೋಗ್ಯನಿಗೆ ಉಪದೇಶವಿತ್ತ ಗುರುವೂ ಅಪರಾಧಕ್ಕೆ ಪಾತ್ರನಾಗುತ್ತಾನೆಂಬುದು ಇಂದು ಅನುಭವಕ್ಕೆ ಬರುತ್ತಿದೆ.

ಚಕ್ಷುರಿಂದ್ರಿಯವನ್ನು ಮನುಷ್ಯನು ವಿಷಯ-ವಿಕಾರವರ್ಧಕಗಳಾದ ನಾಟಕ, ಸಿನಿಮಾ ಚಿತ್ರ, ಸ್ತ್ರೀಯರ ಅಂಗೋಪಾಂಗ ಮೊದಲಾದುವುಗಳನ್ನು ನೋಡುವುದರಲ್ಲಿಯೇ ಉಪಯೋಗಿಸುತ್ತಾನಲ್ಲದೆ, ದೇವದರ್ಶನಾದಿ ಯೋಗ್ಯಕಾರ್ಯಗಳಲ್ಲುಪಯೋಗಿಸುವುದಿಲ್ಲ. ಹೀಗೆ ಈತನು ತನ್ನ ಚಕ್ಷುರಿಂದ್ರಿಯದ ಮೂಲಕ ಪಾಪವನ್ನೇ ಸಂಪಾದಿಸುತ್ತಾನೆ.

ಭಾಷಾಸಂಯಮವು ಎಷ್ಟು ಆವಶ್ಯಕವೆಂದು ಆಗಮವು ಹೇಳುತ್ತದೋ ಅಷ್ಟೇ ಅಸಂಯಮವಿಂದು ಕಂಡುಬರುತ್ತಿದೆ. ಭಾಷಾಸಂಯಮವಿಲ್ಲದಿರುವುದರಿಂದಲೇ ಸಮಾಜದಲ್ಲಿಂದು ದ್ವೇಷ, ನಿಂದೆ,

ಈರ್ಷೆ ಮತ್ತು ಕಲಹ ಇವುಗಳ ಸಾಮ್ರಾಜ್ಯವು ಸರ್ವತ್ರ ಕಾಣುತ್ತಿದೆ. ಭಾಷೆಯಲ್ಲಿ (ಮಾತಿನಲ್ಲಿ) ಸಂಯಮವನ್ನಿಟ್ಟುಕೊಂಡುದಾದರೆ ಸರ್ವ ಕಲಹಗಳೂ ದೂರವಾಗುವವು. ಹಿಂದೆ ಮಹಾಪುರುಷರು ಸತ್ಯ-ವಚನಕ್ಕೆ ವಿಶಿಷ್ಟ ಮಹತ್ತ್ವವನ್ನಿಟ್ಟಿದ್ದರು. ಆದರೆ ಅವರ ಸಂತತಿಯವರಿಂದು ಸತ್ಯವಚನವನ್ನುಪೇಕ್ಷಿಸಿ ಅದರ ಮಹತ್ತ್ವವನ್ನು ಕೆಡಿಸುತ್ತಿರುವರು. ಹಿಂದೆ ಆರ್ಯಜನರು ತಮ್ಮ ಸಮಾಜದಲ್ಲಿ ಮಾಂಸಭಕ್ಷಕರನ್ನು ಬಹಿಷ್ಕರಿಸುತ್ತಿದ್ದಂತೆ ಅಸತ್ಯಭಾಷಿಗಳನ್ನೂ ಬಹಿಷ್ಕರಿಸುತ್ತಿದ್ದರು. ಅಸತ್ಯಭಾಷಣವು ಮಹಾಪಾಪವಾಗಿದೆ. ಶಾಸ್ತ್ರಕಾರರು ಇತರ ಪಾಪಗಳು ನದಿಗಳಂತೆಯೂ ಮೃಷಾವಾದವು ಸಮುದ್ರದಂತೆಯೂ ಇರುತ್ತದೆಂದು ಹೇಳಿರುವರು. ಅಂದರೆ ಸಮುದ್ರದಲ್ಲಿ ಎಲ್ಲ ನದಿಗಳು ಬಂದು ಸೇರುವಂತೆ ಮೃಷಾವಾದ (ಅಸತ್ಯಭಾಷಣ) ದಲ್ಲಿ ಎಲ್ಲ ಪಾಪ (ದೋಷ) ಗಳೂ ಸೇರುತ್ತವೆಂದಭಿಪ್ರಾಯವು.

ಆದಕಾರಣ ಯಂತ್ರ ಹಾಗೂ ಇತರ ಪದಾರ್ಥಗಳನ್ನು ವಿಚಾರಪೂರ್ವಕ ಸದುಪಯೋಗಗೊಳಿಸುವಂತೆ ಪಂಚ-ಇಂದ್ರಿಯಗಳನ್ನೂ ಸದುಪಯೋಗಗೊಳಿಸಬೇಕು. ಅವುಗಳ ದುರುಪಯೋಗವಾಗದಂತೆ ಲಕ್ಷ್ಯವಿಡಬೇಕು. ಇಂದ್ರಿಯಗಳ ಸದುಪಯೋಗವೇ ಸಂವರೆಯೂ ದುರುಪಯೋಗವೇ ಆಸ್ರವವೂ ಆಗಿರುತ್ತದೆ. ಸಂವರೆಯು ಹೊಸ ಕರ್ಮಗಳನ್ನು ಬಾರದಂತೆ ತಡೆಯುತ್ತದೆ. ತಪವೇ ಮೊದಲಾದ ನಿರ್ಜರೆಯಿಂದ ಪೂರ್ವಸಂಚಿತ ಕರ್ಮಗಳು ಕ್ಷಯಿಸುತ್ತವೆ. ಹೀಗೆ ಸಂವರೆ ಮತ್ತು ನಿರ್ಜರೆಗಳು ಮೋಕ್ಷಪ್ರಾಪ್ತಿಯ ಸಾಧನಗಳಾಗಿರುತ್ತವೆ.

ನಿಶ್ಚಯವಾದ ಸುಖದ ಮಾರ್ಗವನ್ನುಪದೇಶಿಸುವ ಪ್ರಭುವಚನಗಳನ್ನು ಅಲಕ್ಷಿಸಬಾರದು. ಹಾಗೆ ಅಲಕ್ಷಿಸುವುದು ಆತ್ಮನ ಪತಿತಾ

ವಸ್ಥೆಯ ದ್ಯೋತಕವಾಗಿದೆ. ರೋಗ ಮುಕ್ತಿಗಾಗಿ ವೈದ್ಯರ ಸಲಹೆಯನ್ನು ಪಾಲಿಸುವುದಕ್ಕಿಂತಲೂ ಭವರೋಗದ ಮುಕ್ತಿಗಾಗಿ ಅಕಾರಣ ವೈದ್ಯರಾದ ಜ್ಞಾನಿಗಳ ವಚನವನ್ನು ಅಧಿಕವಾಗಿ ಪಾಲಿಸಬೇಕು. ಹಾಗೆ ಮಾಡುವ ವ್ಯಕ್ತಿಯೇ ನಿಜವಾದ ಆಸ್ತಿಕನು.

## ಸತ್ಯಭಾಷಣ

ಹಿತಮಿತ ಹಾಗೂ ಮಧುರ(ಪ್ರಿಯ)ವಚನಗಳನ್ನಾಡುವಿಕೆಯು 'ಸತ್ಯಭಾಷಣ' ವೆನಿಸುತ್ತದೆ. ಇದಕ್ಕೆ ವಿರುದ್ಧವಾದುದು ಅಸತ್ಯ ವಚನವು. ಸತ್ಯವಚನದಿಂದ ಪರಸ್ಪರ ಪ್ರೇಮವೂ ಐಕ್ಯವೂ ಉಂಟಾಗುತ್ತದೆ. ಸತ್ಯವಚನಗಳನ್ನಾಡುವವನು ಜಗತ್ತಿಗೆ ಬಂಧುವಿನಂತಿದ್ದು ಸರ್ವರ ವಿಶ್ವಾಸ ಹಾಗೂ ಪ್ರೇಮಕ್ಕೆ ಪಾತ್ರನಾಗುತ್ತಾನೆ. ಪಾಶ್ಚಾತ್ಯ ದೇಶಗಳಲ್ಲಿ ಸತ್ಯಕ್ಕೆ ವಿಶೇಷ ಮಹತ್ತ್ವವನ್ನು ಕೊಡುತ್ತಿದ್ದಾರೆ. ಅಂಗಡಿಗಳಲ್ಲಿ ಪ್ರತಿಯೊಂದು ವಸ್ತುವಿನ ಕ್ರಯವನ್ನು ಬರೆದು, 'One Rate' ಒಂದೇ ಬೆಲೆ ಎಂಬ ಬೋರ್ಡನ್ನು ತಗಲ ಹಾಕುತ್ತಾರೆ. ಒಮ್ಮೆ ಯೂರೋಪಿನ ವ್ಯಾಪಾರದ ಕ್ರಮವನ್ನು ತಿಳಿಯದವನೊಬ್ಬನು ಅಲ್ಲಿಯ ಓರ್ವ ಪುಸ್ತಕ ವ್ಯಾಪಾರಿಯೊಡನೆ ಒಂದು ಪುಸ್ತಕದ ಬೆಲೆಯೆಷ್ಟೆಂದು ಕೇಳಲು ಆತನು ಒಂದು ರೂಪಾಯಿ ಎಂದನು. ಗ್ರಾಹಕನು ಇನ್ನೊಮ್ಮೆ ಅದನ್ನೇ ಕೇಳಲು ಒಂದೂವರೆ ರೂಪಾಯಿ ಎಂದನು. ಹೀಗೆ ಪುನಃ ಪುನಃ ಕೇಳಿದಂತೆ ಪುಸ್ತಕದ ಬೆಲೆಯನ್ನು ಹೆಚ್ಚಿಸುತ್ತ ಹೋದನು. ಇದನ್ನು ನೋಡಿ ಗ್ರಾಹಕನು ಚಕಿತನಾಗಲು ಪುಸ್ತಕವ್ಯಾಪಾರಿಯು ಹೀಗೆ ಉತ್ತರ ಸಮಾಧಾನವಿತ್ತನು, "ಪುಸ್ತಕದ ಬೆಲೆಯಂತೂ ಒಂದೇ ರೂಪಾಯಿ, ಆದರೆ ನೀವು ಹಲವು ಬಾರಿ ಕೇಳಿದುದರಿಂದ ನನ್ನ ಉತ್ತರ ಕೊಡುವ ಚಾರ್ಜು ಹೆಚ್ಚುತ್ತ ಹೋಯಿತು." ವಾಚಕರೇ ! ಯೂರೋಪಿನ ವ್ಯಾಪಾರಿಗಳ ಸತ್ಯ-

ನಿಷ್ಠೆ ಹಾಗೂ ವಚನಪ್ರಿಯತೆಯನ್ನು ನೋಡಿರಿ ; ಆದರೆ ಭಾರತೀಯ ಮನುಷ್ಯರಲ್ಲಿ ಇಂತಹ ಸತ್ಯಪ್ರಿಯತೆಯು ಎಷ್ಟರಮಟ್ಟಿಗೆ ಇದೆಯೆಂಬು ದನ್ನು ವಿಚಾರಿಸಿರಿ. ಇಂತಹ ಸತ್ಯಪ್ರಿಯತೆಯಿಂದಲೇ ಪಾಶ್ಚಾತ್ಯ ದೇಶಗಳಿಂದು ಸಭ್ಯತೆಯ ಶಿಖರವನ್ನೇರಿವೆ. ಪರಂತು ಭಾರತವರ್ಷ ವೆಂಬುದು ಪ್ರಾಚೀನ ಋಷಿಗಳ, ಮುನಿಗಳ ಹಾಗೂ ತ್ಯಾಗಿಗಳ ದೇಶವು. ಇಂತಹ ಪವಿತ್ರ ಭೂಮಿಯಲ್ಲಿಯೂ ಸತ್ಯದ ಅಭಾವದಿಂದ ಜನತೆಯು ಪತನದ ಹಾದಿಯನ್ನು ತುಳಿಯುತ್ತಿದೆ. ಮಿಥ್ಯಾವಾದಿ ಗಳಾದ ವ್ಯಕ್ತಿಗಳಿಂದ ಜಾತಿಯ, ಸಮಾಜದ ಹಾಗೂ ದೇಶದ ಉನ್ನತಿಯು ಎಂದಿಗೂ ಆಗಲಾರದು. ಅತ್ಯಂತ ಪಾಪಿಯಾದ ಹಾಗೂ ನೀಚನಾದ ಮನುಷ್ಯನು ತನ್ನ ಸುಧಾರಣೆಯನ್ನು ಮಾಡಿಕೊಳ್ಳ-ಬಲ್ಲನು. ಆದರೆ ಮಿಥ್ಯಾವಾದಿಯು ಎಂದೂ ತನ್ನ ಜೀವನವನ್ನು ಸುಧಾರಿಸಿಕೊಳ್ಳಲಾರನು.

## ಸನ್ಮಾರ್ಗ

ಸನ್ಮಾರ್ಗದಲ್ಲಿ ನಡೆಯುವಾತನು ಅರ್ಜಿಸಿದುದೆಲ್ಲವೂ ಆತನ ಮಕ್ಕಳಿಗೆ ಸ್ವಲ್ಪವೂ ಕುಂದಿಲ್ಲದೆ ದೊರೆಯುವುದು ಮತ್ತು ಅದು ಅವರನ್ನು ಅನಿಷ್ಟಗಳಿಂದ ರಕ್ಷಿಸುವುದು.

ಸತ್ಪಥವನ್ನನುಸರಿಸಿ ಗಳಿಸಿದುದೆಲ್ಲವೂ ಸ್ಥಿರವಾಗಿ ನಿಲ್ಲುವುದು. ಇದಕ್ಕೆ ವಿಪರೀತವಾಗಿ ಸಂಪಾದಿಸಿದುದು ಚಂಚಲವಾಗಿರುವುದು ಹಾಗೂ ಅದು ಕಳೆದುಹೋಗಬಲ್ಲುದು. ತಮ್ಮ ಮುಂದಿನ ಪೀಳಿಗೆಗೆ ಸುಖ ಸಂಪತ್ತು ಕ್ಷೇಮಾಭ್ಯುದಯಾದಿಗಳು ಲಭಿಸಬೇಕೆಂಬುದೇ ಪ್ರತಿ ಯೊಬ್ಬನ ಆಶಯವಾಗಿರುತ್ತದೆ. ಸರಿಯಾದ ನಡತೆಯು ಇವುಗಳನ್ನು ಒದಗಿಸುತ್ತದೆಂದು 'ತಿರುವಲ್ಲೂವರ್' ಹೇಳುತ್ತಾರೆ. ನ್ಯಾಯರೀತಿ

ಯಲ್ಲಿ ಗಳಿಸಿದ ಸಂಪತ್ತಿಗೂ ಅನ್ಯಾಯ ರೀತಿಯಿಂದ ಗಳಿಸಿದ ಸಂಪತ್ತಿಗೂ ಬಹಳ ಅಂತವಿರುತ್ತದೆ. ಮೊದಲನೆಯದು ಸ್ಥಿರ ಮತ್ತು ಸುಭದ್ರ ಸ್ವರೂಪದ್ದಾದರೆ ಎರಡನೆಯದು ಅಸ್ಥಿರ ಹಾಗೂ ಅಭದ್ರ ಸ್ವರೂಪವುಳ್ಳದಾಗಿದೆ.

ಸನ್ಮಾರ್ಗವನ್ನು ಬಿಟ್ಟು ಅನ್ಯರೀತಿಯಿಂದ ಗಳಿಸಿದುದರಲ್ಲಿ ಏನೂ ಕೆಟ್ಟದಿಲ್ಲವೆಂಬುದಾಗಿ ತೋರಬಹುದು. ಆದರೆ ಈ ಕಡೆಗೆ ಆಕರ್ಷಿತರಾಗಬೇಡಿರಿ. ಅಂತಹ ಭಾವನೆಗೆ ನಿಮ್ಮ ಹೃದಯದಲ್ಲಿ ಅವಕಾಶವನ್ನೀಯಬೇಡಿರಿ. ಒಮ್ಮೆ ಬಂದರೂ ತತ್‌ಕ್ಷಣ ಅದನ್ನು ಹೃದಯದಿಂದ ತೊಲಗಿಸಿರಿ.

ಸತ್ಪಥದಲ್ಲಿ ನಡೆದವನ ಮತ್ತು ನಡೆಯದವನ ಲಕ್ಷಣವನ್ನು ಅವರು ಬಿಟ್ಟು ಹೋದ ಸಂತತಿಯನ್ನು ಕಂಡು ತಿಳಿಯಬಹುದಾಗಿದೆ.

ನಿಮ್ಮ ಜೀವನವೇ ನಿಮ್ಮ ಮಕ್ಕಳಿಗೆ ಆದರ್ಶವೂ ಅನುಸರಣೀಯವೂ ಆಗಿದೆ. ಆದುದರಿಂದ ಮಕ್ಕಳ ಉಚ್ಚ ಭವಿಷ್ಯವನ್ನಿಚ್ಛಿಸುವಿರಾದರೆ ನೀವು ಸತ್ಪಥದಲ್ಲಿ ನಡೆಯಲು ಮರೆಯಬೇಡಿರಿ.

ಸತ್ಪಥವನ್ನು ಬಿಟ್ಟು ನಡೆಯುವ ವಿಚಾರವು ನಿಮ್ಮ ಹೃದಯದಲ್ಲಿ ಮೂಡಿಬರುತ್ತಿದ್ದರೆ ದುರದೃಷ್ಟವು ನಿಮ್ಮನ್ನು ಕಾಯುತ್ತಿದೆ ಎಂದು ತಿಳಿಯಿರಿ.

ಮನಸ್ಸಿನಲ್ಲಾಗುವ ಪರಿವರ್ತನೆಯ ವಿಚಾರವು ಇತರರು ಕಾಣುವ ಮೊದಲು ನಿಮಗೆ ತಿಳಿಯುವುದು. ಆದುದರಿಂದ ಅದೊಂದು ಕೆಡುಕಿನ ಸೂಚನೆಯೆಂದರಿತು ಅದರ ಕುರಿತು ಕೂಡಲೆ ಜಾಗರೂಕರಾಗಿರಿ.

ಸತ್ಪಥದಲ್ಲಿ ಪೂರ್ಣ ವಿಶ್ವಾಸವಿಟ್ಟು ನಡೆವಾಗ ಪ್ರಾಪಂಚಿಕ ಸುಖೋಪಭೋಗಗಳಿಗೆ ಲೋಪವುಂಟಾದುದಾದರೆ ಅಂತಹ ದಾರಿ-ದ್ರ್ಯವು ಜಗತ್ತಿನ ದೃಷ್ಟಿಯಲ್ಲಿ ಮನುಷ್ಯನ ಮೌಲ್ಯವನ್ನೇನೂ ಕಡಿಮೆ ಮಾಡಲಾರದು. ಅವನಿಗೆ ಏನೂ ಸಂಭವಿಸದ ರೀತಿಯಲ್ಲಿ ಸಮಾಜ ಅವನ ಸ್ಥಾನಮಾನಗಳು ಉಳಿಯುವುವು.

ವ್ಯಾಪಾರಿಗಳು ಸ್ವಹಿತದ ಕಡೆಗೆ ಗಮನಕೊಡುವಂತೆ ಪರರ ಹಿತದ ಕಡೆಗೂ ಗಮನವೀಯಬೇಕೆಂಬ ವಿಚಾರವನ್ನೆಂದೂ ಮರೆಯ ಬಾರದು.

## ಮೌನ

ಮೌನಧಾರಣೆಯ ಮೂಲಕ ತನ್ನ ಜೀವನವನ್ನು ಗುಪ್ತವನ್ನಾಗಿ ಮಾಡುವವನೇ ಸತ್ಯಸಾಧಕನಾಗಿರುವನು. ಅವನು ವಿಶ್ವಕ್ಕೆ ಮಹ-ದುಪಕಾರಿಯಾಗಿರುವನು. ಹೀಗೆ ಜೀವನವನ್ನು ಗುಪ್ತಪಡಿಸಿ ಮೌನ ವನ್ನು ಧರಿಸುವವನು ಸರ್ವಥಾ ಅಹಂಭಾವ ಹಾಗೂ ಮಹತ್ತ್ವಾ ಕಾಂಕ್ಷೆಯಿಂದ ರಹಿತನೂ ಸಂಪೂರ್ಣ ಶುದ್ಧವ್ಯಕ್ತಿತ್ವಶಾಲಿಯೂ ಆಗಿದ್ದು ವಿಶ್ವದ ಹಿತವನ್ನು ಸಾಧಿಸಬಲ್ಲನು.

ಆತ್ಮಿಕ ಯೋಗ್ಯತೆಯು ಶಬ್ದೋಚ್ಚಾರಣೆಯಿಲ್ಲದೆಯೇ ಸ್ವಯಂ ಪ್ರಕಟವಾಗುತ್ತದೆ. ಮಾತನಾಡುವುದಕ್ಕಿಂತ ಮೌನವು ವಿಶೇಷ ಪ್ರಭಾವವುಳ್ಳದ್ದು. ವಚನದ ಶಕ್ತಿಯು ಮರ್ಯಾದಿತವೂ, ಮೌನದ ಶಕ್ತಿಯು ಅಮರ್ಯಾದಿತವೂ ಆಗಿದೆ. ಮೌನಿಯು ಸ್ವತಂತ್ರನೂ, ಮಾತನಾಡುವವನು ಪರಾಧೀನನೂ ಆಗಿರುವನು. ಪ್ರತಿಯೊಂದು ಕಾರ್ಯವೂ ಮೌನದಿಂದ ವಿಶೇಷ ಪ್ರಕಾಶಿತವೂ ಪ್ರಭಾಪಿತವೂ ಆಗು ತ್ತದೆ. ನಮ್ರನಾದ ಮನುಷ್ಯನು ಮಹತ್ತರವಾದ ಕಾರ್ಯಗಳನ್ನು

ಮಾಡಿಯೂ ಮೌನದಿಂದಿರುತ್ತಾನೆ. ಆದರೆ ಅಭಿಮಾನಿಯಾದ ಮನುಷ್ಯ ತಾನು ಸಣ್ಣ ಕೆಲಸವನ್ನು ಮಾಡಿದರೂ ಅದನ್ನು ಘಂಟಾಘೋಷವಾಗಿ ಸಾರುತ್ತಾನೆ.

ಮೌನವು ಅಧ್ಯಾತ್ಮಪಥದ ಪಥಪ್ರದರ್ಶಕನಂತಿರುತ್ತದೆ. ಐದು ಇಂದ್ರಿಯಗಳು, ಮನಸ್ಸು, ನಾಲ್ಕು ಕಷಾಯಗಳು ಈ ಹತ್ತರ ಸಂಯಮದ ಪೂರ್ವಕ ಮೌನಧರ್ಮವನ್ನು ಪಾಲಿಸಿರಿ. ಮೌನವ್ರತವನ್ನು ಸ್ವೀಕರಿಸಿದ ಮನುಷ್ಯನು ಸಮಸ್ತ ಕ್ಲೇಶಗಳಿಂದ ಬಿಡಲ್ಪಟ್ಟವನಾಗಿ ಪರಮ ಶಾಂತಿಮಯವಾದ ಜೀವನವನ್ನು ನಡೆಸುವನು.

## ಇಚ್ಛೆ ಮತ್ತು ತಪಸ್ಸು

ಇಚ್ಛಾ ಮಾತ್ರದಿಂದ ಇಚ್ಛಿಸಿದ ಕಾರ್ಯದ ಸಿದ್ಧಿಯುಂಟಾಗದು. ಧನವನ್ನು ಬಯಸಿದ ಮಾತ್ರಕ್ಕೆ ಅದು ಲಭಿಸುವುದಿಲ್ಲ. ಹಾಗೆಯೇ ದುಃಖದ ನಾಶಕ್ಕಾಗಿ ಚಿಂತಿಸುವುದರಿಂದ ಅದು ದೂರವಾಗಲಾರದು. ವಿಕಲ್ಪಗಳನ್ನು ಮಾಡದಿರುವುದೇ ಅವುಗಳನ್ನು ದೂರಗೊಳಿಸುವ ಉಪಾಯವು. ಯಾವ ಯಾವ ಕಾರಣಗಳಿಂದ ಯಾವ ಯಾವ ರೋಗಗಳುಂಟಾಗುತ್ತವೋ ಆಯಾ ಅಂತರಂಗ ಹಾಗೂ ಬಾಹ್ಯಕಾರಣಗಳನ್ನು ತ್ಯಜಿಸುವುದೇ ಆ ರೋಗಗಳು ಬಾರದಂತೆ ಮಾಡುವ ಉಪಾಯವಾಗಿದೆ. ಅದರಂತೆಯೇ ಯಾವ ಪದಾರ್ಥಗಳಿಂದ ರಾಗಾದಿ ಭಾವಗಳುಂಟಾಗುವವೋ ಆ ಪದಾರ್ಥಗಳಲ್ಲಿ ಮಮತ್ವವನ್ನು ಬಿಡಬೇಕು. ಇಚ್ಛೆ (ಆಶೆ ತೃಷ್ಣೆ) ಯು ಮಮತ್ವಭಾವದ ಉತ್ಪತ್ತಿಗೆ ಕಾರಣವಾಗಿದೆ. ಅತಏವ ಇಚ್ಛೆಯು ಸಮಸ್ತ ದುಃಖಗಳಿಗೆ ಮೂಲವಾಗಿರುತ್ತದೆ. ಇಚ್ಛೆಯು ನಾಶವಾದೊಡನೆ ಸಮಸ್ತ ದುಃಖಗಳೂ ನಾಶವಾಗುತ್ತವೆ. ಇಚ್ಛಾಪೂರ್ವಕ ಪಂಚೇಂದ್ರಿಯ ಹಾಗೂ ಮನಸ್ಸಿ

ನಿಂದ ಪದಾರ್ಥಗಳ ಅನುಭವ ಅಥವಾ ಭೋಗೋಪಭೋಗಗಳನ್ನು ಮಾಡುವುದರಿಂದ ದುಃಖದ ಅನುಭವವುಂಟಾಗುತ್ತದೆ. ಇಚ್ಛೆಯ ಹೊರತು ಯಾವುದೊಂದು ಪದಾರ್ಥವನ್ನು ಅನುಭವಿಸಿದರೂ ದುಃಖವುಂಟಾಗುವುದಿಲ್ಲ, ಬದಲಾಗಿ ಶಾಂತಿ ಆನಂದಗಳುಂಟಾಗುತ್ತವೆ. ಆದುದರಿಂದ ಸಮಸ್ತ ಮಾನಸಿಕ ಹಾಗೂ ಶಾರೀರಿಕ ಆಧಿ-ವ್ಯಾಧಿಗಳಿಗೆ ಇಚ್ಛೆಯೇ ಕಾರಣವಾಗಿರುತ್ತದೆ. ಈ ಆಧಿ-ವ್ಯಾಧಿಗಳಿಂದ ಮುಕ್ತಿಯನ್ನು ಪಡೆಯಲು ಇಚ್ಛಾನಿರೋಧದ ಹೊರತು ಬೇರೆ ಉಪಾಯವೇ ಇರುವುದಿಲ್ಲ. ಹಿಂದೆ ಈ ಆಧಿ ವ್ಯಾಧಿ-ಉಪಾಧಿಗಳಿಂದ ಮುಕ್ತರಾಗಿರುವ ಮಹಾತ್ಮರೆಲ್ಲರೂ ನಮಗೂ ಇವುಗಳಿಂದ ಬಿಡುಗಡೆಯನ್ನು ಹೊಂದುವ ಉಪಾಯವನ್ನು ಈ ರೀತಿಯಾಗಿ ಉಪದೇಶಿಸಿರುವರು :— **"ಇಚ್ಛಾನಿರೋಧಸ್ತಪಃ", "ತಪಸಾ ನಿರ್ಜರಾ ಚ"** ಅರ್ಥಾತ್ "ಇಚ್ಛೆಗಳನ್ನು ನಿರೋಧಿಸುವುದೇ (ತಡೆಯುವುದೇ) ತಪವು. ತಪಸ್ಸಿನಿಂದ ಕರ್ಮಾಸ್ರವದ ತಡೆಯೂ ಪೂರ್ವಸಂಚಿತ ಕರ್ಮಗಳ ಕ್ಷಯವೂ ಉಂಟಾಗುವುದು."

ಅಗ್ನಿತಾಪನದಿಂದ ಸುವರ್ಣದಲ್ಲಿ ಶುದ್ಧಿಯುಂಟಾಗುವಂತೆ ಇಚ್ಛಾನಿರೋಧರೂಪವಾದ ತಪಸ್ಸಿನಿಂದ ಆತ್ಮನಲ್ಲಿ ಪರಿಶುದ್ಧತೆಯುಂಟಾಗುತ್ತದೆ ಇಚ್ಛಾಪೂರ್ವಕ ಪದಾರ್ಥಗಳನ್ನು ನೋಡುವುದರಿಂದ ತಿಳಿಯುವುದರಿಂದ ಹಾಗೂ ಉಪಭೋಗಿಸುವುದರಿಂದ ಮಾನಸಿಕ ಹಾಗೂ ಶಾರೀರಿಕ ರೋಗಗಳು ಬೆಳೆಯುತ್ತವೆ ಮತ್ತು ತತ್ಸಂಬಂಧವಾದ ವೇದನೆಯುಂಟಾಗುತ್ತದೆ. ಶರೀರದಲ್ಲಿ ಮಮತ್ವರೂಪವಾದ ಇಚ್ಛೆಯಿರುವುದರಿಂದಲೇ ಶರೀರದಲ್ಲಿ ಮುಳ್ಳು ಚುಚ್ಚುವುದರಿಂದ, ಜ್ವರದಿಂದ, ಛಳಿ-ಸೆಕೆಗಳಿಂದ ಹಾಗೂ ಹಸಿವು-ಬಾಯಾರಿಕೆಗಳಿಂದ ದುಃಖವುಂಟಾಗುತ್ತದೆ. ವಸ್ತುತಃ ಇವು ಆತ್ಮನ ಧರ್ಮಗಳಲ್ಲ. ಇವೆ

ಲ್ಲವೂ ಕೇವಲ ಮಮತ್ವಭಾವದಿಂದಲೇ ಆತ್ಮೀಯಗಳೆಂದು ತಿಳಿಯ ಲ್ಪಡುತ್ತವೆ. ಆತ್ಮನನ್ನು ಮುಳ್ಳು ಚುಚ್ಚಲಾರದು. ರೋಗಗಳು ಪೀಡಿಸಲಾರವು. ಮಳೆ ಗಾಳಿ, ಛಳಿ-ಸೆಕೆ ಮೊದಲಾಗಿ ಯಾವು ದೊಂದೂ ಆತನಿಗೆ ದುಃಖವನ್ನುಂಟುಮಾಡಲಾರವು. ಅವೆಲ್ಲವೂ ದೇಹಧರ್ಮಗಳು ಅರ್ಥಾತ್ ಶರೀರಕ್ಕೆ ಸಂಬಂಧಿಸಿದುವು.

ಈ ಪ್ರಕಾರವಾಗಿ ವಸ್ತುಸ್ವರೂಪವನ್ನು ವಿಚಾರಮಾಡಿ ಪೂರ್ವೋಕ್ತ ಸಮಸ್ತ ಬಾಹ್ಯಧರ್ಮ(ಆಧಿ-ವ್ಯಾಧಿ)ಗಳಿಂದ ರಹಿತನೂ ಚಿತ್ಸ್ವರೂಪನೂ ಅಖಂಡ ಹಾಗೂ ಅವಿನಾಶಿಯೂ ಪರಮಾನಂದ ಮಯನೂ ಆದ ನಿಜಾತ್ಮನ ಸ್ವರೂಪವನ್ನು ತಿಳಿದು ಆತ್ಮತತ್ತ್ವದ ಉಪಭೋಗದಲ್ಲೇ ನಿರತರಾಗಬೇಕು.

## ಯಥಾರ್ಥ-ಶ್ರೀಮಂತ

ಚಿನ್ನಬೆಳ್ಳಿಗಳ ಹಾಗೂ ಅಮೂಲ್ಯರತ್ನಗಳ ನಿಧಿ (ಖಜಾನೆ) ಯಿರುವವನೇ ಯಥಾರ್ಥಶ್ರೀಮಂತನಲ್ಲ. ಆ ನಿಧಿಯೂ ಯಥಾರ್ಥ ನಿಧಿಯಲ್ಲ. ಯಥಾರ್ಥನಿಧಿಯು ತನ್ನಾತ್ಮದಲ್ಲೇ ಇರುವಂತಹುದು. ಕಡಿಮೆಯಿಂದ ಕಡಿಮೆಯಾದ ಸಂಪತ್ತಿನಿಂದ ತೃಪ್ತಿ-ಸಂತೋಷ ಗಳನ್ನು ಹೊಂದುವವನೇ ಶ್ರೀಮಂತನು. ನಿರ್ಧನತೆಯಲ್ಲಿಯೂ ಹೃದಯ ವಿಶಾಲವಾಗಿರುವುದು ನಿಜವಾದ ಧನಿಕವೃತ್ತಿಯಾಗಿದೆ. ನಮ್ಮ ರಾಜಮುಕುಟವು ನಮ್ಮ ಅಂತಃಕರಣದಲ್ಲೇ ಇದೆ. ಆ ಮುಕುಟ (ಕಿರೀಟ) ಕ್ಕೆ ಮುತ್ತಿನ ಮಾಲೆಗಳಿಂದ ಶೃಂಗರಿಸುವ ಆವಶ್ಯಕತೆ ಯಿರುವುದಿಲ್ಲ. ಇಂತಹ ಕಿರೀಟವು ಪ್ರಾಯಶಃ ಯಾವನಾದರೊಬ್ಬ ಅರಸನಿಗೆ ಭಾಗ್ಯದಿಂದ ದೊರೆಯಬಲ್ಲುದು. ಸಂತೋಷ ಮತ್ತು ಚಾರಿತ್ರವೇ ಆ ಮುಕುಟವು. ಸದಾಚಾರವೇ ಸರ್ವಾಧಿಕ ಧನವು.

ಸದಾಚಾರ, ಪವಿತ್ರತೆ, ನಮ್ರತೆ ಹಾಗೂ ಪರೋಪಕಾರ ಇವು ಯಥಾರ್ಥ ದ್ರವ್ಯಗಳು. ಚಾರಿತ್ರದ ವೃದ್ಧಿ-ಹಾನಿಗಳಿಂದಲೇ ಶ್ರೀಮಂತಿಕೆಯಲ್ಲಿ ವೃದ್ಧಿ-ಹಾನಿಗಳುಂಟಾಗುತ್ತವೆ. ಸಾಂಸಾರಿಕ ಸಂಪತ್ತಿನಿಂದ ಶ್ರೀಮಂತನಾಗಿರುವವನು ಮೃತ್ಯು ಸಮಯದಲ್ಲಿ ತನ್ನೆಲ್ಲಾ ಸಂಪತ್ತಿಯನ್ನು ಬಿಟ್ಟು ಹೋಗುತ್ತಾನೆ. ಆದರೆ ಚಾರಿತ್ರ ಸಂಪತ್ತಿನಿಂದ ಧನಿಕನಾಗಿರುವವನು ತನ್ನ ಸಂಪತ್ತಿಯನ್ನು (ಪುಣ್ಯ ಮತ್ತದರ ಫಲವನ್ನು) ತನ್ನೊಡನೆಯೇ ಪರಲೋಕಕ್ಕೊಯ್ಯುತ್ತಾನೆ.

ಕ್ಷಮೆ, ವಿನಯ, ಸರಲತೆ, ಸಂತೋಷ ಹಾಗೂ ಸಹಿಷ್ಣುತೆ ಈ ಸದ್ಗುಣಗಳು ಕುಬೇರನ ಭಂಡಾರಕ್ಕಿಂತಲೂ ಹೆಚ್ಚಿನ ಮೌಲ್ಯವುಳ್ಳವುಗಳು. ಚಿನ್ನದ ನಾಣ್ಯಗಳನ್ನು ಸಂಗ್ರಹಿಸುವ ಬದಲು ಸುವರ್ಣಮಯವಾದ ವಿಚಾರಗಳನ್ನು ಸಂಗ್ರಹಿಸುವುದು ಮೇಲು. ಅದು ವಿಶೇಷ ಹಿತಕರವಾದುದು. ಯಥಾರ್ಥ ಸುಖದ ಪ್ರಾಪ್ತಿಯು ಅದರಿಂದಲೇ ಉಂಟಾಗುವುದು. ಧನರಹಿತನಾದ ಮನುಷ್ಯನು ದೀನನೆನಿಸುತ್ತಾನೆ. ಪರಂತು ಚಾರಿತ್ರರಹಿತನಾದ ಮನುಷ್ಯನು ಅತಿದೀನನಾಗಿರುವನು. ಸಮಸ್ತ ಪೃಥ್ವಿಯನ್ನು ಜಯಿಸಿರುವ ಚಕ್ರವರ್ತಿಯಾದರೂ ಆತನು ಚಾರಿತ್ರರೂಪವಾದ ಆತ್ಮಿಕಲಕ್ಷ್ಮಿಯಿಂದ ವಂಚಿತನಾಗಿದ್ದರೆ ಆತನ ಸಮಸ್ತ ಸಂಪತ್ತಿಯೂ ಧೂಳಿಗೆ ಸಮಾನವಾದುದು. ಮನುಷ್ಯನು ಧನರಹಿತ (ದರಿದ್ರ) ನಾಗಿದ್ದರೂ ಚಾರಿತ್ರಧನದಿಂದ ಶ್ರೀಮಂತನಾಗಬೇಕು.

ಚಾರಿತ್ರವನ್ನು ತಮ್ಮ ಸಂಪತ್ತಿಯನ್ನಾಗಿ ಮಾಡಿಕೊಳ್ಳಿರಿ. ಆಮೇಲೆ ನೀವು ನಿರ್ಧನತೆಯಿಂದ ಸ್ಪರ್ಶಿಸಲ್ಪಡಲಾರಿರಿ. ಸದ್ಗುಣಗಳೆಂಬ ನಿಜ ಸಂಪತ್ತಿಯನ್ನು ನಿಮ್ಮ ಹೃದಯವೆಂಬ ಟ್ರೆಜರಿಯಲ್ಲಿ ತುಂಬಿಸಿಕೊಳ್ಳಿರಿ. ಈ ಚಾರಿತ್ರಧನವು ಎಂದಿಗೂ ನಾಶವಾಗುವಂತಹು

ದಲ್ಲ. ರಾಜ್ಯಸಂಪತ್ತಿಗಿಂತಲೂ ಸದಾಚಾರವು ವಿಶೇಷ ಮಹತ್ತ್ವವುಳ್ಳದು. ಉಚ್ಚಕುಲವೂ ಸದಾಚಾರದಿಂದಲೇ ಲಭಿಸುತ್ತದೆ. ಆತವಿವ ಶಾಸ್ತ್ರಕಾರರು, **"ಆಚಾರಃ ಪರಮೋ ಧರ್ಮಃ"** "ಸದಾಚಾರವೇ ಉತ್ತಮವಾದ ಧರ್ಮವು." ಎಂದಿರುವರು.

## ಚೈತನ್ಯವಾದ - ವಿಜ್ಞಾನ

ಚೈತನ್ಯವಾದ ವಿಜ್ಞಾನವನ್ನು ಪೂರ್ವಕಾಲದ ಋಷಿಮಹರ್ಷಿಗಳು ವಿಶೇಷತಃ ವಿಕಾಸಗೊಳಿಸಿದ್ದರೆಂಬುದರ ಇತಿಹಾಸವು ಧರ್ಮ-ಗ್ರಂಥಗಳಲ್ಲಿ ಉಪಲಬ್ಧವಾಗುತ್ತಿದೆ. ಈ ವಿಜ್ಞಾನಕಲೆಯಿಂದ ಅನಂತ ಮಹಾಪುರುಷರು ಆತ್ಮೋನ್ನತಿಯನ್ನು ಪಡೆದು ಸರ್ವದೋಷರಹಿತವೂ ಪೂರ್ಣಜ್ಞಾನಮಯವೂ ನಿರ್ವಾಣಸ್ವರೂಪವೂ ಆದ ಪರಮಪದವನ್ನು ಹೊಂದಿರುವರು.

ಚೈತನ್ಯವಾದಕ್ಕೆ **"ಅಧ್ಯಾತ್ಮವಾದ"** ವೆಂದೂ ಹೆಸರಿದೆ. ಇದರ ಪ್ರಚಾರವಾಗದೆ ಜಗತ್ತಿನಲ್ಲಿ ಶಾಂತಿಯು ಸ್ಥಾಪಿಸಲ್ಪಡಲಾರದು. ಆದರೆ ಇಂದಿನ ಕಾಲದಲ್ಲಿ ಜಡವಾದದ ಪ್ರಭಾವದಿಂದ ಅಧ್ಯಾತ್ಮದ ಶಿಕ್ಷಣೆಯು ಅನಾವಶ್ಯಕವೆಂದೂ ನಿಷ್ಪ್ರಯೋಜಕವೆಂದೂ ತಿಳಿಯಲ್ಪಡುತ್ತಿದೆ. ಯಾವ ಶಿಕ್ಷಣೆಯಿಂದ ದ್ರವ್ಯದ ಪ್ರಾಪ್ತಿಯಾಗಬಲ್ಲುದೋ ಅದೇ ನಿಜವಾದ ಶಿಕ್ಷಣೆಯೆಂದು ಇಂದಿನ ಜನರು ಭಾವಿಸುತ್ತಿದ್ದಾರೆ. ಸುಖ-ಶಾಂತಿಗಳೂ ಆತ್ಮಾಧೀನವಾದುವುಗಳು. ಆತ್ಮನ ನಿಜಸ್ವರೂಪವನ್ನರಿಯದೆ ಹಾಗೂ ನಿಜಸ್ವಭಾವವನ್ನು ರಕ್ಷಿಸದೆ ಆತ್ಮಸ್ವಭಾವ-ಭಿನ್ನಗಳಾದ ಧನಾದಿಗಳಿಂದ ನೈಜಸುಖಶಾಂತಿಗಳು ಎಂದೂ ಲಭಿಸಲಾರವು. ವಸ್ತುತಃ ಆತ್ಮಸ್ವಭಾವವನ್ನು ರಕ್ಷಿಸುವ ಸಾಧನ-ಸಾಮಗ್ರಿಯೇ ಅಧ್ಯಾತ್ಮವಾದವು. ಇದರ ಹೊರತು ಲೋಕವ್ಯವಹಾರದಲ್ಲಿಯೂ ಶಾಂತಿ ದೊರೆಯಲಾರದು.

ಇಂದು ಜಗತ್ತಿನಲ್ಲಿ ಅಧ್ಯಾತ್ಮವಾದದ ಪ್ರಚಾರವೂ ಶಿಕ್ಷಣೆಯೂ ಸಾಕಷ್ಟು ಇಲ್ಲದಿರುವುದರಿಂದಲೇ ಹಿಂಸಾದಿಪಾಪಮಯಪ್ರವೃತ್ತಿಗಳು ದಿನ-ಪ್ರತಿದಿನ ಬೆಳೆಯುತ್ತಿರುತ್ತವೆ ಹಾಗೂ ಇದರ ಫಲಸ್ವರೂಪವಾಗಿ ಆಕುಲತೆ ಅಶಾಂತಿಗಳೂ ಹೆಚ್ಚುತ್ತಿರುತ್ತವೆ. ಆತಏವ ಎಂದಿನವರೆಗೆ ಜಗತ್ತಿನಲ್ಲಿ ಚೈತನ್ಯವಾದವಿಜ್ಞಾನದ ಪರ್ಯಾಪ್ತಪ್ರಚಾರವು ನಡೆಯುವುದಿಲ್ಲವೋ ಅಂದಿನವರೆಗೆ ಸುಖ-ಶಾಂತಿಗಳ ಪ್ರಾಪ್ತಿಯ ಆಶೆಯು ನಿಷ್ಫಲವಾದುದು.

**ಆತ್ಮಿಕ ವಿಜ್ಞಾನ:—** ಆತ್ಮಜ್ಞಾನದಿಂದ ಸಂಸಾರಭ್ರಮಣೆಯು ಅಂತಗೊಳ್ಳುತ್ತದೆ. ಎಂದು ಆತ್ಮನು ಜಡಕರ್ಮಗಳಿಂದ ಮುಕ್ತನಾಗುವನೋ ಅಂದೇ ಅವನು "ಆತ್ಮ" ನೆಂದು ಹೇಳಲ್ಪಡುವನು. ಶುದ್ಧ ಆತ್ಮನ ಧ್ಯಾನದಿಂದ ಮುಕ್ತಿಯು ಶೀಘ್ರ ಲಭಿಸುತ್ತದೆ. ಆತ್ಮಜ್ಞಾನದ ಹೊರತು ಶಾಸ್ತ್ರಗಳ ಅಧ್ಯಯನವೂ ಆಚಾರಗಳ ಪಾಲನೆಯೂ ನಿರರ್ಥಕವಾದುದು.

**ಆತ್ಮರ ಮೂರು ಭೇದ:—** ಆತ್ಮರಲ್ಲಿ ಬಹಿರಾತ್ಮರು, ಅಂತರಾತ್ಮರು ಮತ್ತು ಪರಮಾತ್ಮರೆಂದು ಮೂರು ಭೇದಗಳಿರುತ್ತವೆ. ಶರೀರವನ್ನು ಆತ್ಮನೆಂದು ತಿಳಿಯುವಿಕೆಯು ಅಜ್ಞಾನವಾಗಿದೆ. ಆತಏವ ತನ್ನನ್ನು (ಆತ್ಮನನ್ನು) ಶರೀರದಿಂದ ಭಿನ್ನನನ್ನಾಗಿಯೂ ಜ್ಞಾನಮಯನನ್ನಾಗಿಯೂ ತಿಳಿಯಬೇಕಾದುದು ಹಾಗೂ ಈ ಪ್ರಕಾರವಾದ ಆತ್ಮನ ಧ್ಯಾನದಲ್ಲಿ ಲೀನನಾಗಿ ಪರಮಾತ್ಮನನ್ನು ಅರಿಯಬೇಕಾದುದು ಜ್ಞಾನಿಯಾದ ಮನುಷ್ಯನ ಕರ್ತವ್ಯವಾಗಿರುತ್ತದೆ. ಸಮಸ್ತ ಬಾಹ್ಯವಿಷಯಗಳನ್ನು ತ್ಯಾಗಮಾಡುವುದರಿಂದ ಅಂತರಾತ್ಮನು ಪರಮಾತ್ಮನಾಗುವನು.

**ಆತ್ಮನ ಸ್ವಭಾವ:—** ಆತ್ಮನು ಶರೀರದಲ್ಲಿ ನಿವಾಸಮಾಡು ತ್ತಿದ್ದರೂ ಆತನು ಶರೀರದಿಂದ ಸರ್ವಥಾ ಭಿನ್ನನಾಗಿರುವನು. ಲೋಕ ದಲ್ಲಿರುವ ಆರು ದ್ರವ್ಯಗಳಲ್ಲಿ ಆತ್ಮದ್ರವ್ಯ (ಜೀವದ್ರವ್ಯ) ವೊಂದೇ ಚೇತನಮಯವಾದುದು. ಉಳಿದ ದ್ರವ್ಯಗಳೆಲ್ಲವೂ ಜಡವಾದುವು. ಆತ್ಮನು ಅನಂತಜ್ಞಾನ ಮತ್ತು ಅನಂತ ಆನಂದದ ಭಂಡಾರವಾಗಿರು ವನು. ಅನಾದಿ ಹಾಗೂ ಅನಂತನಾಗಿರುವನು. ದರ್ಶನ-ಜ್ಞಾನಗಳು ಅವನ ಮುಖ್ಯಗುಣಗಳಾಗಿರುತ್ತವೆ. ಸಂಸಾರಾವಸ್ಥೆಯಲ್ಲಿ ಆತನು ಶರೀರಪ್ರಮಾಣನಾಗಿದ್ದು ಮುಕ್ತಾವಸ್ಥೆಯಲ್ಲಿ ಕರ್ಮಬಂಧನ ಶೂನ್ಯ (ರಹಿತ) ನಾಗಿರುವುದರಿಂದ "ಶೂನ್ಯ" ನೆಂದೂ ಹೇಳಲ್ಪಡುತ್ತಾನೆ. ಸರ್ವ ಆತ್ಮರ ಅಸ್ತಿತ್ವವು ಬೇರೆ ಬೇರೆಯಾಗಿರುವುದಾದರೂ ಗುಣಗಳ ಅಪೇಕ್ಷೆಯಿಂದ ಅವರಲ್ಲಿ ಯಾವ ಅಂತರವೂ ಇರುವುದಿಲ್ಲ. ಸರ್ವ ಆತ್ಮರೂ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತ ವೀರ್ಯ ಇತ್ಯಾದಿ ಸ್ವಾಭಾವಿಕ ಗುಣಗಳ ಭಂಡಾರದಂತಿರುವರು. ಪರಂತು ಅಶುದ್ಧ-ಅವಸ್ಥೆಯಲ್ಲಿ ಅವರ ಈ ಗುಣಗಳು ಕರ್ಮಗಳಿಂದ ಆಚ್ಛಾದಿತವಾಗಿರುತ್ತವೆ.

**ಪರಮಾತ್ಮನ ಸ್ವಭಾವ:—** ಮೂರು ಲೋಕಗಳ ಅಗ್ರಭಾಗ ದಲ್ಲಿರುವ ಮೋಕ್ಷ-ಸ್ಥಾನವು ಪರಮಾತ್ಮನ ನಿವಾಸ ಸ್ಥಾನವಾಗಿದೆ. ಅವನು ಶಾಶ್ವತ ಜ್ಞಾನ ಮತ್ತು ಸುಖದ ಆಗರದಂತಿರುವವನೂ ಪುಣ್ಯ ಪಾಪಗಳಿಂದ ನಿರ್ಲಿಪ್ತನೂ ಆಗಿರುತ್ತಾನೆ. ಕೇವಲ ನಿರ್ಮಲಧ್ಯಾನ ದಿಂದಲೇ ಪರಮಾತ್ಮನನ್ನು ಅರಿಯಬಹುದಾಗಿದೆ. ಮಲಿನವಾದ ದರ್ಪಣ (ಕನ್ನಡಿ) ದಲ್ಲಿ ರೂಪವು ಕಾಣಲ್ಪಡದಿರುವಂತೆ ಮಲಿನಚಿತ್ತ ದಲ್ಲಿ ಪರಮಾತ್ಮನು ಕಾಣಲ್ಪಡಲಾರನು.

ಪರಮಾತ್ಮನು ವಿಶ್ವದ ಮಸ್ತಕದಲ್ಲಿ ವಿರಾಜಮಾನನಾಗಿರು

ತ್ತಾನೆ ಮತ್ತು ವಿಶ್ವವು ಅವನ ಜ್ಞಾನದಲ್ಲಿ ಅಡಕವಾಗಿರುತ್ತದೆ. ಏಕೆಂದರೆ ಅವನು ಸರ್ವವನ್ನೂ ತಿಳಿಯುವವನಾಗಿರುತ್ತಾನೆ. ಪರಮಾತ್ಮರು ಅನೇಕರಾಗಿದ್ದರೂ ಅವರಲ್ಲಿ ಯಾವ ಅಂತರವೂ ಇರುವುದಿಲ್ಲ. ಪರಮಾತ್ಮನು ಇಂದ್ರಿಯಗಮ್ಯನಲ್ಲ ಹಾಗೂ ಕೇವಲ ಶಾಸ್ತ್ರಾಭ್ಯಾಸದಿಂದಲೇ ತಿಳಿಯಲ್ಪಡುವವನೂ ಅಲ್ಲ. ಅವನು ಏಕಮಾತ್ರ ನಿರ್ಮಲಜ್ಞಾನಕ್ಕೆ ವಿಷಯಭೂತನಾಗಿರುವನು. ಬ್ರಹ್ಮ, ಪರಬ್ರಹ್ಮ, ಶಿವ, ಶಾಂತ ಮೊದಲಾದ ಹೆಸರುಗಳು ಪರಮಾತ್ಮನ ನಾಮಾಂತರಗಳೇ ಆಗಿರುತ್ತವೆ.

**ಕರ್ಮಗಳ ಸ್ವಭಾವ:**—ರಾಗ-ದ್ವೇಷ ಮೊದಲಾದ ಮಾನಸಿಕ ಭಾವಗಳ ನಿಮಿತ್ತದಿಂದ ಯಾವ ಪರಮಾಣುಗಳು ಆತ್ಮನೊಡನೆ ಸಂಬದ್ಧವಾಗುವುವೋ ಅವುಗಳಿಗೆ ಕರ್ಮಗಳೆಂದು ಹೆಸರು. ಜೀವ-ಕರ್ಮಗಳ ಸಂಬಂಧವು ಅನಾದಿಯಾದುದು. ಕರ್ಮಗಳ ಕಾರಣದಿಂದಲೇ ಆತ್ಮನ ಅನೇಕ ಅವಸ್ಥೆಗಳುಂಟಾಗುತ್ತವೆ. ಆತ್ಮನು ಶರೀರಧಾರಿಯಾಗಿರುವುದೂ ಕರ್ಮಗಳ ಕಾರಣದಿಂದಲೇ. ಈ ಕರ್ಮಕಲಂಕವು ಧ್ಯಾನರೂಪವಾದ ಅಗ್ನಿಯಿಂದ ಸುಡಲ್ಪಟ್ಟು ಭಸ್ಮವಾಗುತ್ತದೆ.

**ಆತ್ಮ ಮತ್ತು ಪರಮಾತ್ಮ:**— ಆತ್ಮನೇ ಪರಮಾತ್ಮನಾಗಿರುವನು. ಆದರೆ ಕರ್ಮಬಂಧದ ಕಾರಣದಿಂದ ಆತನು ಪರಮಾತ್ಮನಾಗಲಾರನು. ಆತನು ತನ್ನನ್ನು ತಾನು ತಿಳಿದಂತೆ ಆತನಲ್ಲಿ ಪರಮಾತ್ಮತ್ವವು ವ್ಯಕ್ತವಾಗುವುದು. ಸ್ವಾಭಾವಿಕ ಗುಣಗಳ ಅಪೇಕ್ಷೆಯಿಂದ ಆತ್ಮ ಮತ್ತು ಪರಮಾತ್ಮರಲ್ಲಿ ಯಾವುದೊಂದು ಅಂತರವೂ ಇರುವುದಿಲ್ಲ. ಎಂದು ಆತ್ಮನು ಕರ್ಮಬಂಧನದಿಂದ ಬಿಡಲ್ಪಡುವನೋ ಅಂದು ಅವನ ಆನಂದಕ್ಕೆ ಪಾರವಿರಲಾರದು.

**ಸಂಸಾರ ಮತ್ತು ಮೋಕ್ಷ:**—ಸಂಸಾರ ಮತ್ತು ಮೋಕ್ಷ ಇವೆರಡು ಆತ್ಮನ ಅವಸ್ಥೆಗಳಾಗಿವೆ ಹಾಗೂ ಇವೆರಡರಲ್ಲಿ ಒಂದು ಇನ್ನೊಂದರಿಂದ ಸರ್ವಥಾ ವಿರುದ್ಧವಾಗಿದೆ. ಸಂಸಾರವು ಜನ್ಮ-ಮೃತ್ಯುಗಳ ಪ್ರತಿನಿಧಿಯಾಗಿದ್ದರೆ ಮೋಕ್ಷವು ಅವುಗಳ ವಿರೋಧಿಯಾಗಿದೆ. ಸಂಸಾರಾವಸ್ಥೆಯಲ್ಲಿ ಆತ್ಮನು ಕರ್ಮಗಳ ಬಲೆಯಲ್ಲಿ ಸಿಲುಕಿದವನಾಗಿ ನರಕ, ಪಶು, ಮನುಷ್ಯ ಮತ್ತು ದೇವ ಈ ನಾಲ್ಕು ಗತಿಗಳಲ್ಲಿ ಭ್ರಮಿಸುತ್ತಿರುತ್ತಾನೆ. ಪರಂತು ಮೋಕ್ಷವು ಇದಕ್ಕೆ ವಿಪರೀತವಾಗಿದೆ. ಅದಕ್ಕೆ ಪಂಚಮಗತಿಯೆಂದೂ ಹೇಳುತ್ತಾರೆ. ಆತ್ಮನು ಹದಿನಾಲ್ಕು ಗುಣಸ್ಥಾನಗಳನ್ನೇರಿ ಸಮಸ್ತ ಕರ್ಮಗಳನ್ನು ನಿರ್ಮೂಲಗೊಳಿಸಿದನೆಂದರೆ ಆಗಲೇ ಪಂಚಮಗತಿಯನ್ನು ಪಡೆಯುವನು. ಸಂಸಾರಾವಸ್ಥೆಯಲ್ಲಿ ಕರ್ಮಗಳು ಆತ್ಮನ ಶಕ್ತಿಯನ್ನು ಪ್ರಕಟವಾಗಲು ಬಿಡುವುದಿಲ್ಲ. ಆದರೆ ಆತ್ಮನು ಪರಮಾತ್ಮನಾಗುವ ಮುಕ್ತಾವಸ್ಥೆಯಲ್ಲಿ ಆತ್ಮನ ಅನಂತ ಜ್ಞಾನ ಮೊದಲಾದ ನಿಜಶಕ್ತಿಗಳು ಪ್ರಕಟವಾಗುತ್ತವೆ.

**ಮೋಕ್ಷಪ್ರಾಪ್ತಿಯ ಉಪಾಯ :**— ವ್ಯವಹಾರನಯದಿಂದ ಸಮ್ಯಗ್ದರ್ಶನ, ಸಮ್ಯಗ್ ಜ್ಞಾನ, ಸಮ್ಯಕ್ಚಾರಿತ್ರ ಈ ಮೂರರ ಸಂಯೋಗವು ಮೋಕ್ಷಪ್ರಾಪ್ತಿಯ ಉಪಾಯವಾಗಿರುತ್ತದೆ. ಇವುಗಳಿಗೆ "ರತ್ನತ್ರಯ" ವೆಂದೂ ಹೇಳುತ್ತಾರೆ. ನಿಶ್ಚಯನಯದಿಂದ ರತ್ನತ್ರಯಮಯನಾದ ಆತ್ಮನೇ ಮೋಕ್ಷಕ್ಕೆ ಕಾರಣನಾಗಿರುತ್ತಾನೆ. ಏಕೆಂದರೆ ರತ್ನತ್ರಯವು ಆತ್ಮನ ಸ್ವಾಭಾವಿಕ ಗುಣವಾಗಿರುತ್ತದೆ ಹಾಗೂ ಅದು ಆತ್ಮನ ಹೊರತು ಬೇರಾವ ದ್ರವ್ಯದಲ್ಲಿಯೂ ಇರಲಾರದು.

**ಪುಣ್ಯ ಮತ್ತು ಪಾಪ:**—ಮಾನಸಿಕ, ವಾಚಿಕ ಹಾಗೂ ಕಾಯಿಕ ಕ್ರಿಯೆಯಿಂದ ಆತ್ಮನ ಪ್ರದೇಶಗಳಲ್ಲಿ ಹಲನ ಚಲನವುಂಟಾಗುತ್ತದೆ.

ಇದರಿಂದ ಕರ್ಮಪರಮಾಣುಗಳು ಆತ್ಮನ ಕಡೆಗೆ ಆಕರ್ಷಿಸಲ್ಪಡುತ್ತವೆ. ಶುಭಕ್ರಿಯೆಯಿಂದ ಪರಮಾಣುಗಳು ಪುಣ್ಯಕರ್ಮರೂಪವಾಗಿಯೂ ಅಶುಭಕ್ರಿಯೆಯಿಂದ ಪಾಪಕರ್ಮರೂಪವಾಗಿಯೂ ಪರಿಣಮಿಸುತ್ತವೆ. ಪುಣ್ಯ ಅಥವಾ ಪಾಪ ಇವೆರಡರ ಅಸ್ತಿತ್ವವೂ ಆತ್ಮನ ಪಾರತಂತ್ರ್ಯಕ್ಕೆ ಕಾರಣವಾಗುತ್ತದೆ. ಪುಣ್ಯಕರ್ಮವು ಚಿನ್ನದ ಬೇಡಿಯಾಗಿದ್ದರೆ ಪಾಪಕರ್ಮವು ಕಬ್ಬಿಣದ ಬೇಡಿಯಾಗಿರುತ್ತದೆ. ಅಂತೂ ಎರಡೂ ಬಂಧನಗಳೇ. ಆದುದರಿಂದ ಆತ್ಮಸ್ವಾತಂತ್ರ್ಯವನ್ನು ಬಯಸುವ ಮುಮುಕ್ಷುಗಳು ಇವೆರಡರಿಂದಲೂ ತಾವು ಮುಕ್ತರಾಗುವಂತೆ ಪ್ರಯತ್ನಿಸುತ್ತಾರೆ.

## ಹಿಂಸೆ - ಅಹಿಂಸೆ

**"ಪ್ರಮತ್ತಯೋಗಾತ್ ಪ್ರಾಣವ್ಯಪರೋಪಣಂ ಹಿಂಸಾ"** ಎಂದಿರುವಂತೆ ರಾಗ-ದ್ವೇಷಾದಿ ವಿಕಾರಭಾವಗಳಿಂದ ಪ್ರೇರಿತನಾಗಿ ಪ್ರಾಣಿಗಳ ದ್ರವ್ಯ-ಭಾವರೂಪವಾದ ಪ್ರಾಣಗಳನ್ನು ಘಾತಮಾಡುವುದಕ್ಕೆ 'ಹಿಂಸೆ' ಯೆಂದು ಹೆಸರು. ಶರೀರದಿಂದ ಆತ್ಮನನ್ನು ಬೇರೆ ಮಾಡುವುದಕ್ಕೆ 'ದ್ರವ್ಯಹಿಂಸೆ' ಯೆಂದೂ, ಶುದ್ಧ ಭಾವಗಳನ್ನು ಘಾತ ಮಾಡುವುದಕ್ಕೆ 'ಭಾವಹಿಂಸೆ' ಯೆಂದೂ ಹೇಳುತ್ತಾರೆ. ರಾಗ, ದ್ವೇಷ, ಮೋಹ, ಮದ, ಮಾತ್ಸರ್ಯ, ಕ್ರೋಧ, ಲೋಭ ಮತ್ತು ಮಾಯಾ ಮೊದಲಾದ ವಿಕಾರಭಾವಗಳುಂಟಾಗುವುದೇ ಹಿಂಸೆಯು. ಉದಾಹರಣೆಗಾಗಿ:— ಒಂದು ಗಂಡು ಮಗುವು ಮೊಲೆ ಕುಡಿಯುವಾಗ ತನ್ನ ತಾಯಿಯ ಸ್ತನಗಳನ್ನು ಕೈಯಿಂದ ಸ್ಪರ್ಶಿಸಿದರೆ ಲೋಕವು ಆತನನ್ನು ಪಾಪಿಯೆನ್ನುವುದಿಲ್ಲ. ಆದರೆ ಅದೇ ಮಗುವು ದೊಡ್ಡದಾಗಿ ತರುಣನಾದಾಗ ತಾಯಿಯ ಸ್ತನವನ್ನು ಸ್ಪರ್ಶಿಸಿದರೆ ಲೋಕವು ಆತನನ್ನು ಪಾಪಿಯೆನ್ನುವುದು. ಇಲ್ಲಿ ಮಗುವು ಪಾಪಿಯಲ್ಲದಿರುವುದಕ್ಕೂ

ತರುಣನು ಪಾಪಿಯೆನ್ನಿಸುವುದಕ್ಕೂ ಅವರ ಭಾವಪರಿವರ್ತನವು ಕಾರಣವಾಗಿರುತ್ತದಲ್ಲದೆ ಕೇವಲ ಸ್ತನಸ್ಪರ್ಶರೂಪವಾದ ಕಾರ್ಯವು ಕಾರಣವಾಗಿರುವುದಿಲ್ಲವೆಂಬುದು ಸ್ಪಷ್ಟವಾಗುವುದು. ರಾಗದ್ವೇಷಾದಿ ಭಾವಗಳ ಪ್ರಾದುರ್ಭಾವವಿಲ್ಲದಿರುವಲ್ಲಿ ಅರ್ಥಾತ್ ಪ್ರಾಣಘಾತದ ಉದ್ದೇಶವಿಲ್ಲದಿರುವಲ್ಲಿ ಪ್ರಾಣಘಾತವಾದರೂ ಅದು ಹಿಂಸೆಯೆನಿಸುವುದಿಲ್ಲ. ರಾಗದ್ವೇಷಾದಿ ವಿಕಾರಭಾವಗಳ ಸದ್ಭಾವವಿರುವಲ್ಲಿ ಅಥವಾ ಪ್ರಾಣಘಾತದ ಪ್ರೇರಣೆಯುಂಟಾದಾಗ ಜೀವವು ಸಾಯದಿದ್ದರೂ ಹಿಂಸಾದೋಷವು ಸಂಭವಿಸುವುದು ನಿಶ್ಚಯ.

ಇತರ ಪ್ರಾಣಿಗಳ ಹಿಂಸೆಯಾಗಲಿ ಆಗದಿರಲಿ, ರಾಗದ್ವೇಷಾದಿ ಕಷಾಯಭಾವಗಳುಳ್ಳವನಾದ ಆತ್ಮನು ಮೊತ್ತಮೊದಲು ತನ್ನಿಂದ ತನ್ನನ್ನು ಕೊಲ್ಲುತ್ತಾನೆ. ಉದಾಹರಣೆಗಾಗಿ:— ಒಬ್ಬ ಮನುಷ್ಯನು ತನ್ನ ಶತ್ರುವನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಅವನಿಗೆ ಆಹಾರದಲ್ಲಿ ವಿಷವನ್ನು ಬೆರಸಿ ಕೊಟ್ಟನೆಂದೂ ಆದರೆ ಅದು ಆತನ ಹೊಟ್ಟೆನೋವಿಗೆ ಔಷಧವಾಗಿ ಪರಿಣಮಿಸಿತೆಂದೂ ಒಬ್ಬ ವೈದ್ಯನು ರೋಗಿಗೆ ರೋಗಮುಕ್ತಿಯ ಸದುದ್ದೇಶದಿಂದ ಶಸ್ತ್ರ ಚಿಕಿತ್ಸೆಯನ್ನು ಮಾಡಿದನೆಂದೂ ಅದರಿಂದ ರೋಗಿಯು ಅಕಸ್ಮಾತ್ ಸತ್ತುಹೋದನೆಂದೂ ತಿಳಿಯೋಣ. ಇಲ್ಲಿ ಶತ್ರುವಿನ ಮರಣವಾಗದಿದ್ದರೂ ಆ ಉದ್ದೇಶದಿಂದ ಅವನಿಗೆ ವಿಷಪ್ರಯೋಗವನ್ನು ಮಾಡಿದವನಿಗೆ ಹಿಂಸಾದೋಷವುಂಟಾಗುವುದು. ವೈದ್ಯನ ಶಸ್ತ್ರ ಚಿಕಿತ್ಸೆಯಿಂದ ರೋಗಿಯ ಮರಣವಾದರೂ ಮಾರಣೋದ್ದೇಶವಿಲ್ಲದ ವೈದ್ಯನಿಗೆ ಹಿಂಸಾದೋಷವುಂಟಾಗುವುದಿಲ್ಲ. ಆತಏವ ಹಿಂಸೆ-ಅಹಿಂಸೆಗಳಿಗೆ ಅವರವರ ಭಾವವೇ ಕಾರಣವಲ್ಲದೆ ಬಾಹ್ಯಕ್ರಿಯೆಯಲ್ಲವೆಂಬುದು ಸ್ಪಷ್ಟವಾಗುವುದು.

ಹಿಂಸೆಯಲ್ಲಿ ವಿರಕ್ತಿಯನ್ನು ಹೊಂದದಿರುವುದೂ ಹಿಂಸೆಯು ಹಾಗೂ ಹಿಂಸೆಯಲ್ಲಿ ಪರಿಣಮಿಸುವುದೂ ಹಿಂಸೆಯಾಗಿರುತ್ತದೆ. ಆದುದರಿಂದ ರಾಗದ್ವೇಷಾದಿ ಪ್ರಮಾದಯುಕ್ತನಾಗಿರುವವನ ಮನೋವಾಕ್ಕಾಯರೂಪವಾದ ಯೋಗದಲ್ಲಿ ಯಾವಾಗಲೂ ಪ್ರಾಣಘಾತ ವಿದ್ದೇ ಇರುತ್ತದೆ. ಹಿಂಸಾದೋಷಕ್ಕೆ ರಾಗದ್ವೇಷಾದಿ ವಿಕಾರಭಾವಗಳು ಕಾರಣಗಳಲ್ಲದೆ ಧನಧಾನ್ಯ ವಸ್ತ್ರ ವಾಹನಾದಿ ಪರವಸ್ತುಗಳು ಕಾರಣಗಳಲ್ಲವಾದರೂ ಆ ವಸ್ತುಗಳು ಹಿಂಸೆಗೆ ಬಾಹ್ಯನಿಮಿತ್ತಗಳಾಗಿರುವುದರಿಂದ ಆತ್ಮಪರಿಣಾಮಶುದ್ಧಿಗೋಸ್ಕರ ಅವುಗಳ (ಪರವಸ್ತುಗಳ) ತ್ಯಾಗವನ್ನೂ ಮಾಡಬೇಕು. ಅಂತರಂಗಪರಿಣಾಮದ ಶುದ್ಧಿಗೆ ಬಾಹ್ಯಕ್ರಿಯೆಯ ಶುದ್ಧಿಯೂ ಆವಶ್ಯಕವಾಗಿರುತ್ತದೆ.

ಹಿಂಸೆ-ಅಹಿಂಸೆಗಳ ತತ್ತ್ವವು ಬಹುಸೂಕ್ಷ್ಮವಾದುದು. ಹಿಂಸೆಯನ್ನು ಮಾಡಬೇಕೆಂದಿರುವವನು ಹಿಂಸೆಮಾಡದಿದ್ದರೂ ಹಿಂಸಾಫಲಕ್ಕೆ ಭಾಗಿಯಾಗುವನು. ಹಿಂಸೆಯ ಭಾವವಿಲ್ಲದವನು ಹಿಂಸೆಯನ್ನು ಮಾಡಿದರೂ ಹಿಂಸಾಫಲಕ್ಕೆ ಪಾತ್ರನಾಗುವುದಿಲ್ಲ. ತೀವ್ರವಾದ ಹಿಂಸಾಭಾವವಿರುವವನಿಗೆ ಅಲ್ಪವಾದ ಹಿಂಸೆಯೂ ಫಲೋದಯಕಾಲದಲ್ಲಿ ಅಧಿಕಫಲವನ್ನು ಕೊಡುತ್ತದೆ. ಹಿಂಸಾಭಾವವು ಮಂದವಾಗಿರುವವನಿಗೆ ಅಧಿಕ ಹಿಂಸೆಯೂ, ಫಲೋದಯಕಾಲದಲ್ಲಿ ಅಲ್ಪಫಲವನ್ನೀಯುತ್ತದೆ. ಹಲವರು ಒಟ್ಟು ಸೇರಿ ಮಾಡಿದ ಹಿಂಸೆಯು ಫಲೋದಯಕಾಲದಲ್ಲಿ ಅವರವರ ತೀವ್ರ ಮಂದಭಾವಕ್ಕನುಸಾರವಾಗಿ ನ್ಯೂನಾಧಿಕಫಲಗಳನ್ನು ಕೊಡುತ್ತದೆ. ಹಿಂಸೆಯನ್ನು ಮಾಡುವುದಕ್ಕಿಂತ ಮೊದಲೇ ಅದು ಫಲಕೊಡುವುದೂ ಉಂಟು; ಹಿಂಸೆಯನ್ನು ಮಾಡುತ್ತಿರುವ ಕಾಲದಲ್ಲಿ ಫಲವನ್ನು ಕೊಡುವುದೂ ಉಂಟು; ಕಾಲಾಂತರದಲ್ಲಿ ಫಲವನ್ನು ಕೊಡುವುದೂ ಉಂಟು;

ಮೊದಲು ಮಾಡಿದ ಹಿಂಸೆಯು ಈಗ ಫಲವನ್ನು ಕೊಡುವುದೂ ಉಂಟು. ಹಿಂಸೆಯನ್ನು ಮಾಡಲುದ್ಯುಕ್ತನಾಗಿ ಅದನ್ನು ಮಾಡದಿದ್ದರೂ ಫಲವನ್ನು ಕೊಡುವುದೂ ಉಂಟು. ಹೀಗೆ ಹಿಂಸೆಯು ಕಷಾಯಭಾವಗಳನ್ನನುಸರಿಸಿ ಫಲವನ್ನು ಕೊಡುತ್ತದೆ.

ಒಬ್ಬನು ಮಾಡಿದ ಹಿಂಸೆಯನ್ನು ಅನುಮೋದಿಸುವ ಹಲವರು ಆ ಹಿಂಸೆಯ ಫಲಕ್ಕೆ ಭಾಗಿಗಳಾಗುತ್ತಾರೆ. ಉದ್ದೇಶವಿಲ್ಲದೆ ಹಲವರು ಒಬ್ಬನಿಗೋಸ್ಕರ ಮಾಡಿದ ಹಿಂಸೆಯನ್ನು ಅನುಮೋದಿಸುವ ಅವನೊಬ್ಬನು ಆ ಹಿಂಸಾಫಲಕ್ಕೆ ಪಾತ್ರನಾಗುತ್ತಾನೆ. ಕಷಾಯಭಾವದಿಂದ ಹಿಂಸಿಸುವವನಿಗೆ ಹಿಂಸಾದೋಷವುಂಟಾಗುತ್ತದೆ. ಅದೇ ಹಿಂಸೆಯನ್ನು ನೋಡಿ ಮರುಗುವವನಿಗೆ ಅಧಿಕವಾದ ಅಹಿಂಸಾಫಲವುಂಟಾಗುತ್ತದೆ. ಹಿಂಸಿಸಬೇಕೆಂಬ ಉದ್ದೇಶದಿಂದ ಪ್ರವರ್ತಿಸಿ ಅಕಸ್ಮಾತ್ ಹಿಂಸೆಯಾಗದೆ ಅಹಿಂಸೆಯಾದರೂ ಫಲಕಾಲದಲ್ಲಿ ಅದು ಹಿಂಸಾಫಲವನ್ನೇ ಕೊಡುತ್ತದೆ. ಹಾಗೆಯೇ ಹಿಂಸೆಯನ್ನು ಮಾಡಬಾರದೆಂಬ ಉದ್ದೇಶವಿದ್ದರೂ ಅಕಸ್ಮಾತ್ ಹಿಂಸೆಯಾದರೂ ಅದು ಫಲಕಾಲದಲ್ಲಿ ಅಹಿಂಸಾಫಲವನ್ನೇ ಕೊಡುತ್ತದೆ. ಹೀಗೆ ಭಾವಕ್ಕನುಸಾರವಾಗಿ ಅಹಿಂಸೆಯು ಹಿಂಸೆಯ ಫಲವನ್ನೂ, ಹಿಂಸೆಯು ಅಹಿಂಸೆಯ ಫಲವನ್ನೂ ಕೊಡುವುದುಂಟು. ಆತಏವ ಆತ್ಮಹಿತೈಷಿಗಳಾದ ಮನುಷ್ಯರು ಹಿಂಸೆಯ ಸಂಬಂಧವಾದ ಎಲ್ಲ ವಿಷಯಗಳನ್ನು ಅರ್ಥಾತ್ ಹಿಂಸಿಸಲ್ಪಡುವ ಸ್ವಪರದ್ರವ್ಯಭಾವಪ್ರಾಣಗಳನ್ನೂ ಹಿಂಸಿಸುವ ಜೀವನ ಲಕ್ಷಣವನ್ನೂ ಹಿಂಸಾಕ್ರಿಯೆಯ ಸ್ವರೂಪವನ್ನೂ ಹಿಂಸೆಯ ಫಲವನ್ನೂ ಯಥಾರ್ಥಸ್ವರೂಪದಿಂದ ತಿಳಿದು ತಮ್ಮ ಶಕ್ತಿಗನುಸಾರವಾಗಿ ಹಿಂಸೆಯನ್ನು ತ್ಯಾಗಮಾಡಬೇಕು.

ಅಹಿಂಸೆಯೆಂಬುದು ಮಾನವಧರ್ಮದ ಮುಖ್ಯ ಲಕ್ಷಣವಾಗಿದೆ.

ಆದುದರಿಂದಲೇ **"ಅಹಿಂಸಾ ಪರಮೋ ಧರ್ಮಃ"** ಅರ್ಥಾತ್ ಅಹಿಂಸೆಯು ಪರಮೋತ್ಕೃಷ್ಟವಾದ ಧರ್ಮವೆಂದು ಹೇಳಲ್ಪಟ್ಟಿದೆ. ಮನುಷ್ಯನು ಎಂದಿನವರೆಗೆ ಪೂರ್ಣ ಅಹಿಂಸಕನಾಗುವುದಿಲ್ಲವೋ ಅಂದಿನವರೆಗೆ ಆತನು ಮಾನವತೆಯ ಪೂರ್ತಿಯನ್ನು ಪಡೆಯಲಾರನು. ಹಿಂಸೆಯು ಪಿಶಾಚವೃತ್ತಿಯಾಗಿದ್ದರೆ ಅಹಿಂಸೆಯು ಪರಮಾತ್ಮವೃತ್ತಿಯಾಗಿರುವುದು. ಸಂಕಟ (ಕಷ್ಟ) ಗಳನ್ನು ಸಮಭಾವದಿಂದ ಸಹಿಸುವುದು ಅಹಿಂಸೆಯ ರಾಜಮಾರ್ಗವಾಗಿರುತ್ತದೆ. ಕುವಿಚಾರ, ದೋಷದೃಷ್ಟಿ ಇತ್ಯಾದಿಗಳನ್ನು ಅಹಿಂಸೆಯೇ ಸ್ಪರ್ಧಿಸಬಲ್ಲದು. ಯಾರೊಬ್ಬನ ಮೇಲೆಯೂ ತನ್ನ ಅಧಿಕಾರವನ್ನು ಸ್ಥಾಪಿಸುವುದೂ ಪರದೂಷಣೆ ಹಾಗೂ ಆತ್ಮಪ್ರಶಂಸೆಯೂ ಹಿಂಸೆಯಾಗಿರುತ್ತದೆ. ಅಹಿಂಸೆಯ ರಕ್ಷಣೆಗೋಸ್ಕರ ಅತ್ಯಂತ ಜಾಗೃತಿಯೂ ಸ್ಥೈರ್ಯವೂ ಆವಶ್ಯಕವಾಗಿದೆ. ಅಭಿಲಾಷೆಯು ಅನಾತ್ಮೀಯವಾದುದು. ಅದನ್ನು ತ್ಯಾಗಮಾಡುವವನು ಅಂತರಂಗದಿಂದ ಪವಿತ್ರ (ಅಹಿಂಸಕ) ನಾಗಬಲ್ಲನು. ಅಂಥವನ ದರ್ಶನಮಾತ್ರದಿಂದ ಗರ್ವಿಷ್ಠರ ಗರ್ವವೂ, ಲೋಭಿಗಳ ಲೋಭವೂ, ಮಾಯಾವಿಗಳ ಮಾಯೆಯೂ, ಕ್ರೋಧಿಗಳ ಕ್ರೋಧವೂ ಸ್ವತಃ ಮಾಯವಾಗಬಲ್ಲದು.

**— ಇತಿ ಕರ್ತವ್ಯಪ್ರಕಾಶ ಸಂಪೂರ್ಣಂ —**

ಓಂ ನಮಃ ಸಿದ್ಧೇಭ್ಯಃ

ಶ್ರೀ ಮಲ್ಲಿಷೇಣಾಚಾರ್ಯ ವಿರಚಿತ

# ಸಜ್ಜನಚಿತ್ತವಲ್ಲಭಃ

**ನತ್ವಾ ವೀರಜಿನಂ ಜಗತ್ತ್ರಯಗುರುಂ ಮುಕ್ತಿಶ್ರಿಯೋ ವಲ್ಲಭಂ**
**ಪುಷ್ಪೇಷುಕ್ಷಯನೀತಿಬಾಣನಿವಹಂ ಸಂಸಾರದುಃಖಾಪಹಂ ।**
**ವಕ್ಷ್ಯೇ ಭವ್ಯಜನಪ್ರಬೋಧಜನನಂ ಗ್ರಂಥಂ ಸಮಾಸಾದಹಂ**
**ನಾಮ್ನಾ ಸಜ್ಜನಚಿತ್ತವಲ್ಲಭಮಿಮಂ ಶೃಣ್ವಂತು ಸಂತೋ ಜನಾಃ ॥೧॥**

—"ಮೂರು ಲೋಕಗಳಿಗೆ ಸ್ವಾಮಿಯೂ ಮೋಕ್ಷಲಕ್ಷ್ಮಿಗೆ ಪ್ರಿಯ ಪತಿಯೂ ಮನ್ಮಥನ ಪಂಚಬಾಣಗಳನ್ನು ನಾಶಮಾಡುವ ನೀತಿಗಳೆಂಬ ಬಾಣಗಳ ಸಮೂಹವುಳ್ಳವನೂ ಸಂಸಾರದುಃಖವನ್ನು ನಾಶಮಾಡುವವನೂ ಆದ ಮಹಾವೀರ ವರ್ಧಮಾನ ಜಿನೇಶ್ವರನನ್ನು ನಮಸ್ಕರಿಸಿ ಭವ್ಯಜನರಿಗೆ ತಿಳಿವಳಿಕೆಯನ್ನುಂಟುಮಾಡುವುದೂ ಸಜ್ಜನಚಿತ್ತವಲ್ಲಭವೆಂದು ಹೆಸರುಳ್ಳುದೂ ಆದ ಗ್ರಂಥವನ್ನು ನಾನು ಸಂಕ್ಷೇಪದಿಂದ ಹೇಳುವೆನು. ಸಜ್ಜನರು ಕೇಳಬೇಕು." ॥೧॥

**ರಾತ್ರಿಶ್ಚಂದ್ರಮಸಾ ವಿನಾಬ್ಜನಿವಹೈರ್ನೋ ಭಾತಿ ಪದ್ಮಾಕರೋ**
**ಯದ್ವತ್ಪಂಡಿತಲೋಕವರ್ಜಿತಸಭಾ ದಂತೀವ ದಂತಂ ವಿನಾ ।**
**ಪುಷ್ಪಂ ಗಂಧವಿವರ್ಜಿತಂ ಮೃತಪತಿಃ ಸ್ತ್ರೀ ಚೇಹ ತದ್ವನ್ಮುನಿ**
**ಶ್ಚಾರಿತ್ರೇಣ ವಿನಾ ನ ಭಾತಿ ಸತತಂ ಯದ್ಯಪ್ಯಸೌ ಶಾಸ್ತ್ರವಾನ್ ।೨॥**

—"ಚಂದ್ರನಿಲ್ಲದ ರಾತ್ರಿಯೂ, ಕಮಲಸಮೂಹಗಳಿಲ್ಲದ ಸರೋವರವೂ, ವಿದ್ವಾಂಸರಿಲ್ಲದ ಸಭೆಯೂ, ಹಲ್ಲಿಲ್ಲದ ಆನೆಯೂ, ಪರಿಮಳ

ವಿಲ್ಲದ ಪುಷ್ಪವೂ, ವಿಧವೆಯಾದ ಸ್ತ್ರೀಯೂ ಹೇಗೆ ಶೋಭಿಸುವುದಿಲ್ಲವೋ ಹಾಗೆ ಚಾರಿತ್ರವಿಲ್ಲದ ಈ ಮುನಿಯೂ, ಶಾಸ್ತ್ರವುಳ್ಳವನಾದರೂ ಎಂದೂ ಶೋಭಿಸುವುದಿಲ್ಲವು. ಮುನಿಯು ಜ್ಞಾನಿಯಾಗಿದ್ದರೂ ಚಾರಿತ್ರವಿಲ್ಲದಿದ್ದರೆ ಎಂದೂ ಶೋಭಿಸುವುದಿಲ್ಲವೆಂದು ಭಾವವು." ॥೨॥

**ಕಿಂ ವಸ್ತ್ರತ್ಯಜನೇನ ಭೋ ಮುನಿರಸಾವೇತಾವತಾ ಜಾಯತೇ**
**ಕ್ಷ್ವೇಳೇನ ಚ್ಯುತಪನ್ನಗೋ ಗತವಿಷಃ ಕಿಂ ಜಾತವಾನ್ ಭೂತಲೇ ।**
**ಮೂಲಂ ಕಿಂ ತಪಸಃ ಕ್ಷಮೇಂದ್ರಿಯಜಯಃ ಸತ್ಯಂ ಸದಾಚಾರತಾ**
**ರಾಗಾದೀಂಶ್ಚ ಬಿಭರ್ತಿ ಚೇನ್ನ ಸ ಯತಿರ್ಲಿಂಗೀ ಭವೇತ್ಕೇವಲಂ ॥೩॥**

—"ಎಲೈ! ಈ ಮುನಿಯು ವಸ್ತ್ರತ್ಯಾಗದಿಂದ ಇಷ್ಟರಿಂದ ಮುನಿಯಾಗುತ್ತಾನೋ? ಪೊರೆಯನ್ನು ಕಳಚಿದ ಹಾವು ಭೂತಳದಲ್ಲಿ ವಿಷವಿಲ್ಲದುದಾಗಿ ಆಗಿದೆಯೋ? ತಪಸ್ಸಿಗೆ ಮೂಲವಾವುದೆಂದರೆ ಕ್ಷಮೆಯೂ ಇಂದ್ರಿಯಜಯವೂ ಸತ್ಯವೂ ಸದಾಚಾರತೆಯೂ ಆಗಿದೆ. ಅವನು ರಾಗದ್ವೇಷಮೋಹಾದಿಗಳನ್ನು ಧರಿಸಿರುವವನಾಗಿದ್ದರೆ ಮುನಿಯಲ್ಲವು —ಬರೀ ಮುನಿವೇಷಧಾರಿಯಾಗಿರುವನು." ॥೩॥

**ದೇಹೇ ನಿರ್ಮಮತಾ ಗುರೌ ವಿನಯತಾ ನಿತ್ಯಂ ಶ್ರುತಾಭ್ಯಾಸತಾ**
**ಚಾರಿತ್ರೋಜ್ಜ್ವಲತಾ ಮಹೋಪಶಮತಾ ಸಂಸಾರನಿರ್ವೇಗತಾ ।**
**ಅಂತರ್ಬಾಹ್ಯಪರಿಗ್ರಹತ್ಯಜನತಾ ಧರ್ಮಜ್ಞತಾ ಸಾಧುತಾ**
**ಸಾಧೋ ಸಾಧುಜನಸ್ಯ ಲಕ್ಷಣಮಿದಂ ಸಂಸಾರವಿಚ್ಛೇದಕಂ ॥೪॥**

—"ಎಲೈ ಸಾಧುವೆ! ಶರೀರದಲ್ಲಿ ಮಮತ್ವವಿಲ್ಲದಿರುವಿಕೆಯೂ ಗುರುವಿನಲ್ಲಿ ವಿನಯಪರತೆಯೂ ಯಾವಾಗಲೂ ಶಾಸ್ತ್ರಾಧ್ಯಯನವೂ ಚಾರಿತ್ರದಿಂದ ಶೋಭಿತನಾಗಿರುವಿಕೆಯೂ ಉತ್ತಮವಾದ ಸೈರಣೆಯೂ ಸಂಸಾರದಲ್ಲಿ ವೈರಾಗ್ಯಭಾವವೂ ಬಾಹ್ಯಾಭ್ಯಂತರ ಪರಿಗ್ರಹತ್ಯಾಗ

ಭಾವವೂ (೧ ಮಿಥ್ಯಾತ್ವ, ೨ ಕ್ರೋಧ, ೩ ಮಾನ, ೪ ಮಾಯಾ, ೫ ಲೋಭ, ೬ ಹಾಸ್ಯ, ೭ ರತಿ, ೮ ಅರತಿ, ೯ ಶೋಕ, ೧೦ ಭಯ, ೧೧ ಜುಗುಪ್ಸಾ, ೧೨ ಸ್ತ್ರೀವೇದ, ೧೩ ಪುಂವೇದ, ೧೪ ನಪುಂಸಕವೇದ ಗಳೆಂಬೀ ಹದಿನಾಲ್ಕು ಅಂತರಂಗಪರಿಗ್ರಹಗಳಾಗಿವೆ. ೧ ಕ್ಷೇತ್ರ, ೨ ವಾಸ್ತು, ೩ ಹಿರಣ್ಯ, ೪ ಸುವರ್ಣ, ೫ ಧನ, ೬ ಧಾನ್ಯ, ೭ ದಾಸೀ, ೮ ದಾಸ, ೯ ಕುಪ್ಯ, ೧೦ ಭಾಂಡಗಳೆಂಬೀ ಹತ್ತು ಬಾಹ್ಯಪರಿಗ್ರಹ ಗಳಾಗಿವೆ.) ಧರ್ಮವನ್ನು ತಿಳಿದಿರುವಿಕೆಯೂ ಸೌಜನ್ಯವೂ ಸಾಧು-ಜನರಿಗೆ ಭವಭ್ರಮಣರೂಪವಾದ ಸಂಸಾರವನ್ನು ನಾಶಮಾಡುವ ಲಕ್ಷಣಗಳಾಗಿವೆ." ||೪||

**ಕಿಂ ದೀಕ್ಷಾಗ್ರಹಣೇನ ತೇ ಯದಿ ಧನಾಕಾಂಕ್ಷಾ ಭವೇಚ್ಚೇತಸಿ**
**ಕಿಂ ಗಾರ್ಹಸ್ಥ್ಯಮನೇನ ವೇಷಧರಣೇನಾಸುಂದರಂ ಮನ್ಯಸೇ ।**
**ದ್ರವ್ಯೋಪಾರ್ಜನಚಿತ್ತಮೇವ ಕಥಯತ್ಯಭ್ಯಂತರಸ್ಥಾಂಗನಾ**
**ನೋಚೇದರ್ಥಪರಿಗ್ರಹಗ್ರಹಮತಿರ್ಭಿಕ್ಷೋ ನ ಸಂಪದ್ಯತೇ ॥೫॥**

—"ಎಲೈ ಭಿಕ್ಷುವೆ! ನಿನ್ನ ಮನಸ್ಸಿನಲ್ಲಿ ಧನಾಪೇಕ್ಷೆಯಿರುವುದಾದರೆ ನಿರ್ಗ್ರಂಥ ಮುನಿದೀಕ್ಷಾಗ್ರಹಣದಿಂದೇನು ಪ್ರಯೋಜನ? ಈ ಬೆತ್ತಲೆಯ ವೇಷಕ್ಕಿಂತ ವಸ್ತ್ರಾಭೂಷಣಗಳಿಂದಲಂಕೃತವಾದ ಗೃಹಸ್ಥ ವೇಷವು ಕೆಟ್ಟುದೆಂದು ತಿಳಿಯುವೆಯೋ? ಹಣವನ್ನು ಸಂಪಾದಿಸ ಬೇಕೆಂಬ ಮನಸ್ಸೇ ನಿನ್ನಲ್ಲಿ ಸ್ತ್ರೀಕಾಂಕ್ಷೆಯಿದೆಯೆಂಬುದನ್ನು ಹೇಳುತ್ತದೆ. ಇಲ್ಲದಿದ್ದರೆ ಅರ್ಥಪರಿಗ್ರಹವನ್ನು ಸ್ವೀಕರಿಸಬೇಕೆಂಬ ಬುದ್ಧಿಯುಂಟಾಗುವುದಿಲ್ಲವು. ಉದರಪೂರ್ತಿಯಾಗಿ ಆಹಾರವು ಗೃಹಸ್ಥರ ಮನೆಯಲ್ಲಿ ದೊರೆಯುವುದಾದಮೇಲೆ ಮತ್ತೇಕೆ ಧನಾಕಾಂಕ್ಷೆಯೆಂದು ಭಾವವು?" ||೫||

**ಯೋಷಾಷಂಡಕಗೋವಿವರ್ಜಿತಪದೇ ಸಂತಿಷ್ಠ ಭಿಕ್ಷೋ ಸದಾ**
**ಭುಕ್ತ್ವಾಹಾರಮಕಾರಿತಂ ಪರಗೃಹೇ ಲಬ್ಧಂ ಯಥಾಸಂಭವಂ ।**

**ಷಡ್ಯಾವಶ್ಯಕಸತ್ಕ್ರಿಯಾಸು ನಿರತೋ ಧರ್ಮಾನುರಾಗಂ ವಹನ್**
**ಸಾರ್ಧಂ ಯೋಗಿಭಿರಾತ್ಮಭಾವನಪರೋ ರತ್ನತ್ರಯಾಲಂಕೃತಃ ॥೬॥**

—"ಎಲೈ ಭಿಕ್ಷುವೆ! ನೀನು ಯಾವಾಗಲೂ ಸ್ತ್ರೀ ನಪುಂಸಕ ಮತ್ತು ಗೋವುಗಳಿಲ್ಲದ ಸ್ಥಾನದಲ್ಲಿರು. ಬೇರೆಯವರ ಮನೆಯಲ್ಲಿ ದೊರಕಿದ ಮತ್ತು ನಿನಗೋಸ್ಕರ ಮಾಡಲ್ಪಡದಿರುವ ಆಹಾರವನ್ನು ಯೋಗ್ಯತಾನುಸಾರವಾಗಿ—ಭೋಗಾಂತರಾಯಕರ್ಮದ ಕ್ಷಯೋಪಶಮಾನುಸಾರವಾಗಿ ಭುಂಜಿಸಿ ತ್ರಿಕಾಲಸಾಮಾಯಿಕ ತೀರ್ಥಂಕರಸ್ತೋತ್ರ ದೇವವಂದನಾ ಪ್ರತಿಕ್ರಮಣ ಪ್ರತ್ಯಾಖ್ಯಾನ ಕಾಯೋತ್ಸರ್ಗಗಳೆಂಬೀ ಉತ್ತಮ ಷಡಾವಶ್ಯಕಕ್ರಿಯೆಗಳಲ್ಲಿ ಆಸಕ್ತನೂ ಉತ್ತಮ ಕ್ಷಮಾ ಮಾರ್ದವ ಆರ್ಜವ ಶೌಚ ಸತ್ಯ ಸಂಯಮ ತಪಃ ತ್ಯಾಗ ಆಕಿಂಚನ್ಯ ಬ್ರಹ್ಮಚರ್ಯಗಳೆಂಬೀ ದಶಧರ್ಮಗಳಲ್ಲಿ ಅನುರಾಗವನ್ನು ವಹಿಸಿರುವವನೂ ಆತ್ಮಚಿಂತನಾಪರನೂ ಸಮ್ಯಗ್ದರ್ಶನ ಸಮ್ಯಗ್‌ಜ್ಞಾನ ಸಮ್ಯಕ್ಚಾರಿತ್ರಗಳೆಂಬೀ ರತ್ನತ್ರಯದಿಂದಲಂಕೃತನೂ ಆಗಿ ಯೋಗಿಗಳೊಡನೆ ವಾಸಮಾಡು." ॥೬॥

**ದುರ್ಗಂಧಂ ವದನಂ ವಪುರ್ಮಲಭೃತಂ ಭಿಕ್ಷಾಟನಾದ್ಭೋಜನಂ**
**ಶಯ್ಯಾಸ್ಥಂಡಿಲಭೂಮಿಷು ಪ್ರತಿದಿನಂ ಕಟ್ಯಾಂ ನ ತೇ ಕರ್ಪಟಂ ।**
**ಮುಂಡಂ ಮುಂಡಿತಮರ್ಧದಗ್ಧಶವವತ್ತ್ವಂ ದೃಶ್ಯಸೇऽನ್ಯೈರ್ಜನೈಃ**
**ಸಾಧೋऽದ್ಯಾಪ್ಯಬಲಾಜನಸ್ಯ ಭವತೋ ಗೋಷ್ಠೀ ಕಥಂ**
**ಶೋಭತೇ ॥೭॥**

—"ಎಲೈ ಸಾಧುವೆ! ನೀನು ಹಲ್ಲುಗಳನ್ನು ತೊಳೆಯದಿರುವ ನಿಯಮದಿಂದ ನಿನ್ನ ಮುಖವು ದುರ್ಗಂಧವಾಗಿಯೂ ಸ್ನಾನವನ್ನು ಮಾಡಬಾರದೆಂಬ ವಿಧಿಯಿರುವುದರಿಂದ ನಿನ್ನ ದೇಹವು ಕೊಳೆಯುಳ್ಳುದಾಗಿಯೂ ಭಿಕ್ಷಾಟನವನ್ನು ಮಾಡುವುದರಿಂದ ಪ್ರಾಪ್ತವಾಗುವ

ಭೋಜನವೂ ಯಾವಾಗಲೂ ಮರಳುಕಲ್ಲುಗಳುಳ್ಳ ಭೂಮಿಗಳಲ್ಲಿ ಮಲಗುವಿಕೆಯೂ ನಿನ್ನ ಸೊಂಟದಲ್ಲಿ ವಸ್ತ್ರವಿಲ್ಲದಿರುವಿಕೆಯೂ ತಲೆಯು ಬೋಳಿಸಲ್ಪಟ್ಟುದಾಗಿರುವಿಕೆಯೂ ಉಳ್ಳ ನಿನ್ನನ್ನು ಬೇರೆ ಜನರು ಅರ್ಧಭಾಗವು ಸುಡಲ್ಪಟ್ಟ ಹೆಣವನ್ನೋಪಾದಿಯಲ್ಲಿ ಕಾಣುವರು. ನಿನಗೆ ಈಗಲೂ ಹೆಂಗುಸರ ಗೋಷ್ಠಿ (ಸಭೆ) ಯು ಹೇಗೆ ಶೋಭಿಸುತ್ತದೆ ?" ||೭||

**ಅಂಗಂ ಶೋಣಿತಶುಕ್ರಸಂಭವಮಿದಂ ಮೇದೋಸ್ಥಿಮಜ್ಜಾಕುಲಂ**
**ಬಾಹ್ಯೇ ಮಾಕ್ಷಿಕಪತ್ರಸನ್ನಿಭಮಹೋ ಚರ್ಮಾವೃತಂ ಸರ್ವತಃ ।**
**ನೋಚೇತ್ಕಾಕಬಕಾದಿಭಿರ್ವಪುರಹೋ ಜಾಯೇತ ಭಕ್ಷ್ಯಂ ಧ್ರುವಂ**
**ದೃಷ್ಟ್ವಾದ್ಯಾಪಿ ಶರೀರಸದ್ಮನಿ ಕಥಂ ನಿರ್ವೇಗತಾ ನಾಸ್ತಿ ತೇ** ||೮||

—"ಎಲೈ ಸಾಧುವೆ ! ನಿನಗೆ ಶರೀರವೆಂಬ ಮನೆಯಲ್ಲಿ ವೈರಾಗ್ಯವೇಕಿಲ್ಲ ? ಆಶ್ಚರ್ಯ ! ಈ ದೇಹವು ತಾಯಿಯ ರಕ್ತದಿಂದಲೂ ತಂದೆಯ ವೀರ್ಯದಿಂದಲೂ ಉಂಟಾದುದಾಗಿದೆ. ಮೇದಸ್ಸು (ನರ) ಮೂಳೆ ಮಜ್ಜಾ—ದೇಹಸಾರಗಳಿಂದ ವ್ಯಾಪ್ತವಾಗಿದೆ. ಹೊರಗೆ ನೊಣದ ರೆಕ್ಕೆಗೆ ಸಮಾನವಾದ ಚರ್ಮದಿಂದ ಎಲ್ಲಾ ಕಡೆಗಳಿಂದಲೂ ಆವರಿಸಲ್ಪಟ್ಟಿದೆ. ಇಲ್ಲದಿದ್ದರೆ ಕಾಗೆ ಕೊಕ್ಕರೆ ಮೊದಲಾದುವುಗಳಿಗೆ ನಿಶ್ಚಯವಾಗಿ ಭಕ್ಷ್ಯವಾಗುತ್ತಿದ್ದಿತು. ಆಶ್ಚರ್ಯ !" ||೮||

**ದುರ್ಗಂಧಂ ನವಭಿರ್ವಪುಃ ಪ್ರವಹತಿ ದ್ವಾರೈರಿದಂ ಸಂತತಂ**
**ತದ್ದೃಷ್ಟ್ವಾಪಿ ಚ ಯಸ್ಯ ಚೇತಸಿ ಪುನರ್ನಿರ್ವೇಗತಾ ನಾಸ್ತಿ ಚೇತ್ ।**
**ತಸ್ಯಾನ್ಯದ್ಭುವಿ ವಸ್ತು ಕೀದೃಶಮಹೋ ತತ್ಕಾರಣಂ ಕಥ್ಯತಾಂ**
**ಶ್ರೀಖಂಡಾದಿಭಿರಂಗಸಂಸ್ಕೃತಿರಿಯಂ ವ್ಯಾಖ್ಯಾತಿ ದುರ್ಗಂಧತಾಂ**
||೯||

—"ಎಲೈ ಮುನಿಯೆ ! ಈ ಶರೀರವು ಒಂಬತ್ತು ಬಾಗಿಲುಗಳಿಂದ (ಗುದ-ಶಿಶ್ನ-ಬಾಯಿ-ಮೂಗಿನ ಹೊಳ್ಳೆಗಳು-ಕಣ್ಣುಗಳು-ಕಿವಿಗಳು)

ಯಾವಾಗಲೂ ದುರ್ಗಂಧವನ್ನು ಹರಿಸುತ್ತಿರುವುದು. ಅದನ್ನು ನೋಡಿಯೂ ಯಾವನ ಮನಸ್ಸಿನಲ್ಲಿ ವೈರಾಗ್ಯವುಂಟಾಗುವುದಿಲ್ಲವೋ ಅವನಿಗೆ ಭೂಮಿಯ ಮೇಲೆ ವೈರಾಗ್ಯವನ್ನುಂಟುಮಾಡುವ ಎಂತಹ ವಸ್ತುವಿರುವುದು ? ಆಶ್ಚರ್ಯ ! ವೈರಾಗ್ಯವುಂಟಾಗದಿರಲು ಕಾರಣ ವಾವುದು ಹೇಳಲ್ಪಡಲಿ. ಶ್ರೀಗಂಧ ಮೊದಲಾದುವುಗಳಿಂದ ಈ ಶರೀರ ಸಂಸ್ಕಾರವು ದೇಹದಲ್ಲಿ ದುರ್ಗಂಧವಿರುವಿಕೆಯನ್ನು ತಿಳಿಸುತ್ತದೆ. ಗಂಧ ಪುಷ್ಪ ಮೊದಲಾದ ಸುಗಂಧವಸ್ತುಗಳು ಮನುಷ್ಯದೇಹವನ್ನು ಸೋಂಕಿ ದುರ್ಗಂಧವುಳ್ಳವಾಗುವುದರಿಂದ ಈ ದೇಹವು ದುರ್ಗಂಧ ವೆಂಬುದನ್ನು ತಿಳಿಸುತ್ತವೆಂದು ಭಾವವು." ||೯||

**ಸ್ತ್ರೀಣಾಂ ಭಾವವಿಲಾಸವಿಭ್ರಮಗತಿಂ ದೃಷ್ಟ್ವಾನುರಾಗಂ ಮನಾಕ್**
**ಮಾಗಾಸ್ತ್ವಂ ವಿಷವೃಕ್ಷಪಕ್ವಫಲವತ್ಸುಸ್ವಾದವಂತ್ಯಸ್ತದಾ ।**
**ಈಷತ್ಸೇವನಮಾತ್ರತೋಽಪಿ ಮರಣಂ ಪುಂಸಾಂ ಪ್ರಯಚ್ಛಂತಿ ಭೋಃ**
**ತಸ್ಮಾದ್ದೃಷ್ಟಿವಿಷಾಹಿವತ್ಪರಿಹರ ತ್ವಂ ದೂರತೋ ಮೃತ್ಯವೇ ||೧೦||**

—"ಎಲೈ ಭಿಕ್ಷುವೆ ! ನೀನು ಸ್ತ್ರೀಯರ ಹಾವ ಭಾವ-ವಿಲಾಸ-ವಿಭ್ರಮ ಗಮನಗಳನ್ನು ನೋಡಿ ಸ್ವಲ್ಪಾನುರಾಗವನ್ನೂ ಹೊಂದ ಬೇಡ. ಮೊದಮೊದಲು ಅವು ವಿಷವೃಕ್ಷದ ಹಣ್ಣುಗಳಂತೆ ರುಚಿಕರ ವಾಗಿರುತ್ತವೆ. ಆ ಫಲಗಳ ಸ್ವಲ್ಪ ಸೇವನೆಯಿಂದಲೂ ಅವು ಮನುಷ್ಯ ರಿಗೆ ಮರಣವನ್ನು ಕೊಡುತ್ತವೆ. ಆದುದರಿಂದ ದೃಷ್ಟಿವಿಷವುಳ್ಳ ಹಾವನ್ನು ದೂರದಲ್ಲಿ ತ್ಯಜಿಸುವಂತೆ, ಸ್ತ್ರೀಯರನ್ನು ದೂರವಾಗಿ ತ್ಯಜಿಸು." ||೧೦||

**ಯದ್ಯದ್ವಾಂಛತಿ ತತ್ತದೇವ ವಪುಷೇ ದತ್ತಂ ಸುಪುಷ್ಟಂ ತ್ವಯಾ**
**ಸಾರ್ಧಂ ನೈತಿ ತಥಾಪಿ ತೇ ಜಡಮತೇ ಮಿತ್ರಾದಯೋ ಯಾಂತಿ ಕಿಂ ।**
**ಪುಣ್ಯಂ ಪಾಪಮಿತಿ ದ್ವಯಂ ಚ ಭವತಃ ಪೃಷ್ಠೇಽನುಯಾತೀಹ ತೇ**

**ತಸ್ಮಾನ್ಮಾಸ್ಮ ಕೃಥಾ ಮನಾಗಪಿ ಭವಾನ್ ಮೋಹಂ**
**ಶರೀರಾದಿಷು ॥೧೧॥**

—"ಎಲೈ ಜಡಮತಿಯೆ! ಯಾವ ಯಾವ ವಸ್ತುವನ್ನು ಈ ಶರೀರವು ಇಚ್ಛಿಸುತ್ತದೆಯೋ ಪುಷ್ಟಿಕರವಾದ ಆಯಾ ವಸ್ತುವನ್ನೇ ನೀನು ಈ ದೇಹಕ್ಕೆ ಕೊಟ್ಟು ಪೋಷಿಸಿದೆ. ಆದರೂ ಇದು ನಿನ್ನೊಡನೆ ಬರುವುದಿಲ್ಲ. ಅಂದಮೇಲೆ ಗೆಳೆಯರು ಮೊದಲಾದವರು ನಿನ್ನೊಡನೆ ಬರುವರೇನು? ಈ ಲೋಕದಲ್ಲಿ ಮಾಡಿದ ಪುಣ್ಯ-ಪಾಪಗಳೊಂದೇ ನಿನ್ನ ಹಿಂದೆ ಬರುವುದು. ಆದುದರಿಂದ ನೀನು ದೇಹ ಮೊದಲಾದುವುಗಳಲ್ಲಿ ಸ್ವಲ್ಪವೂ ಮೋಹವನ್ನು ಮಾಡಬೇಡ." ॥೧೧॥

**ಶೋಚಂತೇ ನ ಮೃತಂ ಕದಾಪಿ ವನಿತಾ ಯದ್ಯಸ್ತಿ ಗೇಹೇ ಧನಂ**
**ತಚ್ಚೇನ್ನಾಸ್ತಿ ರುದಂತಿ ಜೀವನಧಿಯಾ ಸ್ಮೃತ್ವಾ ಪುನಃ ಪ್ರತ್ಯಹಂ ।**
**ಕೃತ್ವಾ ತದ್ದಹನಕ್ರಿಯಾಂ ನಿಜನಿಜವ್ಯಾಪಾರಚಿಂತಾಕುಲಾಃ**
**ತನ್ನಾಮಾಪಿ ಚ ವಿಸ್ಮರಂತಿ ಕತಿಭಿಃ ಸಂವತ್ಸರೈರ್ಯೋಷಿತಃ ॥೧೨॥**

—"ಎಲೈ ಜೀವನೆ! ಮನೆಯಲ್ಲಿ ಧನವಿದ್ದರೆ ಸ್ತ್ರೀಯರು ಸತ್ತವನನ್ನು ಕುರಿತು ಎಂದೂ ದುಃಖಪಡುವುದಿಲ್ಲ; ಅದಿಲ್ಲದಿದ್ದರೆ ಮುಂದೆ ಜೀವಿಸಬೇಕೆಂಬ ಆಸೆಯಿಂದ ಪ್ರತಿದಿನವೂ ಸ್ಮರಿಸಿಕೊಂಡು ಮತ್ತೆ ಅಳುತ್ತಾರೆ. ಸತ್ತವನ ದಹನಕ್ರಿಯೆಯನ್ನು ಮಾಡಿ ತಂತಮ್ಮ ಕೆಲಸಗಳ ಯೋಚನೆಯಲ್ಲಿ ಆಸಕ್ತರಾದ ಆ ಸ್ತ್ರೀಯರು ಕೆಲವು ವರ್ಷಗಳಲ್ಲಿ ಅವನ ಹೆಸರನ್ನೂ ಮರೆತುಬಿಡುತ್ತಾರೆ." ॥೧೨॥

**ಅಷ್ಟಾವಿಂಶತಿಭೇದಮಾತ್ಮನಿ ಪುರೈವಾರೋಪ್ಯ ಸಾಧೋ ವ್ರತಂ**
**ಸಾಕ್ಷೀಕೃತ್ಯ ಜಿನಾನ್ ಗುರೂನಪಿ ಕಿಯತ್ಕಾಲಂ ತ್ವಯಾ ಪಾಲಿತಂ ।**
**ಭಕ್ತುಂ ವಾಂಛಸಿ ಶೀತವಾತವಿಹತೋ ಭೂತ್ವಾಽಧುನಾ ತದ್ವ್ರತಂ**
**ದಾರಿದ್ರ್ಯೋಪಹತಃ ಸ್ವವಾಂತಮಶನಂ ಭುಂಕ್ತೇ**
**ಕ್ಷುಧಾರ್ತೋಽಪಿ ಕಿಂ ॥೧೩॥**

—"ಎಲೈ ಸಾಧುವೆ! ಮೊತ್ತಮೊದಲು ನೀನು ನಿನ್ನಲ್ಲಿ ಇಪ್ಪ-ತ್ತೆಂಟು (೧ ಅಹಿಂಸಾ, ೨ ಸತ್ಯ, ೩ ಅಚೌರ್ಯ, ೪ ಬ್ರಹ್ಮಚರ್ಯ, ೫ ಪರಿಗ್ರಹತ್ಯಾಗಮಹಾವ್ರತ, ೬ ಈರ್ಯಾಸಮಿತಿ, ೭ ಭಾಷಾ ಸಮಿತಿ, ೮ ಏಷಣಸಮಿತಿ, ೯ ಆದಾನನಿಕ್ಷೇಪಣಸಮಿತಿ, ೧೦ ವ್ಯುತ್ಸರ್ಗ ಸಮಿತಿ, ೧೧ ಸ್ಪರ್ಶನ, ೧೨ ರಸನಾ, ೧೩ ಘ್ರಾಣ, ೧೪ ಚಕ್ಷುಃ ೧೫ ಶ್ರೋತ್ರನಿಗ್ರಹ, ೧೬ ಸಾಮಾಯಿಕ, ೧೭ ತೀರ್ಥಂಕರಸ್ತವನ, ೧೮ ವಂದನಾ, ೧೯ ಪ್ರತಿಕ್ರಮಣ, ೨೦ ಪ್ರತ್ಯಾಖ್ಯಾನ, ೨೧ ಕಾಯೋತ್ಸರ್ಗ, ೨೨ ಭೂಮಿಶಯನ, ೨೩ ಅಸ್ನಾನ, ೨೪ ಅದಂತ ಧಾವನ, ೨೫ ನಗ್ನತ್ವ, ೨೬ ಕೇಶಲೋಚ, ೨೭ ಸ್ಥಿತಿಭೋಜನ, ೨೮ ಏಕಭೋಜನ) ಮೂಲಗುಣರೂಪವಾದ ವ್ರತವನ್ನು ಜಿನರ ಮತ್ತು ಗುರುಗಳ ಮುಂದೆ ಧಾರಣಮಾಡಿ ಕೆಲವು ಕಾಲ ಪಾಲಿಸಿದೆ. ಈಗ ಚಳಿಗಾಳಿಗಳಿಂದ ಪೀಡಿತನಾಗಿ ಆ ವ್ರತವನ್ನು ಬಿಡಲಿಚ್ಛಿಸುವೆ. ಆದರೆ ಒಬ್ಬ ಮನುಷ್ಯನು ಬಡತನದಿಂದ ಪೀಡಿತನೂ ಹಸಿವೆಯಿಂದ ದುಃಖಿತನೂ ಆದರೂ ತಾನು ವಮನಮಾಡಿದ ಆಹಾರವನ್ನು ಭುಂಜಿಸುತ್ತಾನೆಯೋ ? ತಾನು ವಮನಮಾಡಿದ ಆಹಾರವನ್ನು ಭುಂಜಿಸಲೆಳಸದಿರುವಂತೆ ತಾನು ಬಿಟ್ಟ ಪರಿಗ್ರಹವನ್ನು ಮತ್ತೆ ಬಯಸಬಾರದೆಂದು ಭಾವವು." ॥೧೩॥

**ಅನ್ಯೇಷಾಂ ಮರಣಂ ಭವಾನಗಣಯನ್ ಸ್ವಸ್ಯಾಮರತ್ವಂ ಸದಾ**
**ದೇಹಿನ್ ಚಿಂತಯಸೀಂದ್ರಿಯದ್ವಿಪವಶೀ ಭೂತ್ವಾ ಪರಿಭ್ರಾಮ್ಯಸಿ ।**
**ಅದ್ಯ ಶ್ವಃ ಪುನರಾಗಮಿಷ್ಯತಿ ಯಮೋ ನ ಜ್ಞಾಯತೇ ತತ್ತ್ವತಃ**
**ತಸ್ಮಾದಾತ್ಮಹಿತಂ ಕುರು ತ್ವಮಚಿರಾತ್ ಧರ್ಮಂ**
**ಜಿನೇಂದ್ರೋದಿತಂ ॥೧೪॥**

—"ಎಲೈ ಆತ್ಮನೆ ! ನೀನು ಬೇರೆಯವರ ಮರಣವನ್ನು ಯೋಚಿಸದೆ ನಿನಗೆ ಯಾವಾಗಲೂ ಮರಣವಿಲ್ಲವೆಂದೇ ತಿಳಿಯುವೆ. ನೀನು

ಇಂದ್ರಿಯಗಳೆಂಬ ಆನೆಗಳಿಗೆ ವಶವರ್ತಿಯಾಗಿ ಸಂಸಾರದಲ್ಲಿ ಅಲೆಯುವೆ. ಮತ್ತೆ ನಿಜವಾಗಿ ಇಂದೋ ನಾಳೆಯೋ ಯಮನು ಬರುವನೆಂದು ತಿಳಿಯುವುದಿಲ್ಲ. ಆದುದರಿಂದ ನೀನು ಆತ್ಮಹಿತಕರವಾದ ಮತ್ತು ಜಿನೇಶ್ವರರಿಂದ ಹೇಳಲ್ಪಟ್ಟಿರುವ ಧರ್ಮವನ್ನು ಶೀಘ್ರವಾಗಿ ಮಾಡು." ||೧೪||

**ಸೌಖ್ಯಂ ವಾಂಛಸಿ ಕಿಂ ತ್ವಯಾ ಗತಭವೇ ದಾನಂ ತಪೋ ವಾ ಕೃತಂ**
**ನೋಚೇತ್ತ್ವಂ ಕಿಮಿಹೈವಮೇವ ಲಭಸೇ ಲಬ್ಧಂ ತದತ್ರಾಗತಂ ।**
**ಧಾನ್ಯಂ ಕಿಂ ಲಭತೇ ವಿನಾಪಿವಪನಂ ಲೋಕೇ ಕುಟುಂಬೀಜನೋ**
**(ಧರ್ಮಂ ಸಮಾರೋಪಯ)**
**ದೇಹೇ ಕೀಟಕಭಕ್ಷಿತೇಕ್ಷುಸದೃಶೇ ಮೋಹಂ ವೃಥಾ ಮಾ ಕೃಥಾ**
**॥೧೫॥**

—"ಎಲೈ ಜೀವನೆ! ಸೌಖ್ಯವನ್ನು ಇಚ್ಛಿಸುವೆ. ಕಳೆದ ಜನ್ಮದಲ್ಲಿ ನೀನು ಸೌಖ್ಯಕ್ಕೆ ಕಾರಣವಾದ ದಾನವನ್ನಾಗಲಿ ತಪಸ್ಸನ್ನಾಗಲಿ ಮಾಡಿರುವೆಯೋ ? ನೀನು ಮಾಡಿಲ್ಲವಾದರೆ ಈ ಲೋಕದಲ್ಲಿ ನಿನಗೆ ಸುಖವು ಹೇಗೆ ದೊರೆಯುವುದು ? ನೀನು ಪೂರ್ವಭವದಲ್ಲಿ ಮಾಡಿರುವುದಕ್ಕನುಸಾರವಾಗಿ ಈ ಭವದಲ್ಲಿ ದೊರೆತಿದೆ. ಲೋಕದಲ್ಲಿ ರೈತನು ಧಾನ್ಯವನ್ನು ಬಿತ್ತದೆಯೇ ಪಡೆಯುತ್ತಾನೆಯೋ ? ಆದುದರಿಂದ ನೀನು ಕ್ರಿಮಿಗಳಿಂದ ಭಕ್ಷಿತವೂ ಕಬ್ಬಿಗೆ ಸಮಾನವೂ ಆದ ಈ ಶರೀರದಲ್ಲಿ ವ್ಯರ್ಥವಾಗಿ ಮೋಹವನ್ನು ಮಾಡಬೇಡ." ||೧೫||

**ಆಯುಷ್ಯಂ ಶತ ನಿದ್ರಯಾರ್ಧಮಪರಂ ಚಾಯುಸ್ತ್ರಿಭೇದಾದಹೋ**
**ಬಾಲತ್ವಾಜ್ಜರಯಾಕಿಯದ್ವ್ಯಸನತೋ ಯಾತೀತಿ ದೇಹಿನ್ ವೃಥಾ ।**
**ನಿಶ್ಚಿತ್ಯಾತ್ಮನಿ ಮೋಹಪಾಶಮಧುನಾ ಸಂಭಿದ್ಯ ಬೋಧಾಸಿನಾ**
**ಮುಕ್ತಿಶ್ರೀವನಿತಾವಶೀಕರಣಕೃಚ್ಚಾರಿತ್ರಮಾರಾಧಯ ।೧೬॥**

—“ಎಲೈ ಪ್ರಾಣಿಯೆ ! ವ್ಯರ್ಥವಾಗಿ ನಿನ್ನ ಅರ್ಧಾಯುಷ್ಯವು ನಿದ್ರೆಯಿಂದ ಕಳೆಯಿತು. ಆಶ್ಚರ್ಯ ! ಬೇರೆಯರ್ಧಾಯುಷ್ಯವು ಮೂರು ಭೇದವಾಗಿ ಅವುಗಳಲ್ಲಿ ಒಂದು ಭಾಗವು ಬಾಲ್ಯದಿಂದ ಕಳೆಯಿತು. ಮತ್ತೊಂದು ಭಾಗವು ವೃದ್ಧಾಪ್ಯದಿಂದ ಕಳೆಯಿತು. ಉಳಿದ ಭಾಗವು ಹಲವು ವ್ಯಸನಗಳಿಂದ ಕಳೆಯಿತು. ಹೀಗೆ ನೀನು ನಿಶ್ಚಯಿಸಿ ತಿಳಿವಳಿಕೆಯೆಂಬ ಖಡ್ಗದಿಂದ ಆತ್ಮನಲ್ಲಿರುವ ಮೋಹಪಾಶವನ್ನು ಕತ್ತರಿಸಿ ಈಗ ಮೋಕ್ಷಲಕ್ಷ್ಮಿಯೆಂಬ ಸ್ತ್ರೀಯನ್ನು ವಶಪಡಿಸತಕ್ಕ ಚಾರಿತ್ರವನ್ನು ಆರಾಧಿಸು.” ||೧೬||

**ಯತ್ಕಾಲೇ ಲಘುಪಾತ್ರಮಂಡಿತಕರೋ ಭೂತ್ವಾ ಪರೇಷಾಂ ಗೃಹೇ**
**ಭಿಕ್ಷಾರ್ಥಂ ಭ್ರಮಸೇ ತದಾ ಹಿ ಭವತೋ ಮಾನಾಪಮಾನೇನ ಕಿಂ ।**
**ಭಿಕ್ಷೋ ತಾಮಸವೃತ್ತಿತಃ ಕದಶನಾತ್ ಕಿಂ ತಪ್ಯಸೇಽಹರ್ನಿಶಂ**
**ಶ್ರೇಯೋರ್ಥಂ ಕಿಲ ಸಹ್ಯತೇ ಮುನಿವರೈರ್ಬಾಧಾಃ**
**ಕ್ಷುಧಾದ್ಯುದ್ಭವಾಃ ॥೧೭॥**

—“ಎಲೈ ಭಿಕ್ಷುವೆ ! ಯಾವ ಕಾಲದಲ್ಲಿ ನೀನು ಕಮಂಡಲದಿಂದ ಭೂಷಿತವಾದ ಹಸ್ತವುಳ್ಳವನಾಗಿ ಬೇರೆಯವರ ಮನೆಯಲ್ಲಿ ಭಿಕ್ಷೆಗೋಸ್ಕರ ಅಲೆಯುತ್ತಿದ್ದಿಯೋ ಆಗ ನಿಜವಾಗಿ ನಿನಗೆ ಮಾನಾಪಮಾನದಿಂದೇನು ? ಗೃಹಸ್ಥರು ನೀರಸವಾದ ಪದಾರ್ಥವನ್ನು ಕೊಟ್ಟರೂ ಮನೋವಿಕಾರವನ್ನು ಹೊಂದಬಾರದೆಂದು ಭಾವವು. ನೀನು ಮೋಹದಿಂದ ದುರಾಹಾರಕ್ಕಾಗಿ ಯಾವಾಗಲೂ ಏಕೆ ದುಃಖಪಡುವೆ? ಮುನಿಶ್ರೇಷ್ಠರು ಒಳ್ಳೆಯದಕ್ಕೋಸ್ಕರವಲ್ಲವೇ ಹಸಿವೆ ಮೊದಲಾದುವುಗಳಿಂದುಂಟಾದ ಬಾಧೆಗಳನ್ನು ಸಹಿಸುತ್ತಾರೆ ? ಮುನಿಶ್ರೇಷ್ಠರು ಕರ್ಮಕ್ಷಯನಿಮಿತ್ತವಾಗಿ ಬಾಧೆಗಳನ್ನು ಸಹಿಸುತ್ತಾರೆಂದರ್ಥವು.” ||೧೭||

**ಏಕಾಕೀ ವಿಹರತ್ಯನಾವೃತಬಲೀಬರ್ದೋ ಯಥಾ ಸ್ವೇಚ್ಛಯಾ**
**ಯೋಷಾಮಧ್ಯರತಸ್ತಥಾ ತ್ವಮಪಿ ಭೋ ತ್ಯಕ್ತ್ವಾತ್ಮಯೂಥಂ**
**ಯತೇ ।**
**ತಸ್ಮಿಂಶ್ಚೇದಭಿಲಾಷತಾ ನ ಭವತಃ ಕಿಂ ಭ್ರಾಮ್ಯಸಿ ಪ್ರತ್ಯಹಂ**
**ಮಧ್ಯೇ ಸಾಧುಜನಸ್ಯ ತಿಷ್ಠಸಿ ನ ಕಿಂ ಧೃತ್ವಾ ಸದಾಚಾರತಾಂ ॥೧೮।**

—"ಎಲೈ ಯತಿಯೆ ! ಬಂಧನರಹಿತವಾದ ಗೂಳಿಯು ಸ್ವೇಚ್ಛೆಯಿಂದ ಹೇಗೆ ತನ್ನ ಜಾತಿಯ ಗೋವುಗಳ ಮಧ್ಯದಲ್ಲಿ ಏಕಾಕಿಯಾಗಿ ವಿಹರಿಸುತ್ತದೆಯೋ ಹಾಗೆ ನೀನೂ ನಿನ್ನ ಯತಿಸಮೂಹವನ್ನು ಬಿಟ್ಟು ಸ್ತ್ರೀಯರ ಮಧ್ಯದಲ್ಲಿ ಆಸಕ್ತನಾಗಿ ಒಬ್ಬನೇ ವಿಹರಿಸುವೆ. ನಿನಗೆ ಸ್ತ್ರೀಯರ ಮಧ್ಯದಲ್ಲಿ ಆಸಕ್ತನಾಗಿರಲು ಅಭಿಲಾಷೆಯಿಲ್ಲದಿದ್ದರೆ ಯಾವಾಗಲೂ ಏತಕ್ಕೆ ಅಲೆಯುತ್ತಿರುವೆ? ಸದಾಚಾರತೆಯನ್ನು ಧರಿಸಿ ಸಾಧುಜನರ ಮಧ್ಯದಲ್ಲೇಕಿರುವುದಿಲ್ಲ ?" ॥೧೮॥

**ಕ್ರೀತಾನ್ನಂ ಭವತೋ ಭವೇತ್ ಕದಶನಂ ರೋಷಸ್ತದಾ ಶ್ಲಾಘ್ಯತೇ**
**ಭಿಕ್ಷಾಯಾಂ ಯದವಾಪ ತೇ ಯತಿಜನೈಸ್ತದ್ಭುಜ್ಯತೇಽತ್ಯಾದರಾತ್ ।**
**ಭಿಕ್ಷೋ ಭಾಟಕಸದ್ಮಸನ್ನಿಭತನೋಃ ಪುಷ್ಟಿಂ ವೃಥಾ ಮಾಕೃಥಾಃ**
**ಪೂರ್ಣೇ ಕಿಂ ದಿವಸಾವಧೌ ಕ್ಷಣಮಪಿ ಸ್ಥಾತುಂ**
**ಯಮೋ ದಾಸ್ಯತಿ ॥೧೯॥**

—"ಎಲೈ ಭಿಕ್ಷುವೆ ! ನಿನ್ನ ಆಹಾರವನ್ನು ನೀನು ಬೆಲೆಗೆ ತೆಗೆದುಕೊಂಡಿದ್ದರೆ ಅಂತಹ ದುರಾಹಾರಕ್ಕಾಗಿ ಕೋಪವನ್ನು ಮಾಡುವುದು ನ್ಯಾಯವಾಗಿದ್ದಿತು. ಹಾಗಿಲ್ಲದಿರುವುದರಿಂದ ಭಿಕ್ಷೆಯಲ್ಲಿ ಯಾವುದು ದೊರೆಯುವುದೋ ಅದು ಯತಿಜನರಿಂದ ಆದರಪೂರ್ವಕವಾಗಿ ಭುಂಜಿಸಲ್ಪಡತಕ್ಕುದಾಗಿದೆ. ಬಾಡಿಗೆಯ ಮನೆಗೆ ಸಮಾನವಾದ ದೇಹವನ್ನು ವ್ಯರ್ಥವನ್ನಾಗಿ ಮಾಡಬೇಡ. ಆಯುಷ್ಯವು ತೀರಿದಮೇಲೆ ಒಂದು ಕ್ಷಣಕಾಲವೂ ಆತ್ಮನು ಈ ದೇಹದಲ್ಲಿ ನಿಲ್ಲುವುದಕ್ಕೆ ಯಮನು ಬಿಡು

ತ್ತಾನೆಯೇ? ಆಯುಷ್ಯವು ತೀರಿದಮೇಲೆ ಒಂದು ಕ್ಷಣಕಾಲವೂ ದೇಹದಲ್ಲಿ ಆತ್ಮನಿರುವುದಿಲ್ಲವೆಂದು ಭಾವವು." ||೧೯||

**ಲಬ್ಧ್ವಾರ್ಥಂ ಯದಿ ದಾನಧರ್ಮವಿಷಯೇ ದಾತುಂ ನ ಯೈಃಶಕ್ಯತೇ**
**ದಾರಿದ್ರ್ಯೋಪಹತಾಸ್ತಥಾಪಿ ವಿಷಯಾಸಕ್ತಿಂ ನ ಮುಂಚಂತಿಯೇ।**
**ಧೃತ್ವಾ ಯೇ ಚರಣಂ ಜಿನೇಂದ್ರಗದಿತಂ ತಸ್ಮಿನ್ಸದಾ ನಾದರಾಃ**
**ತೇಷಾಂ ಜನ್ಮ ನಿರರ್ಥಕಂ ಗತಮಜಾಕಂಠೇ ಸ್ತನಾಕಾರವತ್ ||೨೦||**

—"ಯಾರು ಧನವನ್ನು ಪಡೆದೂ ದಾನದಲ್ಲಿಯೂ ಧಾರ್ಮಿಕ ವಿಷಯದಲ್ಲಿಯೂ ವೆಚ್ಚಮಾಡುವುದಕ್ಕೆ ಸಮರ್ಥರಾಗುವುದಿಲ್ಲವೋ ಹಾಗಿದ್ದರೂ ಬಡತನದಿಂದ ಪೀಡಿತರಾಗಿ ಯಾರು ವಿಷಯಾಸಕ್ತಿಯನ್ನು ಬಿಡುವುದಿಲ್ಲವೋ ಯಾರು ಜಿನೇಶ್ವರರಿಂದ ಉಪದಿಷ್ಟವಾದ ಚಾರಿತ್ರವನ್ನು ಧರಿಸಿ ಅದರಲ್ಲಿ ಯಾವಾಗಲೂ ಪ್ರೀತಿಯಿಲ್ಲದವರಾಗಿರುತ್ತಾರೋ ಅವರ ಜನ್ಮವು ಆಡಿನ ಕುತ್ತಿಗೆಯಲ್ಲಿರುವ ಕುಚಾಕಾರದಂತೆ ವ್ಯರ್ಥವಾಗಿ ಕಳೆದುಹೋಯಿತು." ||೨೦||

**ಲಬ್ಧ್ವಾ ಮಾನುಷಜಾತಿಮುತ್ತಮಕುಲಂ ರೂಪಂಚ ನೀರೋಗತಾಂ**
**ಬುದ್ಧಿಂ ಧೀ ಜನಸೇವನಂ ಸುಚರಣಂ ಶ್ರೀಮಜ್ಜಿನೇಂದ್ರೋದಿತಂ।**
**ಲೋಭಾರ್ಥಂ ವಸುಪೂರ್ಣಭೈತ್ರಭಿದಿವತ್ ಸ್ತೋಕಾಯ**
**ಸೌಖ್ಯಾಯ ಭೋ**
**ದೇಹಿನ್ ದೇಹಸುಪೋತಕಂ ಗುಣಭೃತಂ ಭೇತ್ತುಂ**
**ಕಿಮಿಚ್ಛಸಿ ತೇ ||೨೧||**

—"ಎಲೈ ಆತ್ಮನೆ! ನೀನು ಮನುಷ್ಯಜಾತಿಯನ್ನೂ ಉತ್ತಮ ಕುಲವನ್ನೂ ರೂಪವನ್ನೂ ನೀರೋಗತ್ವವನ್ನೂ ಬುದ್ಧಿಯನ್ನೂ ಬುದ್ಧಿಶಾಲಿಗಳಾದ ಜನರ ಉಪಾಸನೆಯನ್ನೂ ಶ್ರೀ ಜಿನೇಶ್ವರರಿಂದ ಉಪದಿಷ್ಟವಾದ ಉತ್ತಮ ಚಾರಿತ್ರವನ್ನೂ ಪಡೆದೂ ಲೋಭನಿಮಿತ್ತವಾಗಿ

ಸ್ವಲ್ಪ ಸುಖಕ್ಕೋಸ್ಕರ, ಧನದಿಂದ ಪರಿಪೂರ್ಣವಾದ ಹಡಗವನ್ನು ಒಡೆದುಹಾಕುವಂತೆ, ಗುಣಗಳಿಂದ ಪರಿಪೂರ್ಣವಾದ ಶರೀರವೆಂಬ ಒಳ್ಳೆಯ ಹಡಗವನ್ನು ಒಡೆದುಹಾಕುವುದಕ್ಕೆ ನಿನಗಿಚ್ಛೆಯಿದೆಯೇ? ಗುಣಗಳಿಂದ ಪರಿಪೂರ್ಣವಾದ ದೇಹವನ್ನು ಅಲ್ಪ ಸುಖಕ್ಕೋಸ್ಕರ ವ್ಯರ್ಥವಾಗಿ ಕಳೆದುಕೊಳ್ಳಬೇಡವೆಂದು ಭಾವವು." ||೨೦||

**ಬೇತಾಲಾಕೃತಿಮರ್ಧದಗ್ಧಮೃತಕಂ ದೃಷ್ಟ್ವಾ ಭವಂತಂ ಯತೇ**
**ಯಾಸಾಂ ನಾಸ್ತಿ ಭಯಂ ತ್ವಯಾ ಸಮಮಹೋ ಜಲ್ಪಂತಿ**
**ತಾಸ್ತತ್ಪುನಃ ।**
**ರಾಕ್ಷಸ್ಯೋ ಭುವನೇ ಭವಂತಿ ವನಿತಾ ಮಾಮಾಗತಾ ಭಕ್ಷಿತುಂ**
**ಮತ್ವೈವಂ ಪ್ರಪಲಾಯತಾಂ ಮೃತಿಭಯಾತ್ ತ್ವಂ ತತ್ರ**
**ಮಾಸ್ಥಾಃ ಕ್ಷಣಂ ||೨೧||**

—"ಎಲೈ ಯತಿಯೆ! ಬೇತಾಳಾಕಾರವುಳ್ಳವನೂ ಅರ್ಧದಗ್ಧ ಮೃತನಂತಿರುವವನೂ ಆದ ನಿನ್ನನ್ನು ನೋಡಿ ಯಾರಿಗೆ ಭಯವಿಲ್ಲವೋ ಅವರು ನಿನ್ನೊಡನೆ ಮಾತನಾಡುತ್ತಾರೆ. ಆಶ್ಚರ್ಯ! ಮತ್ತೆ "ಲೋಕದಲ್ಲಿ ರಾಕ್ಷಸಿಯರಾದ ಸ್ತ್ರೀಯರಿದ್ದಾರೆ. ಅವರು ನನ್ನನ್ನು ತಿನ್ನುವುದಕ್ಕೋಸ್ಕರ ಬಂದಿದ್ದಾರೆ." ಹೀಗೆ ತಿಳಿದು ನೀನು ಓಡಬೇಕು. ಮರಣಭಯದಿಂದ ನೀನು ಕ್ಷಣಕಾಲವೂ ಅಲ್ಲಿರಬೇಡ. ಯತಿಗಿದು ಉಪದೇಶ" ||೨೧||

**ಮಾಗಾಸ್ತ್ವಂ ಯುವತೀಗೃಹೇಷು ಸತತಂ ವಿಶ್ವಾಸತಾಂ ಸಂಶಯೋ**
**ವಿಶ್ವಾಸೇ ಜನವಾಚ್ಯತಾಂ ಭವತಿ ತೇ ನಶ್ಯೇತ್ಪುಮರ್ಥಂ ಹ್ಯತಃ ।**
**ಸ್ವಾಧ್ಯಾಯಾನುರತೋ ಗುರೂಕ್ತವಚನಂ ಶೀರ್ಷೇ**
**ಸಮಾರೋಪಯನ್**
**ತಿಷ್ಠ ತ್ವಂ ವಿಕೃತಿಂ ಪುನರ್ವ್ರಜಸಿ ಚೇದ್ಯಾಸಿ ತ್ವಮೇವ ಕ್ಷಯಂ ||೨೨||**

—"ಎಲೈ ಮುನಿಯೆ! ನೀನು ಯಾವಾಗಲೂ ಯುವತಿಯರ ಮನೆಗಳಲ್ಲಿ ವಿಶ್ವಾಸವನ್ನು ಮಾಡಬೇಡ. ಹಾಗೆ ವಿಶ್ವಾಸವನ್ನಿಟ್ಟರೆ ಜನರಿಗೆ ಸಂಶಯವಾಗಿ ನೀನು ನಿಂದೆಗೆ ಪಾತ್ರನಾಗುವೆ. ಅದರಿಂದ ನಿನ್ನ ಧರ್ಮಮೋಕ್ಷಪುರುಷಾರ್ಥವೆಲ್ಲವೂ ನಾಶವಾದೀತು. ಆದುದರಿಂದ ನೀನು ಗುರುವಚನವನ್ನು ಶಿರಸ್ಸಿನಲ್ಲಿ ಧರಿಸಿ ಶಾಸ್ತ್ರಾಧ್ಯಯನದಲ್ಲಿ ಆಸಕ್ತನಾಗಿರು. ಮತ್ತೆ ನೀನು ವಿಕಾರವನ್ನು ಹೊಂದಿದರೆ ನೀನೇ ನಾಶವನ್ನು ಹೊಂದುವೆ. ನಿನ್ನನ್ನು ಸಂಗದಿಂದ ತೆಗೆದುಹಾಕಿ ತಪೋಭ್ರಷ್ಟನನ್ನಾಗಿ ಮಾಡುವರೆಂದು ಭಾವವು." ||೨೩||

**ಕಿಂ ಸಂಸ್ಕಾರಶತೇನ ವಿಟ್ ಜಗತಿ ಭೋಃ ಕಾಶ್ಮೀರಜಂ ಜಾಯತೇ**
**ಕಿಂ ದೇಹಃ ಶುಚಿತಾಂ ವ್ರಜೇದನುದಿನಂ ಪ್ರಕ್ಷಾಲನಾದಂಭಸಾ ।**
**ಸಂಸ್ಕಾರೋನಖದಂತವಕ್ತ್ರವಪುಷಾಂ ಸಾಧೋ ತ್ವಯಾಯುಜ್ಯತೇ**
**ನಾಕಾಮೀ ಕಿಲ ಮಂಡನಪ್ರಿಯ ಇತಿ ತ್ವಂ ಸಾರ್ಥಕಂಮಾಕೃಥಾಃ**
**||೨೪||**

—"ಎಲೈ ಸಾಧುವೆ! ಲೋಕದಲ್ಲಿ ನೂರಾರು ಸಂಸ್ಕಾರದಿಂದಲೂ ಮಲವೇನು ಶ್ರೀಗಂಧವಾದೀತೇ? ಹಾಗೆಯೇ ದೇಹವನ್ನು ಪ್ರತಿದಿನದಲ್ಲೂ ನೀರಿನಿಂದ ತೊಳೆಯುತ್ತಿದ್ದರೂ ಅದು ಶುದ್ಧತ್ವವನ್ನು ಹೊಂದುವುದೇ? ಉಗುರು ಹಲ್ಲು ಮುಖ ದೇಹ ಇವುಗಳ ಸಂಸ್ಕಾರವನ್ನು ನೀನು ಮಾಡುತ್ತಿರುವೆ. ಆದುದರಿಂದ ನೀನು ಅಕಾಮಿಯಲ್ಲ-ಕಾಮಿ. ಹೀಗೆ ನೀನು ಅಲಂಕಾರಪ್ರಿಯನೆಂದು ಸಾರ್ಥಕತೆಯನ್ನು ಹೊಂದಬೇಡ. ಅಲಂಕಾರಪ್ರಿಯನಾಗಬೇಡವೆಂದು ಭಾವವು." ||೨೪||

**ವೃತ್ತೈರ್ವಿಂಶತಿಭಿಶ್ಚತುರ್ಭಿರಧಿಕೈಃ ಸಲ್ಲಕ್ಷಣೇನಾನ್ವಿತೈಃ**
**ಗ್ರಂಥಂ ಸಜ್ಜನಚಿತ್ತವಲ್ಲಭಮಿಮಂ ಶ್ರೀ ಮಲ್ಲಿಷೇಣೋದಿತಂ ।**
**ಶ್ರುತ್ವಾತ್ಮೇಂದ್ರಿಯಕುಂಜರಾನ್ ಸಮಟತೋ ರುಂಧಂತು ತೇ**
**ದುರ್ಜಯಾನ್**

**ವಿದ್ವಾಂಸೋ ವಿಷಯಾಟವೀಷು ಸತತಂ ಸಂಸಾರವಿಚ್ಛಿತ್ತಯೇ ॥೨೫॥**

—"ವಿದ್ವಾಂಸರು ಉತ್ತಮಲಕ್ಷಣಯುಕ್ತಗಳಾದ ಇಪ್ಪತ್ತೈದು ವೃತ್ತಗಳಿಂದ ಶ್ರೀ ಮಲ್ಲಿಷೇಣಾಚಾರ್ಯರು ಉಪದೇಶಿಸಿರುವ ಈ ಸಜ್ಜನಚಿತ್ತವಲ್ಲಭವೆಂಬ ಗ್ರಂಥವನ್ನು ಕೇಳಿ ಅವರು ಜಯಿಸುವುದಕ್ಕೆ ಕಠಿಣವೂ ವಿಷಯಗಳೆಂಬ ಅರಣ್ಯಗಳಲ್ಲಿ ಯಾವಾಗಲೂ ಸಂಚರಿಸುವುವೂ ಆದ ಆತ್ಮ ಮತ್ತು ಇಂದ್ರಿಯಗಳೆಂಬ ಆನೆಗಳನ್ನು ಭವವಿನಾಶಕ್ಕೋಸ್ಕರ ತಡೆದಿರಿಸಲಿ. ಆತ್ಮನನ್ನೂ ಇಂದ್ರಿಯಗಳನ್ನೂ ನಿಗ್ರಹಿಸಿದರೆ ಸಂಸಾರ ವಿನಾಶವಾಗುವುದೆಂದು ಭಾವವು." ॥೨೫॥

**ಶ್ರೀ ಮಲ್ಲಿಷೇಣಾಚಾರ್ಯ ವಿರಚಿತವಾದ ಸಜ್ಜನಚಿತ್ತವಲ್ಲಭವೂ**
**ಪಂಡಿತರತ್ನ ಮಹಾವಿದ್ವಾನ್ ಶ್ರೀ ಶಾಂತಿರಾಜಶಾಸ್ತ್ರಿ**
**ವಿರಚಿತವಾದ ಅದರ ಕರ್ಣಾಟಕ ಟೀಕೆಯೂ**
**ಸಮಾಪ್ತವಾಯಿತು.**

ಶ್ರೀ ವೀತರಾಗಾಯ ನಮಃ

# ಅಕಲಂಕದೇವನ ಚರಿತ್ರೆ

ಪೂರ್ವದಲ್ಲಿ "ಖೇಟ" ವೆಂಬ ನಗರದೊಳಗೆ ಶುಭತುಂಗನೆಂಬ ಅರಸನು ರಾಜ್ಯವಾಳುತ್ತಿದ್ದನು. ಅವನಲ್ಲಿ ಪುರುಷೋತ್ತಮನೆಂಬ ಪ್ರಸಿದ್ಧ ಪ್ರಧಾನನಿದ್ದನು. ಅವನು ಪದ್ಮಾವತಿಯೆಂಬ ಪತ್ನಿಯೊಡನೆ ಗೃಹಸ್ಥಾಶ್ರಮವನ್ನು ಕಳೆಯುವಾಗ ಪುಣ್ಯೋದಯದಿಂದ ಅಕಲಂಕ ಮತ್ತು ನಿಷ್ಕಲಂಕರೆಂಬ ಸುಪುತ್ರರ ಜನ್ಮವನ್ನು ಕಂಡನು. ಪುರುಷೋತ್ತಮನು ತನ್ನ ಹೆಸರಿಗೆ ತಕ್ಕಂತೆ ಪುರುಷಶ್ರೇಷ್ಠನೇ ಇದ್ದುದರಿಂದ ಅವನಿಗೆ ದೇವರಂತೆ ಪೂಜ್ಯರಾದ ಪುತ್ರರರ ಅಪೂರ್ವಲಾಭವಾಯಿತು. ಈತನು ಮಹಾಸಮ್ಯಕ್ತ್ವವ್ರತಾಚರಣವುಳ್ಳವನಾಗಿದ್ದನು. ಒಮ್ಮೆ ಅವನು ನಂದೀಶ್ವರ ಪರ್ವದ ಮಹಾ ಅಷ್ಟಮಿಗೆ ತನ್ನ ಪ್ರಿಯಪತ್ನಿಯಾದ ಪದ್ಮಾವತಿ ಸಹಿತ ಜಿನಮಂದಿರಕ್ಕೆ ಹೋಗಿ, ಅಲ್ಲಿ ಚಿತ್ರಗುಪ್ತ ಮುನಿಯಿಂದ ಇಬ್ಬರೂ ಅಷ್ಟದಿನಗಳ ಬ್ರಹ್ಮಚರ್ಯವ್ರತವನ್ನು ತಕ್ಕೊಂಡರು. ಆಗ ತಮ್ಮ ಸಂಗಡ ಬಂದಿದ್ದ ಅಕಲಂಕ ಮತ್ತು ನಿಷ್ಕಲಂಕರೆಂಬ ತಮ್ಮ ಪ್ರೀತಿಯ ಪುತ್ರರಿಗೂ ವಿನೋದಕ್ಕಾಗಿ ಆ ವ್ರತವನ್ನು ಕೊಡಿಸಿದರು. ಮುಂದೆ ಕೆಲಕಾಲದ ಮೇಲೆ ಪುರುಷೋತ್ತಮನು ತನ್ನ ಪುತ್ರರಿಗೆ ವಿವಾಹ ಮಾಡುವದಕ್ಕೆ ಉದ್ಯುಕ್ತನಾಗಲು, ಆ ಬಾಲಕರು ಆಶ್ಚರ್ಯವುಳ್ಳವರಾಗಿ ನುಡಿದದ್ದೇನಂದರೆ,

"ಅಯ್ಯಾ, ನೀವೇ ಮೊದಲು ನಮ್ಮಿಬ್ಬರಿಗೂ ಬ್ರಹ್ಮಚರ್ಯವ್ರತವನ್ನು ಕೊಡಿಸಿದ್ದು, ಪುನಃ ಈಗ ನಮ್ಮ ಲಗ್ನ ಮಾಡುವ ಹವ್ಯಾಸಕ್ಕೆ ಯಾಕೆ ಹೋಗುತ್ತೀರಿ ?" ಎಂದು ಪ್ರಶ್ನೆ ಮಾಡಿದರು. ಆಗ ತಂದೆಯು, "ಮಕ್ಕಳಿರಾ, ನಿಮಗೆ ಬ್ರಹ್ಮಚರ್ಯವ್ರತವನ್ನು ಕೇವಲ ವಿನೋದ ಕ್ಕಾಗಿ ಕೊಡಿಸಿತ್ತು ಮತ್ತು ಅದಾದರೂ ಎಂಟು ದಿವಸದ್ದೇ ಇತ್ತು." ಎಂದು ಸಮಾಧಾನ ಹೇಳಲು, ಅವರು ಪುನಃ ಅಂದದ್ದು, "ಧರ್ಮ ಮತ್ತು ವ್ರತಾಚರಣೆಯಲ್ಲಿ ಚೇಷ್ಟೆ ಯಾತರದು ? ಮತ್ತು ಹಿಡಿದಂಥ ವ್ರತವನ್ನು ಕಡೆತನಕ ಒಯ್ಯುವದಕ್ಕೆ ಅಡ್ಡಿಯಾದರೂ ಏನು ? ಇದ ಲ್ಲದೆ ವ್ರತವನ್ನು ಕೊಡುವಾಗ ಅವಧಿಯಾದರೂ ಎಲ್ಲಿ ನಿಯಮಿಸಲ್ಪ- ಟ್ಟಿತ್ತು ? ಇದು ಹಾಗಿರಲಿ, ನಮಗೆ ಅಸಾರವಾದ ವಿಷಯಸುಖದ ಇಚ್ಛೆಯೂ ಇರುವದಿಲ್ಲ." ಈ ಪ್ರಕಾರ ಸ್ಪಷ್ಟ ಹಾಗೂ ಉದಾತ್ತ ವಿಚಾರದ ಭಾಷಣದಿಂದ ತಂದೆಯನ್ನು ಸಂತುಷ್ಟಪಡಿಸಿ, ಅವರು ಬ್ರಹ್ಮಚರ್ಯವ್ರತದಿಂದಲೇ ಇದ್ದು, ಉತ್ತಮ ರೀತಿಯಿಂದ ಶಾಸ್ತ್ರಾ ಭ್ಯಾಸವನ್ನು ಮಾಡಿದರು.

ಆ ಕಾಲಕ್ಕೆ ಬೌದ್ಧಧರ್ಮದ ಪ್ರಾಬಲ್ಯವು ವಿಶೇಷವಿತ್ತು. ಬೌದ್ಧ ಪಂಡಿತರು ಅನೇಕ ರಾಜರನ್ನು ತಮ್ಮ ಭಕ್ತರನ್ನಾಗಿ ಮಾಡಿ ಕೊಂಡಿದ್ದರು. "ರಾಜನಿಗೆ ಸೇರುವಂಥ ಧರ್ಮವು ಪ್ರಜೆಗಳಿಗಾದರೂ ಸೇರುವದು ಸಹಜವದೆ." ಆದ್ದರಿಂದ ಈ ಧರ್ಮದವರ ಸಂಖ್ಯೆಯು ಅತೀತವಾಗಲಿಕ್ಕೆ ಕಾರಣವಾಗಿತ್ತು. ಆಗ ಧರ್ಮವತ್ಸಲ ಮತ್ತು ಮಹಾಪರೋಪಕಾರಿಗಳಾದ ಆ ಉಭಯ ಬಂಧುಗಳ ಮನಸ್ಸಿನಲ್ಲಿ ಉದ್ಭವಿಸಿದ ವಿಚಾರವೇನಂದರೆ, "ನಾವು ಮೊದಲು ಬೌದ್ಧ ಶಾಸ್ತ್ರದ ಅಭ್ಯಾಸ ಮಾಡಿ, ಆ ಮತದ ತತ್ತ್ವಗಳನ್ನು ಚನ್ನಾಗಿ ತಿಳಕೊಳ್ಳಲಿಕ್ಕೆ ಬೇಕು; ಆ ಮೇಲೆ ಆ ಧರ್ಮಾಭಿಮಾನಿಗಳಾದ ಪಂಡಿತರೊಡನೆ

ಒಳ್ಳೇ ರೀತಿಯಿಂದ ವಾದವಿವಾದವನ್ನು ಮಾಡಿ, ಅವರನ್ನು ಪರಾಭವ ಮಾಡಲಿಕ್ಕೆ ಬೇಕು; ಹಾಗೂ ಜನರಿಗೆ ಜೈನಧರ್ಮೋಪದೇಶವನ್ನು ಮಾಡಿ, 'ಜೈನಂ ಜಯತಿ ಶಾಸನಂ' ಎಂಬದನ್ನು ಪ್ರತಿಯೊಬ್ಬರ ಅನುಭವಕ್ಕೆ ತಂದುಕೊಡಬೇಕು."

ಖೇಟಾನಗರದಲ್ಲಿ ಬೌದ್ಧಶಾಸ್ತ್ರವನ್ನು ಚನ್ನಾಗಿ ಬಲ್ಲವನು ಒಬ್ಬನೂ ಇದ್ದಿಲ್ಲ ಆದ್ದರಿಂದ ಅವರು ಬೌದ್ಧಧರ್ಮಾಲಯಕ್ಕೆ ತಿಳಿಯ ದಂತೆ, ಬೌದ್ಧಶಿಷ್ಯರ ವೇಷದಿಂದ ಹೋದರು. ಅವರಲ್ಲಿ ಅಕಲಂಕನು 'ಏಕಸಂಸ್ಥ'ನೂ (ಬೇಕಾದ ಕಠಿಣ ಶಾಸ್ತ್ರವನ್ನಾದರೂ ಒಮ್ಮೆ ಕೇಳಿದ ಮಾತ್ರವೇ ಪೂರ್ಣ ಲಕ್ಷದಲ್ಲಿಡುವವನು), ನಿಷ್ಕಲಂಕನು 'ದ್ವಿಸಂಸ್ಥ' ನೂ ಆಗಿದ್ದರು. ಆದ್ದರಿಂದ ಅವರಿಬ್ಬರು ಬಹುಬೇಗ ಘನಪಂಡಿತ ರಾದರು.

ಒಮ್ಮೆ ಬೌದ್ಧಗುರುವು ಜೈನಶಾಸ್ತ್ರದೊಳಗಿನ "ಸಪ್ತಭಂಗೀ" ಮಹಾವಾಕ್ಯದ ವ್ಯಾಖ್ಯಾನವನ್ನು ಮಾಡುತ್ತಿದ್ದಾಗ, ಆ ಪುಸ್ತಕದಲ್ಲಿ ಎಲ್ಲಿಯೋ ಅಶುದ್ಧ ಪಾಠ ಇದ್ದುದರಿಂದ, ಅದರ ಅರ್ಥವು ನೆಟ್ಟಗೆ ಹತ್ತಲಿಲ್ಲ; ಅದರಿಂದ ಅವರು ವ್ಯಾಖ್ಯಾನ ಮಾಡುವದನ್ನು ಕಟ್ಟು-ಮಾಡಿ, ಹೊರಗೆ ತಿರುಗಾಡಲಿಕ್ಕೆ ಹೋದರು. ಅಷ್ಟರಲ್ಲಿಯೇ ಅಕ ಲಂಕನು ಯಾರಿಗೂ ತಿಳಿಯದಂತೆ ಆ ವಾಕ್ಯವನ್ನು ಚನ್ನಾಗಿ ಪರೀಕ್ಷಿಸಿ, ಇರತಕ್ಕ ರೀತಿಯಲ್ಲಿ ಅದನ್ನು ಇರಿಸಿದನು. ಕೆಲವು ಹೊತ್ತಿನ ಮೇಲೆ ಗುರುವು ಬಂದು ನೋಡಲು, ಯಾವನೋ ಮಹಾವಿದ್ವಾನನಿಂದ ಆ ವಾಕ್ಯವು ಶುದ್ಧಮಾಡಲ್ಪಟ್ಟಿರುತ್ತದೆಂಬದನ್ನು ಕಂಡುಕೊಂಡನು. ಆಗ ಯಾವನಾದರೊಬ್ಬ ಮಹಾದುಷ್ಟಬುದ್ಧಿಯ ಹಾಗೂ ಧೂರ್ತ ಜೈನ ಮಹಾಪಂಡಿತನು ನಮ್ಮ ಮತವನ್ನು ಧ್ವಂಸಮಾಡುವ ಬುದ್ಧಿ ಯಿಂದ ಬೌದ್ಧಶಿಷ್ಯನ ವೇಷವನ್ನು ಹಾಕಿಕೊಂಡು, ಇಲ್ಲಿಗೆ ಕಲಿಯುವ

ದಕ್ಕಾಗಿ ಬಂದಿರಬಹುದೆಂಬ ಶಂಕೆಯು ಅವನ ಮನದಲ್ಲಿ ಬಂದಿತು. ಹಾಗಾದರೆ, ಈ ಸರ್ವ ವಿದ್ಯಾರ್ಥಿಗಳೊಳಗಿಂದ ಆತನನ್ನು ಗೊತ್ತು-ಹಚ್ಚಿ, ರಾಜಾಜ್ಞೆಯಿಂದ ಆತನನ್ನು ಜಗತ್ತಿನಲ್ಲಿಯೇ ಇಲ್ಲದಂತೆ ಮಾಡಬೇಕೆಂದು ಯೋಚಿಸಿ, ಅಲ್ಲಿಯ ಸರ್ವ ಶಿಷ್ಯರನ್ನು ಆಣೆ ಮುಂತಾದ ಉಪಾಯಗಳಿಂದ ಶೋಧಮಾಡಲಿಕ್ಕೆ ಹತ್ತಿದನು. ಆದರೂ ಆ ಉಭಯ ಬಂಧುಗಳು ತಮ್ಮ ಧರ್ಮವನ್ನು ತಿಳಿಯಗೊಡಲಿಲ್ಲ. ಕಟ್ಟಕಡೆಗೆ ಗುರುವು ಜಿನಪ್ರತಿಬಿಂಬವನ್ನು ಉಲ್ಲಂಘನ ಮಾಡುವ ಉಪಾಯವನ್ನು ಹುಡುಕಿದನು. ಆಗ ಬೌದ್ಧ ಶಿಷ್ಯರೆಲ್ಲ ನಿಃಶಂಕೆಯಿಂದ ಉಲ್ಲಂಘನವನ್ನು ಮಾಡಿದರು ಮತ್ತು ಅವರಿಬ್ಬರಾದರೂ ಯಾರಿಗೂ ತಿಳಿಯದಂತೆ ಮೂರ್ತಿಯ ಮೇಲೆ ನೂಲೆಳೆಯನ್ನು ಹಾಕಿ, "ಈ ಪ್ರತಿಮೆಯು ವಸ್ತ್ರದಿಂದ ಆಚ್ಛಾದಿಸಲ್ಪಟ್ಟಿದೆ." ಎಂಬ ಮನಸ್ಸಿನ ಕಲ್ಪನೆಯಿಂದ ಉಲ್ಲಂಘನವನ್ನು ಮಾಡಿದರು. ಈ ಮರ್ಮವು ಆ ಜಡಬುದ್ಧಿಯ ಗುರುವಿಗೆ ತಿಳಿಯಲಿಲ್ಲ. ಆದ್ದರಿಂದ ಅವರಲ್ಲಿ ಜೈನರು ಯಾರೆಂಬದನ್ನು ತಿಳಿಯುವದು ಅಸಾಧ್ಯವಾಯಿತು.

ಕಟ್ಟಕಡೆಗೆ ಅವನು ಒಂದು ರಾತ್ರಿ ಸರ್ವಶಿಷ್ಯರಿಗೆ ಗಾಢನಿದ್ರೆ ಹತ್ತಿದ್ದನ್ನು ಕಂಡು, ಪ್ರತಿಯೊಬ್ಬನ ಹತ್ತರ ಒಬ್ಬೊಬ್ಬ ಸೇವಕನನ್ನು ಕೂಡ್ರಿಸಿ, ಕಂಚಿನ ಪಾತ್ರೆಗಳನ್ನು ಕಲ್ಲಮೇಲೆ ಅಪ್ಪಳಿಸಿ, ಗುಡುಗಿನಂತೆ ಖಡಖಡಾಟ ಸಪ್ಪಳವನ್ನು ಮಾಡಿಸಿದನು. ಆದರಿಂದ ಎಲ್ಲರೂ ಒಮ್ಮೆಗೇ ಎಚ್ಚತ್ತು, ನಿದ್ದೆಗಣ್ಣಿನಲ್ಲಿ ಭೀತಿಗೊಂಡು, ಬೌದ್ಧ ಶಿಷ್ಯರು ಬುದ್ಧದೇವನ ನಾಮವನ್ನು ಉಚ್ಚರಿಸಿದರು. ಜಿನಭಕ್ತರಾದ ಆ ಉಭಯತರು, "ಣಮೋ ಅರಹಂತಾಣಂ" ಎಂಬ ಮಂತ್ರಘೋಷವನ್ನು ಮಾಡಿದರು. ಆಗ ಅವರೇ ಇಬ್ಬರು ಜೈನರೆಂದು ಗೊತ್ತಾಗಿ, ರಾಜ-ಸೇವಕರಿಂದ ರಾಜನ ಹತ್ತರ ಒಯ್ಯಲ್ಪಟ್ಟರು. ಅಲ್ಲಿ ಧರ್ಮಾಚಾರ್ಯರ

ಹೇಳಿಕೆಯ ಮೇಲಿಂದ ಅರಸನು, "ಈ ಉಭಯ ಧರ್ಮಶತ್ರುಗಳನ್ನು ಬಿಕ್ಕಟ್ಟಿನ ಸ್ಥಳದಲ್ಲಿ ಒಯ್ಯಿರಿ ಮತ್ತು ರಾತ್ರಿಯಾದ ಮೇಲೆ ಅಲ್ಲಿಯೇ ಇವರನ್ನು ಕೊಲ್ಲಿರಿ." ಎಂದು ಆಜ್ಞಾಪಿಸಿದನು. ಅದರಂತೆ ಸೇವಕರು ಅವರನ್ನು ಘೋರವಾದ ಸ್ಥಳದಲ್ಲಿ ಒಯ್ದಿಟ್ಟರು.

ಮಧ್ಯರಾತ್ರಿಯ ಸುಮಾರಕ್ಕೆ ಹತ್ತರ ಯಾರೂ ಇಲ್ಲದ ಸಂಧಿಯನ್ನು ಸಾಧಿಸಿ, ನಿಷ್ಕಲಂಕನು ಅಕಲಂಕನಿಗೆ ಅಂದದ್ದು, "ಅಣ್ಣಾ, ಇಂದು ನಾವು ಕೊಲ್ಲಲ್ಪಟ್ಟರೂ ಸಹ ಆ ಬಗ್ಗೆ ಸ್ವಲ್ಪಾದರೂ ದುಃಖಿಸುವ ಕಾರಣವಿಲ್ಲ. ಆದರೆ ನಾವು ಇಷ್ಟು ಪರಿಶ್ರಮದಿಂದ ಜ್ಞಾನ ಸಂಪಾದನೆ ಮಾಡಿದರೂ ಅದರಿಂದ ಜೈನಶಾಸನದ ಉಪಕಾರವು ಈ ಜಗತ್ತಿನ ಮೇಲೆ ಏನೂ ಆಗಲಿಲ್ಲ. ಇದರಿಂದ ಮಾತ್ರ ಬಹಳೇ ವ್ಯಸನ ಪಡಬೇಕಾಗಿದೆ." ಎಂದನು. ಆಗ ಅಕಲಂಕನು ಧೈರ್ಯದಿಂದ, "ತಮ್ಮಾ, ನೀನು ಈ ಸಂಕಟಕ್ಕೆ ಸ್ವಲ್ಪಾದರೂ ಅಂಜಕೂಡದು. ನಾವಿಬ್ಬರೂ ಈ ಛತ್ರಿಕೆಯನ್ನು ಕೈಯಲ್ಲಿ ತಕ್ಕೊಂಡು, ಅದಕ್ಕೆ ಮರೆಯಾಗಿ, ಮೆಲ್ಲಗೆ ಕೆಳಗಿಳಿದು, ಇಲ್ಲಿಂದ ಯಾರಿಗೂ ತಿಳಿಯದಂತೆ ಓಡಿಹೋಗೋಣ." ಎಂದು ಹಂಚಿಕೆ ಮಾಡಿ, ಅಲ್ಲಿಂದ ಪಾರಾದರು. ಕೆಲಹೊತ್ತಿನ ಮೇಲೆ ಸೇವಕರು ಬಂದು ನೋಡುತ್ತಾರೆ. ಅಲ್ಲಿ ಯಾರೂ ಇದ್ದಿಲ್ಲ. ಸುತ್ತುಮುತ್ತಿನ ಕೆರೆ, ಬಾವಿ, ಗಿಡಗಂಟಿ ಮುಂತಾದ ಸ್ಥಳಗಳಲ್ಲಿ ಶೋಧಮಾಡಿದರೂ ವ್ಯರ್ಥವೇ ಆಯಿತು. ಬಳಿಕ ಅವರು ಎಲ್ಲಿಯಾದರೂ ಓಡಿಹೋಗುತ್ತಿರಬಹುದೆಂದು ತಿಳಿದು, ಆ ನಿರ್ದಯ ಸೇವಕರು ಒಂದು ಮಾರ್ಗ ಹಿಡಿದು, ಕುದುರೆಯ ಮೇಲೆ ಕುಳಿತು ಬಹು ವೇಗದಿಂದ ನಡೆದರು. ದುಃಖದ ಸಂಗತಿಯೇನಂದರೆ, ದುರ್ದೈವದಿಂದ ಅಕಲಂಕ ನಿಷ್ಕಲಂಕರು ಅದೇ ದಾರಿಯಿಂದಲೇ ಮುಂದೆ ಹೋಗಿದ್ದರು. ಹೋಗುವಾಗ ಭಯದಿಂದ ತಿರುತಿರುಗಿ

ನೋಡುತ್ತಿರಲು, ದೂರಿಂದ ಧೂಳ ಹಾರುವದನ್ನು ಕಂಡರು. ಕೂಡಲೇ ಬದುಕುವ ಆಶೆಯನ್ನು ಬಿಟ್ಟು, ನಿಷ್ಕಲಂಕನು ಅಕಲಂಕನಿಗೆ ಅಂದದ್ದು, "ಅಣ್ಣಾ, ಈಗ ನಾವಿಬ್ಬರೂ ಸಾಯುವದು ನಿಶ್ಚಯವು. ಆದ್ದರಿಂದ ನೀನು ಈ ಸಮೀಪದ ಕೆರೆಯಲ್ಲಿ ಮುಳುಗಿ ಕೂಡ್ರು; ಅಂದರೆ ನೀನೊಬ್ಬನಾದರೂ ಬದುಕುವಿ. ನೀನು ನನಗಿಂತ ವಿದ್ವಾಂಸನಿದ್ದು, ನಿನ್ನಿಂದ ನಿಜವಾಗಿ ಜಿನಧರ್ಮದ ಪ್ರಸಾರವಾಗುವದರಲ್ಲಿ ಸಂದೇಹವಿಲ್ಲ." ಇದನ್ನು ಕೇಳಿ ಅಕಲಂಕನು ಕೇವಲ ಜಿನಧರ್ಮದ ಉದ್ಧಾರಾರ್ಥವಾಗಿಯೇ ಉಳುಕೊಳ್ಳುವ ಆಶೆಯಿಂದ, ತನ್ನ ಪ್ರೀತಿಯ ಬಂಧುವಿನೊಬ್ಬನನ್ನೇ ಕಾಲನ ಬಾಯಲ್ಲಿ ಕೊಟ್ಟು, ತಾನು ಸಮೀಪದ ಕೆರೆಯಲ್ಲಿ ಕಮಲಪತ್ರದ ಕೆಳಗೆ ಮಹಾಮಂತ್ರವನ್ನು ಜಪಿಸುತ್ತ ಕೂತನು. ಇದೆಂಥ ಧರ್ಮಭಕ್ತಿಯು !

ನಿಷ್ಕಲಂಕನಿಗೆ ಬದುಕುವ ಆಶೆ ಇಲ್ಲದಿದ್ದರೂ, ಅವನು ಬಂದೇ ಸನನೇ ಓಡಹತ್ತಿದನು. ಮುಂದೆ ಸ್ವಲ್ಪ ದೂರ ಹೋದ ಮೇಲೆ ಒಂದು ಕೆರೆಯಲ್ಲಿ ವಸ್ತ್ರಗಳನ್ನು ಒಗೆಯುತ್ತಲಿದ್ದ ಒಬ್ಬ ಅಗಸನು, ಅವನಿಗೆ ಓಡುವ ಕಾರಣವನ್ನು ವಿಚಾರಿಸಿದನು ಮತ್ತು ನಿಷ್ಕಲಂಕನಿಂದ, "ಶತ್ರುಸೇನೆಯು ಮನಬಂದಂತೆ ಸಿಕ್ಕಸಿಕ್ಕವರನ್ನು ಕೊಲ್ಲುತ್ತ ಬರುತ್ತದೆ." ಎಂಬ ಉತ್ತರವನ್ನು ಕೇಳಿದಮಾತ್ರದಿಂದಲೇ ತಾನೂ ಅವನೊಡನೆ ಓಡತೊಡಗಿದನು. ಇನ್ನೂ ದೂರಸಹ ಹೋಗಿದ್ದಿಲ್ಲ, ಅಷ್ಟರಲ್ಲಿಯೇ ನಿರ್ದಯಾಳುಗಳಾದ ಕೊಲೆಗಡಕರು ತೀರ ಸಮೀಪಕ್ಕೆ ಬಂದು ಕ್ರೋಧದ ಆವೇಶದಲ್ಲಿ ಏನೂ ವಿಚಾರ ಮಾಡದೆ, ಒಮ್ಮೆಗೇ ಆ ಉಭಯತರ ಶಿರಚ್ಛೇದವನ್ನು ಮಾಡಿ, ತಿರುಗಿ ನಗರಕ್ಕೆ ತೆರಳಿದರು. ಆ ಮೇಲೆ ಅಕಲಂಕನು ಕಮಲಪತ್ರದೊಳಗಿಂದ ಹೊರಬಿದ್ದು, ತಿರುಗಿ ತನ್ನ ಊರಿಗೆ ಹೋಗದೆ, ಮೊದಲೇ ಗೊತ್ತುಮಾಡಿದಂತೆ ಧರ್ಮೋಪ

ದೇಶದ ಸಲುವಾಗಿ ದೇಶದೇಶಗಳನ್ನು ತಿರುಗಹತ್ತಿದನು. ಅವನ ವಿದ್ಯಾಮಯವಾದ ದಿವ್ಯ ಮೂರ್ತಿಯನ್ನೂ, ಕೇವಲ ಪರೋಪಕಾರಾರ್ಥವಾಗಿ ಆನಂದದಿಂದ ಅನುಭೋಗಿಸುತ್ತಲಿರುವ ಅವಿಶ್ರಾಂತ ಶ್ರಮವನ್ನೂ ಕಂಡು, ಎಷ್ಟೋ ಜನರು ಅವನಿಗೆ 'ದೇವ' ಎಂದು ತಿಳಿಯಹತ್ತಿದರು. ಅವನ ಸುತ್ತಲೂ ಅಸಂಖ್ಯ ಶಿಷ್ಯವರ್ಗವು ನೆರೆಯಿತು. ಅವರೊಡನೆ ಆತನು ಅನೇಕ ದೇಶಗಳನ್ನು ವಿಹರಿಸುತ್ತಿರುವಾಗ, ಒಮ್ಮೆ ಕಾಂಚಿದೇಶದ 'ರತ್ನಸಂಚಯ' ಪಟ್ಟಣದ ಸಮೀಪದಲ್ಲಿದ್ದ ಉಪವನದಲ್ಲಿ ಇಳುಕೊಂಡನು. ಅಲ್ಲಿ ಹಿಮಸೀತಲನೆಂಬ ಅರಸನು ರಾಜ್ಯವಾಳುತ್ತಿದ್ದನು. ಅವನು ಬುದ್ಧನ ಭಕ್ತನಾಗಿದ್ದರೂ, ಅವನ ಪ್ರಿಯದೇವಿಯಾದ ಮದನಸುಂದರಿ ಎಂಬುವಳು ಜಿನಭಕ್ತಿಪರಾಯಣಳಾಗಿದ್ದಳು.

ಈ ಅಕಲಂಕದೇವನು ಆ ನಗರದ ಉದ್ಯಾನದಲ್ಲಿ ಇಳುಕೊಂಡಿರುವಾಗ, ನಂದೀಶ್ವರ ಫಾಲ್ಗುಣ ಅಷ್ಟಾಹ್ನಿಕಪರ್ವದ ಅಷ್ಟಮಿಗೆ ಮದನಸುಂದರಿ ದೇವಿಯು ಪಟ್ಟಣದಲ್ಲಿ ಜಿನೇಶ್ವರನ ರಥಯಾತ್ರೆಯನ್ನು ಆರಂಭಿಸಿದ್ದಳು. ಆ ಮಹೋತ್ಸವಕ್ಕೆ ರಾಜಗುರುವಾದ ಸಂಘಶ್ರೀ ಬುದ್ಧನಿಂದ ಪ್ರತಿಬಂಧವಾಯಿತು. ಮತ್ತು ಆತನು ಜೈನ ಮುನಿಗಳಿಗೆ, "ವಾದದಿಂದ ಸಂಘಶ್ರೀಯನ್ನು ಜಯಿಸಿ, ರಥಯಾತ್ರೆಯನ್ನು ಮಾಡಬೇಕು." ಎಂಬವಾಗಿ ಪತ್ರದ್ವಾರದಿಂದ ಪ್ರಸಿದ್ಧ ಮಾಡಿದನು. ಆಗ ಮದನಸುಂದರಿ ದೇವಿಯು ಚಿಂತಾಕ್ರಾಂತಳಾಗಿ, ಜಿನಮಂದಿರವನ್ನು ಪ್ರವೇಶಿಸಿದಳು. ಅಲ್ಲಿ ರಾಜಗುರುವಿನೊಡನೆ ವಾದಮಾಡುವಂಥ ಮುನಿಗಳನ್ನು ಕಾಣದೆ ನಿರುಪಾಯಳಾಗಿ, "ರಥಯಾತ್ರೆಯು ನಿರ್ವಿಘ್ನವಾಗಿ ಕಡೆಹಾಯುವ ತನಕ ನಾನು ಅನ್ನೋದಕವನ್ನು ತೆಗೆದುಕೊಳ್ಳಲಿಕ್ಕಿಲ್ಲ." ಎಂಬ ಘೋರ ಪ್ರತಿಜ್ಞೆಯಿಂದ ಮಹಾಮಂತ್ರವನ್ನು ಜಪಿ

ಸುತ್ತ ಜಿನನೆದುರಿಗೆ ನಿಂತುಕೊಂಡಳು. ಅದೇ ದಿನ ರಾತ್ರಿ ಚಕ್ರೇಶ್ವರೀ ದೇವಿಯ ಆಸನವು ಕಂಪಾಯಮಾನವಾಗಿ, ಅವಳು ಅಲ್ಲಿಗೆ ಬಂದು ಮದನಸುಂದರಿಯನ್ನು ಕುರಿತು, "ಎಲೇ ಮದನಸುಂದರೀ, ನೀನು ವ್ಯಸನಪಡಬೇಡ; ಪ್ರಾತಃಕಾಲಕ್ಕೆ ಅಕಲಂಕದೇವನು ಇಲ್ಲಿಗೆ ಬರತಕ್ಕವನಿದ್ದಾನೆ. ಅವನು ಧರ್ಮಸಂಬಂಧದ ನಿನ್ನ ಸರ್ವಮನೋರಥವನ್ನು ಸಂಪೂರ್ಣ ಮಾಡುವನು." ಎಂದು ನುಡಿದಳು. ಆಗ ಮದನಸುಂದರಿಯು ಆನಂದದಿಂದ ಪ್ರಾತಃಕಾಲಕ್ಕೆ ಜಿನನಿಗೆ ಅಭಿಷೇಕವನ್ನು ಮಾಡಿ, ಊರ ಹೊರಗೆ ನಾಲ್ಕೂ ದಿಕ್ಕಿಗೆ ಅಕಲಂಕನ ಶೋಧಾರ್ಥವಾಗಿ ಅನೇಕ ಸಭ್ಯಗೃಹಸ್ಥರನ್ನು ಕಳಿಸಿದಳು. ಅದರಲ್ಲಿ ಪೂರ್ವದಿಕ್ಕಿಗೆ ಹೋದವರಿಗೆ ಆ ದೇವನ ದರ್ಶನವಾಯಿತು. ಈ ವರ್ತಮಾನವು ಮದನಸುಂದರಿದೇವಿಗೆ ತಿಳಿಯಲು ಆನಂದಭರಿತಳಾಗಿ, ಅಕಲಂಕನನ್ನು ಸನ್ಮಾನ ಮಾಡಿ, ಮಹೋತ್ಸವದಿಂದ ಆತನನ್ನು ಜಿನಮಂದಿರಕ್ಕೆ ಕರೆತಂದಳು.

ಅಕಲಂಕದೇವನು ಅಲ್ಲಿಗೆ ಬಂದ ದಿವಸವೇ ರಾಜಸಭೆಯಲ್ಲಿ ಸಂಘಶ್ರೀಯೊಡನೆ ವಾದ ಮಾಡಿ, ಆತನ ವಿದ್ಯಾಗರ್ವವನ್ನು ನಾಶ ಮಾಡಿದನು. ಆಗ ಸಂಘಶ್ರೀಯು ಅತ್ಯಂತ ದುಃಖಿತನಾಗಿ, 'ತಾರಾ' ಎಂಬ ಬುದ್ಧದೇವಿಯ ಆರಾಧನೆಯನ್ನು ಆರಂಭಿಸಿದನು. ಕಡೆಗೆ ದೇವಿಯು ಪ್ರಸನ್ನಳಾಗಿ, "ನಾನು ರಾಜಸಭೆಯಲ್ಲಿ ಪಡದೆಯ ಹಿಂದೆ ಕುಂಭದಲ್ಲಿ ಕುಳಿತು ವಾದ ಮಾಡಿ ಶತ್ರುವನ್ನು ಗೆಲ್ಲುವೆನು." ಎಂಬ ಅಭಯವಚನವನ್ನು ಕೊಟ್ಟಳು. ಬಳಿಕ ಸಂಘಶ್ರೀಯು, ಆ ದಿವಸ ಆನಂದದಿಂದ ರಾಜಸಭೆಗೆ ಹೋಗಿ, ಪಡದೆಯ ಹಿಂದೆ ಕುಂಭದಲ್ಲಿ ತಾರಾದೇವಿಯನ್ನು ಸ್ಥಾಪಿಸಿ, "ನಾನು ಪಡದೆಯಲ್ಲಿ ಕುಳಿತು ವಾದ

ಮಾಡುತ್ತೇನೆ." ಎಂದು ಹೇಳಿ ಒಳಗೆ ಹೋದನು. ಅಕಲಂಕನು ಅವ ನೊಡನೆ ಪುನಃ ಆರು ತಿಂಗಳ ತನಕ ಬಹು ಚಾತುರ್ಯದಿಂದ ವಾದ ಮಾಡಿದನು. ಪಡದೆಯೊಳಗಿಂದ ಹೊರಬೀಳುವ ಪ್ರಶ್ನೆಗಳ ಖಂಡನೆ ಯಾಗಿ, ಜೈನಶಾಸನದ ವಿಜಯವು ಯಾವಾಗಲೂ ಆಗುತ್ತಲೇ ಇತ್ತು. ಪಡದೆಯಲ್ಲಿ ತಾರಾದೇವಿಯು ಇದ್ದದ್ದು ಅಕಲಂಕದೇವನಿಗೆ ಗೊತ್ತಿ-ಲ್ಲದ್ದರಿಂದ, ಅವನಿಗೆ ಬಹಳೇ ಆಶ್ಚರ್ಯವಾಯಿತು. "ಒಂದು ಕ್ಷಣ ಸಹ ನನ್ನೆದುರಿಗೆ ಮಾತಾಡಲಿಕ್ಕೆ ಸಮರ್ಥನಿಲ್ಲದ ಈ ಸಂಘಶ್ರೀಯು ನನ್ನೊಡನೆ ಆರು ತಿಂಗಳಗಳ ವರೆಗೆ ಒಂದೇಸವನೆ ವಾದವನ್ನು ಹೇಗೆ ಮಾಡುತ್ತಿದ್ದಾನು!" ಎಂಬ ವಿಚಾರದಲ್ಲಿ ಮಗ್ನನಾದನು. ಆದರೆ ಅದೇ ದಿವಸ ರಾತ್ರಿ ಚಕ್ರೇಶ್ವರೀದೇವಿಯು ಪ್ರತ್ಯಕ್ಷವಾಗಿ ಅವನನ್ನು ಕುರಿತು, "ಹೇ ಅಕಲಂಕದೇವಾ, ನಿನ್ನೊಡನೆ ವಾದ ಮಾಡುವವನು ಸಂಘಶ್ರೀಯಲ್ಲ; ಪಡದೆಯಲ್ಲಿ ಕುಂಭದೊಳಗೆ ಬೌದ್ಧರ ತಾರಾ ದೇವಿಯ ಸ್ಥಾಪನೆಯಾಗಿದ್ದು, ಅವಳೇ ನಿನಗೆ ಪ್ರಶ್ನೆ ಮಾಡುತ್ತಾಳೆ. ಕಾರಣ ನಾಳೆ ಪ್ರಶ್ನೆಯು ಮಾಡಲ್ಪಟ್ಟ ಕೂಡಲೇ, "ಅದೇ ವಾಕ್ಯವನ್ನು ಪುನಃ ಹೇಳಲಿಕ್ಕೆ ಹೇಳು;" ಅಂದರೆ ಅವಳು ಏನೂ ಮಾತಾಡದೆ ನಿರುತ್ತರಳಾಗುವಳು. ಯಾಕಂದರೆ ದೇವತೆಗಳು ಒಮ್ಮೆ ಆಡಿದ ವಾಕ್ಯವನ್ನು ಪುನಃ ಉಚ್ಚರಿಸಲಿಕ್ಕೆ ಅಸಮರ್ಥರಿರುತ್ತಾರೆ.

ಪ್ರಾತಃಕಾಲಕ್ಕೆ ಅಕಲಂಕದೇವನು ದಿನದಂತೆ ರಾಜಸಭೆಗೆ ಹೋಗಿ, ಅರಸನೆದುರಿಗೆ ಸರ್ವಬೌದ್ಧರಿಗೆ ಹೇಳಿದ್ದು, "ಇಂದಿನವರೆಗೆ ನಾನು ಕೇವಲ ಜಿನಶಾಸನದ ಮಹಿಮೆಯನ್ನು ತೋರಿಸುವದಕ್ಕಾಗಿ ವಾದಮಾಡಿದೆನು. ಇಂದು ಮಾತ್ರ ನಾನು ಈ ವಾದವನ್ನು ಮುಗಿಸು ತ್ತೇನೆ." ಇಷ್ಟು ಮಾತಾಡುವಷ್ಟರಲ್ಲಿಯೇ ಪಡದೆಯೊಳಗಿಂದ ಪ್ರಶ್ನೆಯು ಕೇಳಬಂತು. ಅಕಲಂಕದೇವನ ಲಕ್ಷವಾದರೂ ಅತ್ತೇ

ಇದ್ದುದರಿಂದ, ಆತನು ಕೂಡಲೇ ಚಕ್ರೇಶ್ವರೀದೇವಿಯ ಹೇಳಿಕೆಯನ್ನು ನೆನಪಿಗೆ ತಂದು, "ಈಗ ಅಂದಂಥ ವಾಕ್ಯವನ್ನು ಇನ್ನೊಮ್ಮೆ ಅನ್ನು." ಎಂದನು. ಆಗ ಅವಳು ನಿರುತ್ತರಳಾದಳು. ತನ್ನ ಪ್ರಶ್ನೆಗೆ ಉತ್ತರ ಸಿಗದ್ದರಿಂದ ಅಕಲಂಕನು ಪಡದೆಯನ್ನು ಹೊಕ್ಕು, ಅಲ್ಲಿದ್ದ ಕುಂಭವನ್ನು ಕಾಲಿನಿಂದ ಒದ್ದು ಒಡೆದು ಹಾಕಲು, ಅದರೊಳಗಿದ್ದ ತಾರಾದೇವಿಯು ಓಡಿಹೋದಳು.

ಬಳಿಕ ಬೌದ್ಧರು ಅಕಲಂಕದೇವನೊಡನೆ ವಾದ ಮಾಡುವದಕ್ಕೆ ಅಸಮರ್ಥರಾದರು. ಕಾರಣ ಹಿಮಶೀತಲರಾಜನು ಅವರನ್ನು ಹದ್ದು-ಪಾರು ಮಾಡಲು, ಅವರು ಲಂಕೆಯ ಕಡೆಗೆ ಹೋದರು.* ಅಕಲಂಕದೇವನ ದಿವ್ಯ ಉಪದೇಶದಿಂದ ಹಿಮಶೀತಲರಾಜನು ಉತ್ಕೃಷ್ಟ ಜಿನಭಕ್ತನಾದನು. ಮದನಸುಂದರಿಯಿಂದ ಆರಂಭಿಸಲ್ಪಟ್ಟ ಜಿನನ ರಥಯಾತ್ರೆಯ ಮಹೋತ್ಸವವು ವಿಘ್ನವಿಲ್ಲದೆ ಕೊನೆಗಂಡಿತು. ಈ ಪ್ರಕಾರ ಅಕಲಂಕದೇವನು ಅನೇಕ ಸ್ಥಳಗಳಲ್ಲಿ ಧರ್ಮಪ್ರಭಾವನೆಯನ್ನು ಮಾಡಿದನು. ಇವರು ಕೆಲವು ವರುಷ ಸಿದ್ಧಾಪುರದಲ್ಲಿ ದೇಶೀಯ ಗಣದ ಭಟ್ಟಾರಕ ಮುನಿಯಾಗಿದ್ದರೆಂತಲೂ ತನ್ನ ಗೃಹವನ್ನು ಬಿಟ್ಟು ಬೌದ್ಧ ಶಾಸ್ತ್ರದ ಅಭ್ಯಾಸಕ್ಕಾಗಿ, 'ಪೊಂತಗ' ದೊಳಗಿನ ಬೌದ್ಧ ಕಾಲೇಜದಲ್ಲಿ ಹೋಗಿ ನಿಂತಿದ್ದರೆಂತಲೂ, ರೈಸ ಸಾಹೇಬರಿಂದ

---

* ಈ ಮಾತು ಇ. ಸ. ೭೫೫ ರಲ್ಲಿ ಸಂಭವಿಸಿತು. ಇದಕ್ಕಿಂತ ಮೊದಲು ಬೌದ್ಧರು ಬನಾರಸದಿಂದ ಕಾಂಚೀ ದೇಶದಲ್ಲಿ ಇ. ಸ. ೩ ನೇ ಶತಮಾನದಲ್ಲಿ ಬಂದಿದ್ದರು. ಅಂದರೆ ಕಾಂಚೀ ದೇಶದಲ್ಲಿ ಸತತ ೫೦೦ ವರುಷ ಬೌದ್ಧಧರ್ಮವು ನಡೆದಿತ್ತು. ಅಕಲಂಕನು ಅದನ್ನು ಸಂಪೂರ್ಣವಾಗಿ ನಾಶಮಾಡಿದನು. ಇದರಿಂದ ಅಕಲಂಕನ ಜ್ಞಾನವೈಭವ ಹ್ಯಾಗಿತ್ತೆಂಬುವದು ವಾಚಕರಿಗೆ ಸಹಜ ತಿಳಿಯುತ್ತದೆ.

ಬರೆಯಲ್ಪಟ್ಟ, ಶ್ರವಣಬೆಳಗುಳದ ಶಿಲಾಲೇಖ ಪುಸ್ತಕದ ಪ್ರಸ್ತಾವನೆಯಿಂದ ತಿಳಿಯುತ್ತದೆ.

ಶ್ರೀಕ್ಷೇತ್ರ ಶ್ರವಣಬೆಳಗುಳದೊಳಗಿನ ಪ್ರತಿಯೊಂದು ಜಿನ ಮಂದಿರದಲ್ಲಿ ಶಿಲಾಲೇಖಗಳು ಅವೆ. ಅವುಗಳಲ್ಲಿ ನಮ್ಮ ಪ್ರಾಚೀನ ಆಚಾರ್ಯರ ಗುರುಕುಲ ಪರಂಪರೆಯು ವರ್ಣಿಸಲ್ಪಟ್ಟಿದೆ. ಅದರಲ್ಲಿ ಅಕಲಂಕದೇವನ ಜ್ಞಾನಮಹಾತ್ಮ್ಯವನ್ನು ವರ್ಣಿಸುವಾಗ, ಅಕಲಂಕನಿಂದ 'ಸಾಹಸತುಂಗ' ರಾಜನ ಸಭೆಯಲ್ಲಿ ಅಂದಂಥ ಈ ಕೆಳಗಿನ ಎರಡು ಶ್ಲೋಕಗಳು ಬರೆಯಲ್ಪಟ್ಟಿವೆ. ಅವು:—

**ರಾಜನ್ ಸಾಹಸತುಂಗ ಸಂತಿ ಬಹವಃ ಶ್ವೇತಾತಪತ್ರಾ ನೃಪಾಃ ।**
**ಕಿಂತು ತ್ವತ್ಸದೃಶಾ ರಣೇ ವಿಜಯಿನಸ್ತ್ಯಾಗೋನ್ನತಾ ದುರ್ಲಭಾಃ ॥**
**ತದ್ವತ್ಸಂತಿ ಬುಧಾ ನ ಸಂತಿ ಕವಯೋ ವಾದೀಶ್ವರಾ ವಾಗ್ಮಿನೋ ।**
**ನಾನಾಶಾಸ್ತ್ರವಿಚಾರಚಾತುರಧಿಯಃ ಕಾಲೇ ಕಲೌ ಮದ್ವಿಧಾಃ ॥೧॥**

**ರಾಜನ್ ಸರ್ವಾರಿದರ್ಪಪ್ರವಿದಳನಪಟುಸ್ತ್ವಂ ಯಥಾತ್ರ ಪ್ರಸಿದ್ಧ- ।**
**ಸ್ತದ್ವತ್ಖ್ಯಾತೋಽಹಮಸ್ಯಾಂ ಭುವಿ ನಿಖಿಲಮದೋತ್ಪಾಟನೇ**
**ಪಂಡಿತಾನಾಂ ॥**
**ನೋಚೇದೇಷೋಽಹಮೇತೇ ತವ ಸದಸಿ ಸದಾ ಸಂತಿ ಸಂತೋ**
**ಮಹಂತೋ ॥**
**ವಕ್ತುಂ ಯಸ್ಯಾಸ್ತಿ ಶಕ್ತಿಃ ಸ ವದತು ವಿದಿತಾಶೇಷಶಾಸ್ತ್ರೋ**
**ಯದಿ ಸ್ಯಾತ್ ॥೨॥**

**ತಾತ್ಪರ್ಯ:**—"ಎಲೈ ಸಾಹಸತುಂಗರಾಜನೇ, ಶ್ವೇತಚ್ಛತ್ರವನ್ನು ಧಾರಣ ಮಾಡುವ ಅರಸರು ಬಹು ಜನರಿದ್ದಾರೆ. ಆದರೆ ನಿನ್ನಂತೆ ರಣದಲ್ಲಿ ಜಯವನ್ನು ಹೊಂದುವಂಥ ಮತ್ತು ದಾನಶೂರನಾದಂಥ ರಾಜನು ಹ್ಯಾಗೆ ದುರ್ಲಭವೋ, ಹಾಗೆಯೇ ಈ ಕಲಿಯುಗದಲ್ಲಿ ಬಹುಜನರು ಪಂಡಿತರಿದ್ದಾರೆ. ಆದರೆ ನನ್ನಂತೆ ಮನೋರಂಜಕ

ಹಾಗೂ ಸ್ಪಷ್ಟ ಭಾಷಣ ಮಾಡಿ, ವಾದದಲ್ಲಿ ಜಯವನ್ನು ಪಡೆಯು ವಂಥ ಮತ್ತು ನಾನಾಶಾಸ್ತ್ರದ ವಿಚಾರದಲ್ಲಿ ಚತುರನಾದಂಥ ಪಂಡಿತನು ದುರ್ಲಭ. ಶತ್ರುಗಳ ಗರ್ವವನ್ನು ಪರಿಹಾರ ಮಾಡುವ ವಿಷಯದಲ್ಲಿ ನಿನ್ನಂತೆಯೇ ನನ್ನದಾದರೂ ಖ್ಯಾತಿ ಅದೆ."

ಈ ಪ್ರಕಾರ ಅಕಲಂಕದೇವನ ಚರಿತ್ರೆಯನ್ನು ಸಾಧ್ಯವಾದ ಮಟ್ಟಿಗೆ ಬರೆದದೆ. ಇದು ಅತಿ ಸಂಕ್ಷಿಪ್ತವಾಗಿದ್ದರೂ, ಮಂಗಲಮಯ ಮತ್ತು ಬೋಧಪ್ರದವಿದ್ದು, ವಾಚಕರ ಮನಸ್ಸನ್ನು ಪವಿತ್ರ ಮಾಡು ವದರಲ್ಲಿ ಸಂದೇಹವಿಲ್ಲ.

---

## ಅಥ ಅಕಲಂಕ ಸ್ತೋತ್ರ

**ತ್ರೈಲೋಕ್ಯಂ ಸಕಲಂ ತ್ರಿಕಾಲವಿಷಯಂ ಸಾಲೋಕಮಾಲೋಕಿತಂ।**
**ಸಾಕ್ಷಾದ್ಯೇನ ಯಥಾ ಸ್ವಯಂ ಕರತಲೇ ರೇಖಾತ್ರಯಂ ಸಾಂಗುಲಿ ॥**
**ರಾಗದ್ವೇಷಭಯಾಮಯಾಂತಕಜರಾಲೋಲತ್ವಲೋಭಾದಯೋ ।**
**ನಾಲಂ ಯತ್ಪದಲಂಘನಾಯ ಸ ಮಹಾದೇವೋ ಮಯಾ ವಂದ್ಯತೇ ॥೧॥**

—"ನಾವು ನಮ್ಮ ಅಂಗೈಯೊಳಗಿನ ಮುಖ್ಯ ಮೂರು ರೇಖೆಗಳನ್ನು ಹೇಗೆ ಅಂಗುಲಿ ಸಹಿತ ಸ್ಪಷ್ಟ ಹಾಗೂ ಸಹಜವಾಗಿ ನೋಡಲಿಕ್ಕೆ ಸಮರ್ಥರಾಗಿರುವೆವೋ, ಹಾಗೆಯೇ ತ್ರಿಕಾಲಸಂಬಂಧ ತ್ರಿಲೋಕದ ಸ್ವರೂಪವನ್ನು ಅಲೋಕಸಹಿತ (ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಕಾಲ ಈ ಪಂಚದ್ರವ್ಯಗಳು ನಿರಂತರವಾಗಿರುವದು 'ಲೋಕ' ಮತ್ತು ಇವುಗಳಲ್ಲಿ ಒಂದೂ ದ್ರವ್ಯ ಇಲ್ಲದ್ದೇ 'ಅಲೋಕ') ಸಂಪೂರ್ಣ ನೋಡಲಿಕ್ಕೆ ಯಾವಾತನು ಶಕ್ತನಾಗಿದ್ದಾನೆ; ಮತ್ತು ರಾಗ ಅಂದರೆ

ವಿಷಯದ ಇಚ್ಛೆ, ದ್ವೇಷ, ಭಯ, ರೋಗ, ಮರಣ, ವೃದ್ಧತ್ವ, ವಿಷಯ ಲಂಪಟತ್ವ ಮತ್ತು ಲೋಭ ಇತ್ಯಾದಿ ದೋಷಗಳು ಯಾವಾತನ ಆಜ್ಞೆಯನ್ನು ಮೀರುವದಕ್ಕೆ ಅಸಮರ್ಥವಾಗಿರುವವು; ಅರ್ಥಾತ್ ಯಾವಾತನು ಸರ್ವದೋಷರಹಿತನಾಗಿದ್ದಾನೆ; ಅಂಥ ಸರ್ವಜ್ಞ ವೀತರಾಗನಾದ ಮಹಾದೇವನೇ ನನ್ನಿಂದ ಪೂಜಿಸಲ್ಪಡುತ್ತಾನೆ."

**ದಗ್ಧಂ ಯೇನ ಪುರತ್ರಯಂ ಶರಭುವಾ ತೀವ್ರಾರ್ಚಿಷಾ ವಹ್ನಿನಾ ।**
**ಯೋ ವಾ ನೃತ್ಯತಿ ಮತ್ತವತ್ಪಿತೃವನೇ ಯಸ್ಯಾತ್ಮಜೋ ವಾ ಗುಹಃ ॥**
**ಸೋಽಯಂ ಕಿಂ ಮಮ ಶಂಕರೋ ಭಯತೃಷಾರೋಷಾರ್ತಿ-**
**ಮೋಹಕ್ಷಯಂ ।**
**ಕೃತ್ವಾ ಯಃ ಸ ತು ಸರ್ವವಿತ್ತನುಭೃತಾಂ ಕ್ಷೇಮಂಕರಃ ಶಂಕರಃ ॥೨॥**

—"ಮಯನೆಂಬ ದೈತ್ಯನು ರಾಕ್ಷಸರ ವಸತಿಗಾಗಿ ಆಕಾಶ, ವಾಯು, ಪೃಥ್ವಿ ಈ ಮೂರು ಸ್ಥಳಗಳಲ್ಲಿ ಬಂಗಾರ, ಬೆಳ್ಳಿ, ಕಬ್ಬಿಣ ಈ ಮೂರು ಪದಾರ್ಥಗಳಿಂದ ನಿರ್ಮಿಸಿದ ಮೂರು ಪಟ್ಟಣಗಳನ್ನು, ಶಂಕರನು ದೇವತೆಗಳ ಮೊರೆ ಕೇಳಿ, ಬಾಣದಿಂದ ಹೊರಬೀಳುವ ತೀಕ್ಷ್ಣಜ್ವಾಲೆಯ ಅಗ್ನಿಯಿಂದ ಸುಟ್ಟು ಬೂದಿ ಮಾಡಿದನು; ಹಾಗೂ ಸ್ಮಶಾನಭೂಮಿಯಲ್ಲಿ ಹುಚ್ಚು ಹಿಡಿದವನಂತೆ ಕುಣಿಯುವನು; ಮತ್ತು ಅಕೃತ್ಯವನ್ನು ಮಾಡುವ ಗುಹನೆಂಬ ಮಗನಿಗೆ ತಂದೆಯಾಗಿದ್ದಾನೆ. ಇಂಥ ಮೂರ್ಖ ಮತ್ತು ಪುತ್ರಾದಿಗಳ ಮೋಹದಲ್ಲಿ ಸಿಕ್ಕಂಥ ಶಂಕರನು ನನಗೆ ಕಲ್ಯಾಣಕಾರಿಯಾಗಬಹುದೋ ? (ಎಂದಿಗೂ ಆಗಲಾರನು.) ಆದರೆ ಭಯ, ವಿಷಯಭೋಗದ ಉತ್ಕಟವಾದ ಇಚ್ಛಾ, ಕ್ರೋಧ, ವ್ಯಾಕುಲತೆ ಮತ್ತು ಮೋಹ ಇತ್ಯಾದಿ ದೋಷಗಳನ್ನು ಸಂಪೂರ್ಣವಾಗಿ ನಾಶಮಾಡಿ, ನಿರ್ದೋಷಿಯಾದ ಹಾಗೂ ಸರ್ವಜ್ಞನಾಗಿ ಸರ್ವ ಪ್ರಾಣಿಗಳ ಕಲ್ಯಾಣಕ್ಕೆ ಕಾರಣನಾದ ಜಿನನೇ ನನ್ನ ಶಂಕರನು."

**ಯತ್ನಾದ್ಯೇನ ವಿದಾರಿತಂ ಕರರುಹೈರ್ದೈತ್ಯೇಂದ್ರವಕ್ಷಃಸ್ಥಲಂ ।**
**ಸಾರಥ್ಯೇನ ಧನಂಜಯಸ್ಯ ಸಮರೇ ಯೋಽಮಾರಯತ್ಕೌರವಾನ್ ॥**
**ನಾಸೌ ವಿಷ್ಣುರನೇಕಕಾಲವಿಷಯಂ ಯಜ್ಜ್ಞಾನಮವ್ಯಾಹತಂ ।**
**ವಿಶ್ವಂ ವ್ಯಾಪ್ಯ ವಿಜೃಂಭತೇ ಸ ತು ಮಹಾವಿಷ್ಣುಃ ಸದೇಷ್ಟೋಽ ಮಮ ॥೩॥**

—"ಯಾವನು ನರಸಿಂಹಾವತಾರವನ್ನು ಧರಿಸಿ, ಪ್ರತ್ಯಕ್ಷ ಹಿರಣ್ಯ ಕಶ್ಯಪನೆಂಬ ದೈತ್ಯನ ವಕ್ಷಸ್ಥಲವನ್ನು ಹರಿದನು; ಯಾವನು ಕೌರವ ಪಾಂಡವರ ಯುದ್ಧದಲ್ಲಿ, ಪಾಂಡವರ ಪಕ್ಷಪಾತದಿಂದ ಅರ್ಜುನನಿಗೆ ಸಾರಥಿಯಾಗಿ, ಅವನಿಂದ ಕೌರವರನ್ನು ಕೊಲ್ಲಿಸಿದನು; ಅವನು ರಾಗ ದ್ವೇಷವುಳ್ಳವನಾದ್ದರಿಂದ ವಿಷ್ಣು ಅಲ್ಲ. ಆದರೆ ತ್ರಿಕಾಲದ ವೃತ್ತಾಂತ ವನ್ನು ಅರಿತು, ತನ್ನ ಜ್ಞಾನವನ್ನು ತ್ರಿಲೋಕದಲ್ಲಿ ಅಪ್ರತಿಬಂಧವಾಗಿ ಹಬ್ಬಿಸಿದಂಥ ಸರ್ವಜ್ಞವೀತರಾಗ ಮಹಾ ವಿಷ್ಣುವೇ ನನಗೆ ಸದಾ ಮಾನ್ಯನು."

**ಉರ್ವಶ್ಯಾಮುದಪಾದಿ ರಾಗಬಹುಲಂ ಚೇತೋ ಯದೀಯಂ ಪುನಃ ।**
**ಪಾತ್ರೀ ದಂಡಕಮಂಡಲುಪ್ರಭೃತಯೋ ಯಸ್ಯಾಕೃತಾರ್ಥಸ್ಥಿತಿಮ್ ॥**
**ಆವಿರ್ಭಾವಯಿತುಂ ಭವಂತಿ ಸ ಕಥಂ ಬ್ರಹ್ಮಾ ಭವೇನ್ಮಾದೃಶಾಂ ।**
**ಕ್ಷುತ್ತೃಷ್ಣಾಶ್ರಮರಾಗರೋಷರಹಿತೋ ಬ್ರಹ್ಮಾ ಕೃತಾರ್ಥೋಽಸ್ತು ನಃ ॥೪॥**

—"ಯಾವಾತನ ಮನಸ್ಸು ಉರ್ವಶೀ ಎಂಬ ಅಪ್ಸರಾಂಗನೆಯಲ್ಲಿ ಅತ್ಯಂತ ಆಸಕ್ತವಾಯಿತು; ಮತ್ತು ಯಾವಾತನು ಭಿಕ್ಷಾಪಾತ್ರೆ, ದಂಡ, ಕಮಂಡಲು ಮುಂತಾದ ಸಾಮಗ್ರಿಸಹಿತನಾದ್ದರಿಂದ, ಅಕೃತಾರ್ಥನೆಂಬುವದು ಸ್ಪಷ್ಟವಾಗುತ್ತದೆ; ಅಂಥ ಬ್ರಹ್ಮನು ನಮ್ಮಂಥವರಿಗೆ ಮಾನ್ಯನಲ್ಲ; ಆದರೆ ಹಸಿವೆ, ನೀರಡಿಕೆ, ಶ್ರಮ, ವಿಷಯವಾಸನೆ, ಕ್ರೋಧಾದಿ ದೋಷರಹಿತನಾಗಿ ಕೃತಾರ್ಥನೆಂದರೆ,

ಸರ್ವ ಶುಭಾಶುಭ ಕರ್ಮವನ್ನು ನಾಶ ಮಾಡಲಿಕ್ಕೆ ಸಮರ್ಥನಾದಂಥ ಬ್ರಹ್ಮನೇ ನಮಗೆ ಮಾನ್ಯನು."

**ಯೋ ಜಗ್ಧ್ವಾ ಪಿಶಿತಂ ಸಮತ್ಸ್ಯಕವಲಂ ಜೀವಂ ಚ ಶೂನ್ಯಂ ವದನ್ ।**
**ಕರ್ತಾ ಕರ್ಮಫಲಂ ನ ಭುಂಕ್ತೆ ಇತಿ ಯೋ ವಕ್ತಾ ಸ ಬುದ್ಧಃ ಕಥಂ ॥**
**ಯಜ್ಞಾನಂ ಕ್ಷಣವರ್ತಿ ವಸ್ತು ಸಕಲಂ ಜ್ಞಾತುಂ ನ ಶಕ್ತಂ ಸದಾ ।**
**ಯೋ ಜಾನನ್ಯುಗಪಜ್ಜಗತ್ರಯಮಿದಂ ಸಾಕ್ಷಾತ್ಸ ಬುದ್ಧೋ ಮಮ ॥೫॥**

—"ಮತ್ಸ್ಯಮಾಂಸಗಳನ್ನು ಭಕ್ಷಿಸುವಂಥ, ಜೀವವನ್ನು ಶೂನ್ಯವೆಂದು ತಿಳಿಯುವಂಥ ಕರ್ತಾ ಅಂದರೆ ಶುಭಾಶುಭ ಕರ್ಮವನ್ನು ಮಾಡುವವನಿದ್ದು, ಅದರ ಫಲವನ್ನು ತಾನು ಭೋಗಿಸುವದಿಲ್ಲೆಂದು ಭಾವಿಸುವಂಥ ಬುದ್ಧನು ತಿಳುವಳಿಕೆಯುಳ್ಳವನೆಂಬುವದು ಹ್ಯಾಗೆ? ಇದಲ್ಲದೆ ಯಾವನು ಕ್ಷಣಿಕ ಜ್ಞಾನದಿಂದ (ಜ್ಞಾನವು ಕ್ಷಣಕ್ಷಣಕ್ಕೆ ನಾಶವಾಗಿ ಹೊಸದಾಗಿ ಉತ್ಪನ್ನವಾಗುತ್ತದೆ ಮತ್ತು ಅದಾದರೂ ಮೊದಲಿನ ಜ್ಞಾನದಂತೆ ಪುನಃ ನಷ್ಟವಾಗುತ್ತದೆಂದು ಬುದ್ಧನು ಅಭಿಪ್ರಾಯಪಡುತ್ತಾನೆ.) ಸಮಸ್ತ ವಸ್ತುಗಳನ್ನು ತಿಳಿಯಲಿಕ್ಕೆ ಸಮರ್ಥನಾಗಿರುವದಿಲ್ಲವೋ, ಅವನು ಬುದ್ಧನೇ ಅಲ್ಲ. ಆದರೆ ಈ ತ್ರಿಲೋಕಗಳನ್ನು ಪ್ರತ್ಯಕ್ಷವಾಗಿ ಒಮ್ಮೆಲೇ ತಿಳಿಯುವಂಥ ನನ್ನ ಸರ್ವಜ್ಞ ವೀತರಾಗ ಜಿನೇಶ್ವರನೇ ಬುದ್ಧನು.

**ಈಶಃ ಕಿಂ ಛಿನ್ನಲಿಂಗೋ ಯದಿ ವಿಗತಭಯಃ ಶೂಲಪಾಣಿಃ ಕಥಂ ಸ್ಯಾತ್ ।**
**ನಾಥಃ ಕಿಂ ಭೈಕ್ಷ್ಯಚಾರೀ ಯತಿರಿತಿ ಸ ಕಥಂ ಸಾಂಗನಃ ಸಾತ್ಮಜಶ್ಚ ॥**
**ಆದ್ರಾಜಃ ಕಿಂತ್ವಜನ್ಮಾ ಸಕಲವಿದಿತಿ ಕಿಂ ವೇತ್ತಿ ನಾತ್ಮಾಂತರಾಯಂ ।**
**ಸಂಕ್ಷೇಪಾತ್ಸಮ್ಯಗುಕ್ತಂ ಪಶುಪತಿಮಪಶುಃ ಕೋತ್ರ ಧೀಮಾನುಪಾಸ್ತೇ ॥೬॥**

—"ಶಂಕರನು ಸರ್ವಜಗತ್ತಿನ ದೇವನಾಗಿದ್ದರೆ, ಆತನ ಲಿಂಗವು ಅನ್ಯರಿಂದ ಯಾಕೆ ಛೇದಿಸಲ್ಪಟ್ಟಿತು? ಆತನಿಗೆ ಯಾತರಿಂದಲೂ ಭಯವಿಲ್ಲದ ಮೇಲೆ ಕೈಯಲ್ಲಿ ತ್ರಿಶೂಲ ಯಾಕೆ? ಆತನು ನಮಗೆ ನಾಥ ಅಂದರೆ ಪ್ರಭು ಆಗಿರಲು ಭಿಕ್ಷಕ್ಕಾಗಿ ಮನೆ ಮನೆ ತಿರುಗುವ ಕಾರಣವೇನು? ಅವನು ಒಂದುವೇಳೆ ಯತಿಯಾಗಿದ್ದರೆ, ಅವನಿಗೆ ಜನ್ಮವಿಲ್ಲದ ಮೇಲೆ ಆತನು ಆರ್ದ್ರಾನಕ್ಷತ್ರದಿಂದ ಹ್ಯಾಗೆ ಜನ್ಮಿಸಿದನು? ಅವನು ಸರ್ವಜ್ಞನಿದ್ದಮೇಲೆ ತನಗೆ ಸಂಭವಿಸುವಂಥ ವಿಘ್ನಗಳನ್ನು ಯಾಕೆ ತಿಳಿಯಲಿಲ್ಲ? ಇಂಥ ವಿಚಿತ್ರ ಸ್ವರೂಪವುಳ್ಳ ಪಶುಪತಿಯು ಅಂದರೆ ಶಂಕರನ ಉಪಾಸನೆಯನ್ನು ಅಪಶುಮಯವಾದ ಈ ಜಗತ್ತಿನಲ್ಲಿ ಯಾವ ಬುದ್ಧಿವಂತನು ಮಾಡ್ಯಾನು? ಅರ್ಥಾತ್ ಅವನ ಉಪಾಸನೆಯನ್ನು ಮಾಡುವ ಮನುಷ್ಯನು ಪಶುವಿಗೆ ಸಮಾನನು. ಅಂತಲೇ ಆ ಶಂಕರನು ಪಶುಪತಿ ಎನಿಸಿಕೊಂಡಿರುತ್ತಾನೆ"

ಬ್ರಹ್ಮಾ ಚರ್ಮಾಕ್ಷಸೂತ್ರೀ ಸುರಯುವತಿರಸಾವೇಶವಿಭ್ರಾಂತ-
ಚೇತಾಃ ।
ಶಂಭುಃ ಖಟ್ವಾಂಗಧಾರೀ ಗಿರಿಪತಿತನಯಾಪಾಂಗಲೀಲಾನುವಿದ್ಧಃ ॥
ವಿಷ್ಣುಶ್ಚಕ್ರಾಧಿಪಃ ಸನ್ ದುಹಿತರಮಗಮದ್ಗೋಪನಾಥಸ್ಯ
ಮೋಹಾ- ।
ದರ್ಹನ್ವಿಧ್ವಸ್ತರಾಗೋ ಜಿತಸಕಲಭಯಃ ಕೋಽಯಮೇಷ್ವಾಪ್ತ-
ನಾಥಃ ।೭॥

—"ಚಿಗರಿಯ ಚರ್ಮ ಮತ್ತು ರುದ್ರಾಕ್ಷಿಯ ಮಾಲೆಗಳನ್ನು ಧರಿಸಿ ತಪ ಮಾಡುವಂಥ ಬ್ರಹ್ಮನು ದೇವಾಂಗನೆಯ ರಸದ ಆವೇಶದಲ್ಲಿ ಭ್ರಾಂತಚಿತ್ತನಾದನು; ಅಂದರೆ ಅವಳ ಹಾವಭಾವಾದಿ ವಿಲಾಸ ರಸವನ್ನು ಕಂಡು, ಅದರಲ್ಲಿಯೇ ನಿಮಗ್ನನಾಗಿ ತಪ ಮಾಡುವದನ್ನು ಮರೆತನು. ಖಟ್ವಾಂಗ (ಮನುಷ್ಯನ ತಲೆಯ ಕವಚವನ್ನು ತೆಗೆದು, ಮಧ್ಯದಲ್ಲಿ ಕಟ್ಟಿಗೆಯನ್ನು ಹಾಕಿ ಭಿಕ್ಷೆಗಾಗಿ ಮಾಡಿದ ಪಾತ್ರ) ವನ್ನು

ಧಾರಣ ಮಾಡಿದ ಶಂಭು, ಪಾರ್ವತಿಯು ಕಟಾಕ್ಷಬಾಣದಿಂದ ಗಾಯ ವುಳ್ಳವನಾದನು. ವಿಷ್ಣು ಅಂದರೆ ಭಗವಾನ್ ಶ್ರೀಕೃಷ್ಣನು ಚಕ್ರವರ್ತಿ ರಾಜನಿದ್ದು, ಯಃಕಶ್ಚಿತ್ ಗವಳಿಯ ಮಗಳಿಗೆ ಮರುಳಾದನು. ಆದರೆ ಪಾಪರಹಿತನಾದ ಜನನು ರಾಗದ್ವೇಷಾದಿಗಳನ್ನು ನಾಶಮಾಡಿ ನಿರ್ಭಯನಾದನು. ಅಂದಮೇಲೆ ಇವರೆಲ್ಲರಲ್ಲಿ ಆಪ್ತನಾಥ ಅಂದರೆ ನಿಜಪ್ರಭು ಅಥವಾ ಯಥಾರ್ಥ ಉಪದೇಶ ಮಾಡುವದರಲ್ಲಿ ಶ್ರೇಷ್ಠನು ಯಾರು ಎಂಬದರ ವಿಚಾರವನ್ನು ನೀವೇ ಮಾಡತಕ್ಕದ್ದು."

**ಏಕೋ ನೃತ್ಯತಿ ವಿಪ್ರಸಾರ್ಯ ಕಕುಭಃ ಚಕ್ರೇಸಹಸ್ರಂ ಭುಜಾ- ।**
**ನೇಕಃ ಶೇಷಭುಜಂಗಭೋಗಶಯನೇ ವ್ಯಾದಾಯ ನಿದ್ರಾಯತೇ ॥**
**ದ್ರಷ್ಟುಂ ಚಾರುತಿಲೋತ್ತಮಾಮುಖಮಗಾದೇಕಶ್ಚತುರ್ವಕ್ತ್ರತಾ. ।**
**ಮೇತೇ ಮುಕ್ತಿಪಥಂ ವದಂತಿ ವಿದುಷಾಮಿತ್ಯೇತದತ್ಯದ್ಭುತಮ್ ।೮।**

—"ತ್ರಿಮೂರ್ತಿಗಳಲ್ಲಿ ಮೊದಲನೆಯವನಾದ ಮಹಾದೇವನು ತನ್ನ ಸಾವಿರ ಭುಜಗಳನ್ನು ಚಾಚಿ ದಿಗ್ಮಂಡಲದಲ್ಲಿ ಕುಣಿಯುತ್ತಾನೆ. ಎರಡನೆಯವನಾದ ವಿಷ್ಣು ಶೇಷಸರ್ಪವನ್ನೇ ಶಯನಮಾಡಿ ನಿದ್ದೆ ಮಾಡುತ್ತಾನೆ. ಮೂರನೆಯವನಾದ ಬ್ರಹ್ಮನು ತಿಲೋತ್ತಮೆಯ ಸುಂದರವಾದ ಮುಖವನ್ನು ನೋಡುವದಕ್ಕಾಗಿ ಚತುರ್ಮುಖನಾಗಿದ್ದಾನೆ. ಇಂಥ ಮೂರ್ಖ, ಆಲಸಿ, ಅಥವಾ ನಿದ್ದೆಬಡಕ ಮತ್ತು ವಿಷಯಾಸಕ್ತರಾದವರಿಂದ ಮೋಕ್ಷದ ಉಪಾಯವನ್ನು ಕಲ್ಪಿಸುವದು ಆಶ್ಚರ್ಯವಲ್ಲವೇ ? ಈ ಬುದ್ಧಿವಂತರಿಂದ ಸನ್ಮಾರ್ಗೋಪದೇಶ ವುಂಟಾಗುವ ಬಗೆಯೇನು ?"

**ಯೋ ವಿಶ್ವಂ ವೇದ ವೇದ್ಯಂ ಜನನಜಲನಿಧೇರ್ಭಂಗಿನಃ ಪಾರದೃಶ್ವಾ।**
**ಪೌರ್ವಾಪರ್ಯಾವಿರುದ್ಧಂ ವಚನಮನುಪಮಂ ನಿಷ್ಕಲಂಕಂ**
**ಯದೀಯಂ ॥**

**ತಂ ವಂದೇ ಸಾಧುವಂದ್ಯಂ ಸಕಲಗುಣನಿಧಿಂ ಧ್ವಸ್ತದೋಷದ್ವಿಷಂತಂ।**
**ಬುದ್ಧಂ ವಾ ವರ್ಧಮಾನಂ ಶತದಲನಿಲಯಂ ಕೇಶವಂ ವಾ ಶಿವಂ ವಾ**
**॥೯॥**

—"ತಿಳಿಯಲಿಕ್ಕೆ ಯೋಗ್ಯವಾದಂಥ ಜಗತ್ತನ್ನೆಲ್ಲ ಯಾವನು ಚನ್ನಾಗಿ ತಿಳಿದಿದ್ದಾನೆ; ದುಃಖವೆಂಬ ಅನಂತ ತರಂಗಗಳುಳ್ಳ ಜನ್ಮವೆಂಬ ಸಮುದ್ರವನ್ನು ಯಾವನು ದಾಟಿದ್ದಾನೆ; ಅನ್ಯತ್ರ ಎಲ್ಲಿಯೂ ಕಂಡು ಬರದಂಥ ಯಾವಾತನ ಮಾತುಗಳು, ಪೂರ್ವಾಪರಸಂಗತಿಗೆ ವಿರೋಧ ಬಾರದಂತೆ ಇದ್ದುದರಿಂದ ನಿಷ್ಕಲಂಕನೆಂದು ನಿಶ್ಚಯಿಸಲ್ಪಟ್ಟಿದ್ದಾನೆ; ಯಾವನಿಂದ ದೋಷವೆಂಬ ವೈರಿಯು ನಾಶಮಾಡಲ್ಪಟ್ಟು, ಸಮಸ್ತ ಸದ್ಗುಣಗಳು ಸಂಗ್ರಹಿಸಲ್ಪಟ್ಟಿವೆ; ಹಾಗೂ ಇಂಥ ಸ್ವಂತ ಮತ್ತು ಪರೋಪಯೋಗಿ ಅನಂತ ಸದ್ಗುಣಗಳ ಮೂಲಕ ಯಾವನು ಸಾಧು-ಜನಗಳಿಗೆ ಸಹ ವಂದ್ಯನಾಗಿದ್ದಾನೆ; ಆತನು ಬುದ್ಧನಿರಲಿ, ವರ್ಧಮಾನನಿರಲಿ, ಬ್ರಹ್ಮನಿರಲಿ, ವಿಷ್ಣುನಿರಲಿ, ಹಾಗೂ ಶಿವನಿರಲಿ ಅಂಥ ದೇವನನ್ನೇ ನಾನು ವಂದಿಸುತ್ತೇನೆ"

**ಮಾಯಾ ನಾಸ್ತಿ ಜಟಾಕಪಾಲಮುಕುಟಂ ಚಂದ್ರೋ ನ ಮೂರ್ಧಾವಲೀ।**
**ಖಟ್ವಾಂಗಂ ನ ಚ ವಾಸುಕಿರ್ನ ಚ ಧನುಃ ಶೂಲಂ ನ ಚೋಗ್ರಂ ಮುಖಂ॥**
**ಕಾಮೋ ಯಸ್ಯ ನ ಕಾಮಿನೀ ನ ಚ ವೃಷೋ ಗೀತಂ ನ ನೃತ್ಯಂ ಪುನಃ।**
**ಸೋಽಸ್ಮಾನ್ಪಾತು ನಿರಂಜನೋ ಜಿನಪತಿಃ ಸರ್ವತ್ರ ಸೂಕ್ಷ್ಮಃ ಶಿವಃ**
**॥೧೦॥**

—"ಮಾಯಾರಹಿತ ಅಂದರೆ ಯಾವನು ಅನೇಕ ಪ್ರಕಾರದ ರೂಪಗಳನ್ನು ಧರಿಸುವದಿಲ್ಲ; ಜಟಾ, ಕಪಾಲ (ಭಿಕ್ಷಾಪಾತ್ರ), ಕಿರೀಟ, ಹಣೆಯಲ್ಲಿ ಚಂದ್ರ, ಕೊರಳಲ್ಲಿ ರುಂಡಮಾಲೆ, ಕೈಯಲ್ಲಿ ಖಟ್ವಾಂಗ,

ಸರ್ಪ, ಧನುಷ್ಯ ಹಾಗೂ ತ್ರಿಶೂಲ, ಭಯಂಕರವಾದ ಮುಖ, ಕಾಮ ವಿಕಾರ, ಕಾಮಿನೀ, ನಂದಿ, ಸಂಗೀತ ನೃತ್ಯಾದಿಗಳಲ್ಲಿ ಯಾವದೊಂದು ಉಪಾಧಿ ಇಲ್ಲದೆ, ಸೂಕ್ಷ್ಮ ಅಂದರೆ ಸರ್ವವ್ಯಾಪಕನಾಗಿ ಶಿವಪದತ್ವ ವನ್ನು ಹೊಂದಿದ ಹಾಗೂ ನಿರಂಜನನಾದ ಜಿನೇಶ್ವರನು ನಮ್ಮನ್ನು ರಕ್ಷಿಸಲಿ."

ಮು

**ಖಟ್ವಾಂಗಂ ನೈವ ಹಸ್ತೇ ನ ಚ ಹೃದಿ ರಚಿತಾ ಲಂಬತೇ ಹುಂಡಮಾಲಾ।**
**ಭಸ್ಮಾಂಗಂ ನೈವ ಶೂಲಂ ನ ಚ ಗಿರಿದುಹಿತಾ ನೈವ ಹಸ್ತೇ ಕಪಾಲಂ॥**
**ಚಂದ್ರಾರ್ಧಂ ನೈವ ಮೂರ್ಧನ್ಯಪಿ ವೃಷಗಮನಂ ನೈವ ಕಂಠೇ ಫಣೀಂದ್ರಃ ।**
**ತಂ ವಂದೇ ತ್ಯಕ್ತ ದೋಷಂ ಭವಭಯಮಥನಂ ಚೇಶ್ವರಂ ದೇವ ದೇವಂ ॥೧೧॥**

—"ಯಾವಾತನ ಕೈಯಲ್ಲಿ ಖಟ್ವಾಂಗವಿಲ್ಲ; ಹಾಗೂ ಕೊರಳಲ್ಲಿ ರುಂಡಮಾಲೆ, ಶರೀರಕ್ಕೆ ಭಸ್ಮ, ಕೈಯಲ್ಲಿ ತ್ರಿಶೂಲ, ಕಪಾಲಾದಿಗಳು, ಹತ್ತಿರ ಪಾರ್ವತಿ, ಮಸ್ತಕದಲ್ಲಿ ಅರ್ಧಚಂದ್ರ, ಕಂಠದಲ್ಲಿ ಮಹಾನಾಗ ಸರ್ಪ ಇರುವದಿಲ್ಲ; ಮತ್ತು ಯಾವಾತನು ಎತ್ತಿನ ಮೇಲೆ ಕುಳಿತು ಹೋಗುವದಿಲ್ಲ; ಇಂಥ ನಿರ್ದೋಷ ಹಾಗೂ ಸಂಸಾರ ಭೀತಿಯನ್ನು ನಿವಾರಣ ಮಾಡುವಂಥ ಸರ್ವ ದೇವಾಧಿದೇವ ಜಿನೇಶ್ವರನನ್ನು ನಾನು ವಂದಿಸುತ್ತೇನೆ."

**ನೋ ಬ್ರಹ್ಮಾಂಕಿತಭೂತಲಂ ನ ಚ ಹರೇಃ ಶಂಭೋರ್ನ ಮುದ್ರಾಂಕಿತಂ ।**
**ನೋ ಚಂದ್ರಾರ್ಕಕರಾಂಕಿತಂ ಸುರಪತೇರ್ವಜ್ರಾಂಕಿತಂ ನೈವ ಚ ॥**
**ಷಡ್ವಕ್ತ್ರಾಂಕಿತಬೌದ್ಧದೇವಹುತಭುಗ್ಯಕ್ಷೋರಗೈರ್ನಾಂಕಿತಂ ।**
**ನಗ್ನಂ ಪಶ್ಯತ ವಾದಿನೋ ಜಗದಿದಂ ಜೈನೇಂದ್ರ ಮುದ್ರಾಂಕಿತಂ ॥೧೨॥**

—"ಈ ಜಗತ್ತಿನ ಮೇಲೆ ಬ್ರಹ್ಮನ ಯಾವ ಚಿನ್ಹವೂ ಇಲ್ಲದ್ದರಿಂದ ಅದು ಅವನದಲ್ಲ; ಅದರಂತೆ ವಿಷ್ಣು, ಶಂಭು, ಚಂದ್ರ, ಸೂರ್ಯ,

ಷಣ್ಮುಖ, ಬೌದ್ಧದೇವ, ಅಗ್ನಿ, ಯಕ್ಷ ಮತ್ತು ಪಾತಾಳ ಇಂದ್ರಾದಿಗಳ ಯಾವ ಚಿನ್ಹವೂ ಇದರ ಮೇಲೆ ಇಲ್ಲದ್ದರಿಂದ, ಇದು ಇವರದೂ ಅಲ್ಲ; ಆದರೆ ವಾದಿಗಳೇ, ಈ ಜಗತ್ತು ಸ್ವಭಾವದಿಂದಲೇ ನಗ್ನ ಇದ್ದುದರಿಂದ, ಕೇವಲ ಜಿನೇಂದ್ರ ಮುದ್ರಾಂಕಿತವಾಗಿದೆ. ಆದ್ದರಿಂದ ಈ ಜಗತ್ತಿನ ಸ್ವಾಮಿ ಜಿನೇಂದ್ರನೇ ಸರಿ "

**ಮೌಂಜೀದಂಡಕಮಂಡಲುಪ್ರಭೃತಯೋ ನೋ ಲಾಂಛನಂ ಬ್ರಹ್ಮಣೋ |**
**ರುದ್ರಸ್ಯಾಪಿ ಜಟಾಕಪಾಲಮುಕುಟಂ ಕೌಪೀನಖಟ್ವಾಂಗನಾಃ ॥**
**ವಿಷ್ಣೋಶ್ಚಕ್ರಗದಾದಿಶಂಖಮತುಲಂ ಬುದ್ಧಸ್ಯ ರಕ್ತಾಂಬರಂ |**
**ನಗ್ನಂ ಪಶ್ಯತ ವಾದಿನೋ ಜಗದಿದಂ ಜೈನೇಂದ್ರ ಮುದ್ರಾಂಕಿತಂ ॥೧೩॥**

—"ಬ್ರಹ್ಮದೇವನ ಚಿನ್ಹಗಳಾದ ಯಜ್ಞೋಪವೀತ, ದಂಡ, ಕಮಂಡಲು ಇವುಗಳಲ್ಲಿ ಯಾವದೂ ಈ ಜಗತ್ತಿಗೆ ಇಲ್ಲ; ಅದರಂತೆ ಶಂಕರನ ಚಿನ್ಹಗಳಾದ ಜಟಾ, ಕಪಾಲ, ಕಿರೀಟ, ಕೌಪೀನ, ಸ್ತ್ರೀ, ಖಟ್ವಾದಿಗಳಲ್ಲಿ ಯಾವ ಚಿನ್ಹವೂ ಈ ಜಗತ್ತಿಗೆ ಇಲ್ಲ; ಮತ್ತು ವಿಷ್ಣುವಿನ ಚಿನ್ಹಗಳಾದ ಚಕ್ರ, ಗದಾ, ಶಂಖ ಹಾಗೂ ಬುದ್ಧನ ಚಿನ್ಹವಾದ ರಕ್ತಾಂಬರ (ಕೆಂಪುವಸ್ತ್ರ) ಇವುಗಳಲ್ಲಿ ಯಾವದೂ ಈ ಜಗತ್ತಿಗೆ ಇಲ್ಲ. ಅಂದಮೇಲೆ ವಾದಿಗಳೇ, ಈ ಜಗತ್ತು ನಗ್ನವಿದ್ದುದರಿಂದ, ಜಿನೇಂದ್ರನ ಮುದ್ರೆಯು ಮಾತ್ರ ಇದರ ಮೇಲೆ ಇದ್ದದ್ದನ್ನು ನೀವು ಪ್ರತ್ಯಕ್ಷ ನೋಡುತ್ತೀರಿ. ಅಂದಮೇಲೆ ಈ ಜಗತ್ತಿಗೆ ಸ್ವಾಮಿ ಯಾರಾಗಬಹುದೆಂಬುದನ್ನು ನೀವೇ ಹೇಳಿರಿ."

**ನಾಹಂಕಾರವಶೀಕೃತೇನ ಮನಸಾ ನ ದ್ವೇಷಿಣಾ ಕೇವಲಂ |**
**ನೈರಾತ್ಮ್ಯಂ ಪ್ರತಿಪದ್ಯ ನಶ್ಯತಿ ಜನೇ ಕಾರುಣ್ಯಬುಧ್ಯಾ ಮಯಾ ॥**
**ರಾಜ್ಞಃ ಶ್ರೀಹಿಮಶೀತಲಸ್ಯ ಸದಸಿ ಪ್ರಾಯೋ ವಿದಗ್ಧಾತ್ಮನೋ |**
**ಬೌದ್ಧೌಘಾನ್ಸಕಲಾನ್ವಿಜಿತ್ಯ ಸುಗತಃ ಪಾದೇನ ವಿಸ್ಫಾಲಿತಃ ।೧೪॥**

ನಷ್ಟಃ

—"ಅಕಲಂಕದೇವನು ಅನ್ನುವದೇನಂದರೆ:- ಅಹೋ ಜನಗಳೇ, ಈ ಹಿಮಶೀತಲರಾಜನ ಸಭೆಯಲ್ಲಿ ತಮ್ಮ ಪಾಂಡಿತ್ಯದ ವೃಥಾ ಅಭಿಮಾನವನ್ನು ಮೆರೆಯಿಸುವ ಈ ಬೌದ್ಧ ಸಂಘವನ್ನು ಗೆದ್ದು, 'ಸುಗತ' ನನ್ನು ಪಾದದಿಂದ ತಾಡನೆ ಮಾಡಿದೆನು. ನಾನು ಅಹಂಕಾರದ ವಶನಾಗಿ ಅಥವಾ ದ್ವೇಷದಿಂದ ಅವರನ್ನು ತಿರಸ್ಕರಿಸಲಿಲ್ಲ; ಆದರೆ ಅವರ ಉಪದೇಶದಿಂದ ನಾಸ್ತಿಕರಾಗಿ ನಾಶಹೊಂದುವಂಥ ಜನರ ವಿಷಯಕ್ಕೆ ನನಗೆ ಅಂತಃಕರಣ ಬಂದದ್ದರಿಂದ, ಕೇವಲ ಪರೋಪಕಾರದ ಬುದ್ಧಿಯಿಂದ, ಈ ಬುದ್ಧರನ್ನು ನಾನು ಪರಾಭವ ಮಾಡಿದ್ದೇನೆ."

**ಕಿಂ ವೌದ್ಧೋ ಭಗವಾನಮೇಯಮಹಿಮಾ ದೇವೋಽಕಲಂಕಃ ಕಲೌ ।**
**ಕಾಲೇ ಯೋ ಜನತಾಸು ಧರ್ಮನಿಹಿತೋ ದೇವೋಽಕಲಂಕೋ ಜಿನಃ ॥**
**ಯಸ್ಯ ಸ್ಫಾರವಿವೇಕಮುದ್ರಲಹರೀಜಾಲೇ ಪ್ರಮೇಯಾಕುಲಾ ।**
**ನಿರ್ಮಗ್ನಾ ತನುತೇತರಾಂ ಭಗವತೀ ತಾರಾ ಶಿರಃ ಕಂಪನಂ ॥೧೫॥**

—"ಅತ್ಯಂತ ವೃದ್ಧಿಯನ್ನು ಹೊಂದಿದಂಥ ಜಿನಧರ್ಮದ ವಿವೇಕವೆಂಬ ಸಮುದ್ರದ ತರಂಗಗಳ ಜಾಲದಲ್ಲಿ ಸಿಕ್ಕು, ಯಾವಳು ಅತಿ ಖಿನ್ನಳಾಗಿ ಭಯದಿಂದ ಗದಗದ ನಡುಗುತ್ತ ಕಾಣದಂತೆ ಆಗಿರುವಳು, ಅಂಥ ಬೌದ್ಧರಿಗೆ ಪೂಜ್ಯಳಾದ 'ತಾರಾ' ಎಂಬ ದೇವತೆಯು ವಂದ್ಯಳೋ, ಅಥವಾ ಯಾವಾತನು ಜನರನ್ನು ಉತ್ತಮ ಧರ್ಮಮಾರ್ಗಕ್ಕೆ ಹಚ್ಚಿದ್ದರಿಂದ, ಈ ಕಲಿಕಾಲದಲ್ಲಿ ಸಾಕ್ಷಾತ್ ನಿಷ್ಕಲಂಕನಾದ ಜಿನದೇವನಂತೆ ಇದ್ದಾನೆ; ಅಂಥ ಅಗಾಧ ಮಹಿಮೆಯುಳ್ಳ ಹಾಗೂ ಕಲಂಕರಹಿತನಾದ ಭಗವಾನ್ ಅಂದರೆ ಜ್ಞಾನವಂತ ಅಕಲಂಕದೇವನು ವಂದ್ಯನೋ ? ಎಂಬುದು ಸಹಜ ತಿಳಿಯುವಂತಿದೆ."

**ಸಾ ತಾರಾ ಖಲು ದೇವತಾ ಭಗವತೀಮನ್ಯಾಪಿ ಮನ್ಯಾಮಹೇ ।**
**ಷಣ್ಮಾಸಾವಧಿ ಜಾಡ್ಯಸಾಂಖ್ಯಹುತಭುಗ್ಭಟ್ಟಾಕಲಂಕಪ್ರಭೋಃ ।**

**ವಾಕ್ಕಲ್ಲೋಲ ಪರಶ್ಮರಾಭಿರಮತೇ ನೂನಂ ಮನೋಮಜ್ಜನ- |**
**ವ್ಯಾಪಾರಂ ಸಹತೇ ಸ್ಮ ವಿಸ್ಮಿತಮತಿಃ ಸಂತಾಡಿತೇತಸ್ತತಃ ||೧೬||**

—“ಆ ತಾರಾದೇವಿಯು “ಭಗವತೀಮನ್ಯಾ” ಅಂದರೆ ಜ್ಞಾನವಿಲ್ಲದೆ, ಜ್ಞಾನದ ಬಗ್ಗೆ ಅಭಿಮಾನವನ್ನು ಪಡುವವಳಾಗಿದ್ದರೂ, ಅವಳನ್ನು ನಾವು ಮನ್ನಿಸುತ್ತೇವೆ. ಯಾಕಂದರೆ, ಅವಳು ಜಡವಾದ ಸಾಂಖ್ಯ ಮತಕ್ಕೆ ಅಗ್ನಿಯೋಪಾದಿಯಲ್ಲಿದ್ದ ಭಟ್ಟಾಕಲಂಕದೇವನ ವಚನ ತರಂಗಗಳ ಪ್ರವಾಹದಲ್ಲಿ ಮುಳುಗಿ ಮುಳುಗಿ ಆರು ತಿಂಗಳಗಳ ವರೆಗೆ ಆಶ್ಚರ್ಯಚಕಿತಳಾಗಿ ಆಡಿದಳು; ಮತ್ತು ಕಡೆಗೆ ಅಕಲಂಕದೇವನ ಪಾದಪ್ರಹರದಿಂದ ಹೊಡೆಯಲ್ಪಟ್ಟಳು. ಅರ್ಥಾತ್ ಪವಿತ್ರಳಾದಳು. ಆದ್ದರಿಂದ ಅವಳಾದರೂ ಒಂದು ಕ್ಷಣಮಾತ್ರ ಮಾನ್ಯಳೇ ಸರಿ.”

— ಸಮಾಪ್ತ —

भगवान महावीर २५०० वां निर्वाण महोत्सव

परस्परोपग्रहो जीवानाम्